# ಪುಸ್ತಕ ಪ್ರಪಂಚ

ಜುಲೈ ೧೯೮೮



ನ. ಭದ್ರಯ್ಯ : ವಿಶೇಷ ಸಂಚಿಕೆ

# ಪುಸ್ತಕ ಪ್ರಪಂಚ
## ಮಾಸಿಕ

8·2·೮೮



## ಪರಿವಿಡಿ



ಸಂಪುಟ: ೪೨ ಸಂಚಿಕೆ—೧೨

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 86. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು -570 004

# ಅಜ್ಞಾತ ಮಹಾತ್ಮ

ಕುವೆಂಪು

ನನ್ನ ಜೀವಮಾನದಲ್ಲಿ ನಾನು ಕಂಡ ಮಹಾ ವಿಭೂತಿ ಪ್ರಮಾಣದ ಶ್ರೀಸಾಮಾನ್ಯ ವ್ಯಕ್ತಿಗಳಲ್ಲಿ ಶ್ರೀ ನ. ಭದ್ರಯ್ಯನವರು ಅತ್ಯಂತ ಮಹೋನ್ನತರಾದ ವ್ಯಕ್ತಿ ಎಂದು ಭಾವಿಸುತ್ತೇನೆ. ಅವರು ಬದುಕಿನಲ್ಲಿ ಯಾವ ವಿಶೇಷತೆಯನ್ನೂ ಪ್ರದರ್ಶಿಸದಂತೆ ಅತ್ಯಂತ ಮಹತ್ ಕಾರ್ಯಗಳನ್ನು ಎಸಗಿದ್ದಾರೆ. ಆಫ್ರಿಕಾ ದೇಶದ ಕಾಮರೂನ್‌ನಂತಹ ಕಾಡು ಜನರಿಂದ ಹಿಡಿದು ಜಗತ್ತಿನ ಅತ್ಯಂತ ಮುಂದುವರಿದ ನಾಗರೀಕತೆಯ ದೇಶಗಳೊಡನೆ, ವ್ಯಕ್ತಿಗಳೊಡನೆ, ಅತ್ಯಂತ ಮೈತ್ರಿಯನ್ನು ಸಂಪಾದಿಸಿ, ನಿಜವಾದ ಅರ್ಥದಲ್ಲಿ ಜಗದ್ ವ್ಯಕ್ತಿಗಳಾಗಿದ್ದಾರೆ.

# ನ. ಭದ್ರಯ್ಯ : ಜೀವನ-ಸಾಧನೆ

ಎಚ್ಚೆಸ್ಕೆ

ಮಂಡ್ಯ ಜಿಲ್ಲೆಯ ನೀಲನಹಳ್ಳಿ ಒಂದು ಹಿಂದುಳಿದ ಗ್ರಾಮ. ಹೊರ ಜಗತ್ತಿನ ಅಲ್ಲಕಲ್ಲೋಲಕ್ಕೆ ಅಲುಗಾಡದ 'ಸ್ಥಿತಪ್ರಜ್ಞೆ', ಅಲ್ಲಿಯ ಕಷ್ಟ ಜೀವಿ ಜನಕ್ಕೆ. ನಮ್ಮ ಬಹುತೇಕ ಹಳ್ಳಿಗಳು ಇಂದಿಗೂ ಇರುವುದು ಹೀಗೆಯೇ.

ಒಂದು ದಿನ ಆ ಹಳ್ಳಿಯಲ್ಲಿ ಮಹಾ ಕೋಲಾಹಲ. ಅಲ್ಲೊಂದು ಮನೆಯನ್ನು ಜಫ್ತಿ ಮಾಡುವ ಸಲುವಾಗಿ ಪೊಲೀಸರು ಬಂದಿದ್ದರು. ಖಾಕಿ ಸಮವಸ್ತ್ರ ನೋಡಿದೊಡನೆ ಜನರೆಲ್ಲ ಗಡಗಡ ನಡುಗುತ್ತಿದ್ದ ಕಾಲ ಅದು.

ಜಫ್ತಿಗೆ ಕಾರಣ ಅಪರಾಧವಲ್ಲ. ಆ ಮನೆಯ ಯುವಕರೊಬ್ಬರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಜೈಲಿಗೂ ಹೋಗಿದ್ದರು. ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಈ ಹೋರಾಟ.

ಆಗಿನ ಕಾರಾಗೃಹಗಳು ಈಗಿನವಂತಿರಲಿಲ್ಲ. ಕಠಿಣ ಶಿಕ್ಷೆ ಎಂದರೆ ಅದು ಅಕ್ಷರಶಃ ನಿಜ. ಅನೇಕರು ನಡುಗಿಹೋಗಿದ್ದರು. ನೀಲನಹಳ್ಳಿಯ ಆ ಯುವಕರು ಜೈಲಿನಲ್ಲಿ ಅನಾರೋಗ್ಯಕ್ಕೆ ಒಳಗಾಗಿದ್ದರು.

ಸರ್ಕಾರ ಹೇಳಿದ ಹಾಗೆ ಬರೆದುಕೊಟ್ಟು ಬಿಡುಗಡೆ ಹೊಂದಿ ಆರೋಗ್ಯ ಸುಧಾರಿಸಿಕೊಳ್ಳಿ—ಎಂದು ಅಧಿಕಾರಿಗಳು ಹೇಳಿದ್ದರು. ಆದರೆ ಯುವಕರದು ಒಂದೇ ಹಠ. ಇಲ್ಲೇ ಸತ್ತರೂ ಸರಿ. ನಾನೀ ಕೆಲಸ ಮಾಡಲಾರೆ. ಗಾಂಧೀ ಆಶ್ರಮದಲ್ಲಿ ಕೆಲ ತಿಂಗಳು ಇದ್ದು ಬಂದಿದ್ದ ಆ ಯುವಕರನ್ನು ಆ ಅಯಸ್ಕಾಂತ ಶಕ್ತಿ ಆವರಿಸಿತ್ತು. ಸರ್ಕಾರ ಸಾಮ ದಾನ ಭೇದ ದಂಡಗಳನ್ನು ಪ್ರಯೋಗಿಸಿತು. ಜಗ್ಗಲಿಲ್ಲ ಅವರು. ಕೊನೆಯ ಅಸ್ತ್ರವಾಗಿ ಸರ್ಕಾರ ಪ್ರಯೋಗಿಸಿದ್ದೆಂದರೆ, ಪೊಲೀಸರನ್ನು ಬಿಟ್ಟು ಅವರ ಮನೆಯ ಜಫ್ತಿ ಮಾಡಿಸುವುದು. ಮನೆಯೊಳಗಿನ ಪಾತ್ರೆ ಪರಡಗಳನ್ನೆಲ್ಲ ಪೋಲೀಸ

ರಿಂದ ಹೊರಕ್ಕೆಸೆಯಿಸಿ ಬಿಟ್ಟರೆ ಹುಡುಗ ದಾರಿಗೆ ಬರುತ್ತಾನೆಂದು ಸರ್ಕಾರದ ಭ್ರಮೆ.

ಹೆದರಿದ ಹಳ್ಳಿಯ ಜನರೆಲ್ಲ ಆ ಮನೆಯ ಮುಂದೆ ಜಮಾವಣೆ. ತುಟಿಪಿಟಕ್ಕೆನ್ನದಷ್ಟು ಅಂಜಿಕೆ.

ಊರ ಹಿರಿಯರೊಬ್ಬರು ಗಂಭೀರವಾಗಿ ಮುಂದೆ ಬಂದರು. ಪೊಲೀಸರ ಎದುರು ದೊಣ್ಣೆಯೂರಿ ನಿಂತರು. ಅಡಿಯಿಂದ ಮುಡಿಯವರೆಗೆ ಅವರನ್ನು ನಿಟ್ಟಿಸಿ ನೋಡಿದರು.

ಗುಡುಗಿನಂತೆ ಬಂತು ಗೌಡರ ಮಾತು: ಮನೆ ಸಾಮಾನು ಮುಟ್ಟಿಗಿಟ್ಟೀರಿ ಜೋಕೆ! ಮುಟ್ಟಿದರೆ ಏನಾದೀತೆಂಬುದನ್ನ ತಿಳಿದುಕೊಳ್ಳೋಕೆ ನಿಮ್ಮಲ್ಲಿ ಯಾರೂ ಉಳಿದಿರಾಕಿಲ್ಲ!

ಪೊಲೀಸ್ ಬಲದ ಮುಂದೆ ಈ ಮುದುಕ ಏನು ಮಾಡಿಯಾನು? ಆದರೆ ಪೊಲೀಸರ ಎದೆ ಅಳುಕಿತು. ಕೆಲಸ ಜರುಗಿಸದೆ ಹಿಂದಕ್ಕೆ ನಡೆದುಬಿಟ್ಟರು.

ಇದಕ್ಕೆಲ್ಲ ಕಾರಣರಾದ ಯುವಕರು ನ. ಭದ್ರಯ್ಯ ಗುಡುಗಾಡಿದ ಹಿರಿಯರು ಅವರ ಬಂಧುಗಳಲ್ಲೊಬ್ಬರು.

ಭದ್ರಯ್ಯನವರ ತಂದೆ ನಡ್ಲೇಗೌಡ, ತಾಯಿ ತಾಯಮ್ಮ. ಅವರದು ಓದು ಬರಹ ಬಾರದ ಬಡ ರೈತ ಕುಟುಂಬ.

ಭದ್ರಯ್ಯನವರು ಹುಟ್ಟಿದ್ದು ೧೯೧೨ರ ಸೆಪ್ಟೆಂಬರ್ ೯ ಎಂದು ಅಧಿಕೃತ ದಾಖಲೆಗಳು ಸಾರುತ್ತವೆ. ಅನಕ್ಷರಸ್ಥ ತಂದೆ ತಾಯಿ ಅವರ ಜನ್ಮ ದಿನಾಂಕ ಬರೆದಿಡುವುದಾದರೂ ಹೇಗೆ? ಶಾಲೆಯ ಕಡತದಲ್ಲಿ ಅಧ್ಯಾಪಕರು ಬರೆದದ್ದೇ ದಾಖಲೆ. ಅವರು ಮೊದಲ ಸಾರಿ ವಿದೇಶ ಪ್ರವಾಸ ಮಾಡುವಾಗ ರಹದಾರಿಗಾಗಿ ಬರೆದುಕೊಂಡ ಅರ್ಜಿಯಲ್ಲಿ ಆಗ ತೋರಿದಂತೆ ಈ ದಿನಾಂಕ ಕೊಟ್ಟರಂತೆ. ಅದೇ ಉಳಿದುಕೊಂಡುಬಿಟ್ಟಿತು. ಅವರು ೧೯೧೦ರ ಸುಮಾರಿನಲ್ಲಿ ಹುಟ್ಟಿರಬೇಕೆಂಬುದು ಅವರ ತಮ್ಮಂದಿರ ನಂಬಿಕೆ. ಭದ್ರಯ್ಯನವರು ಬದುಕಿರುವವರೆಗೂ ತಮ್ಮ ವಯಸ್ಸನ್ನೆಂದೂ ಲೆಕ್ಕ ಹಾಕಿದವರೇ ಅಲ್ಲ. ವಯಸ್ಸಿನ ಬಗೆಗೂ, ಹುಟ್ಟುಹಬ್ಬದ ಬಗೆಗೂ ಅವರಿಗೆ ದಿವ್ಯ ನಿರ್ಲಕ್ಷ್ಯ.

ಭದ್ರಯ್ಯನವರು ತಮ್ಮ ಬದುಕಿನ ಬಗೆಗೆ ಯಾರೊಂದಿಗೂ ಹೆಚ್ಚು ಹೇಳಿಕೊಳ್ಳುತ್ತಿರಲಿಲ್ಲ. ಅದರಲ್ಲಿ ಹೇಳಿಕೊಳ್ಳುವಂಥದೇನಿದೆ?—ಎಂದೇ ಅವರ ಪ್ರಶ್ನೆ. ಸ್ವಂತ ವಿಚಾರವನ್ನು ಅವರು ಅಷ್ಟಾಗಿ ತಲೆಗೆ ಹಚ್ಚಿಕೊಂಡವರೇ ಅಲ್ಲ.

ಲಕ್ಷ್ಮೀಸಾಗರದಲ್ಲಿ ಭದ್ರಯ್ಯನವರ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ. ಪ್ರೌಢಶಾಲೆಯ ಓದಿಗಾಗಿ ಮೈಸೂರಿನತ್ತ ಪ್ರಯಾಣ.

ಸಂಬಂಧಿಕರೊಬ್ಬರ ಮನೆಯಲ್ಲಿ ಊಟ ವಸತಿ. ತೋಚಿದಂತೆ ಓದು. ಅವರ ಬಾಳಿಗೆ ಅವರೇ ರೂವಾರಿ.

ಅವರಿದ್ದ ಮನೆಯಲ್ಲಿ ಒಮ್ಮೆ ಒಂದು ಒಡವೆಯ ಕಳವಾಯಿತು. ಬಡತನವೇ ಮಹಾಪರಾಧವಲ್ಲವೆ? ಭದ್ರಯ್ಯನವರೇ ಆ ಕೃತ್ಯ ಮಾಡಿದರೆಂದು ಅನುಮಾನ.

ಎಳ ಹೃದಯದ ಮೇಲೆ ಬರೆ ಹಾಕಿದ ಹಾಗಾಯಿತು. ತಮ್ಮ ಪ್ರಾಮಾಣಿಕತೆಯನ್ನವರು ಸಾಬೀತು ಪಡಿಸುವುದಾದರೂ ಹೇಗೆ?

ಇನ್ನು ಆ ಮನೆಯಲ್ಲಿ ಊಟ ಮಾಡುವುದಿಲ್ಲ ಎಂದು ಶಪಥ ಮಾಡಿದರು. ಆದರೆ ಆ ಒಡವೆ ಕದ್ದವರು ಯಾರೆಂಬುದು ಸಿದ್ಧಪಡುವವರೆಗೂ ಮನೆ ಬಿಡುವುದಿಲ್ಲ ಎಂದೂ ಸಂಕಲ್ಪಿಸಿದರು.

ಆ ಕೆಲಸ ಮಾಡಿದವರು ಯಾರು ಎಂಬುದು ಒಂದು ದಿನ ಪತ್ತೆಯಾಯಿತು. ಕದ್ದವನು ಯಾರಿಗೆ ಮಾರಿದ್ದನೆಂಬುದೂ ಗೊತ್ತಾಯಿತು.

ಭದ್ರಯ್ಯನವರ ಬಗ್ಗೆ ವೃಥಾ ಸಂಶಯಪಟ್ಟದ್ದಕ್ಕಾಗಿ ಮನೆಯವರು ಬಲು ನೊಂದುಕೊಂಡರು. ಇನ್ನು ಮೇಲಾದರೂ ಇಲ್ಲೇ ಊಟ ಮಾಡಿಕೊಂಡಿರಬೇಕೆಂದರು.

ತಾವು ನಿರಪರಾಧಿಯೆಂಬುದು ಸಿದ್ಧವಾಯಿತೆಂದು ಭದ್ರಯ್ಯನವರ ಮನಸ್ಸು ನಿರಾಳವಾಯಿತು. ಇನ್ನು ಅವರು ಆ ಮನೆಯಲ್ಲಿರಲೊಪ್ಪಲಿಲ್ಲ. ಮನೆಯವರ ಒತ್ತಾಯಕ್ಕೆ ಮಣಿಯಲಿಲ್ಲ. ವಾರದ ಏಳು ದಿನ ಏಳು ಮನೆಗಳಲ್ಲಿ ಸರದಿಯಂತೆ ಊಟ ಮಾಡುತ್ತಿದ್ದ ಭದ್ರಯ್ಯನವರು ಆ ವಾರಾನ್ನದ ಬದುಕನ್ನೇ ಮುಂದುವರಿಸಿದರು.

ಪ್ರೌಢಶಾಲೆ ಮುಗಿಸಿ ಇಂಟರ್ಮೀಡಿಯೆಟ್ಟಿನ ಮೆಟ್ಟಿಲು ಹತ್ತುವ ವೇಳೆಗೆ ಭದ್ರಯ್ಯನವರ ಮನಸ್ಸು ಹೊಯ್ದಾಡುತ್ತಿತ್ತು. ನಾಡಿನ ಬಿಡುಗಡೆಯ ಹೋರಾಟ ಬಿರುಸಾಗಿದ್ದ ಆ ಕಾಲದಲ್ಲಿ ಅವರಲ್ಲೂ ಅದಕ್ಕಾಗಿ ತುಡಿತ ಉಂಟಾಗಿತ್ತು. ಮುಂದೆ ಹೋರಾಟವೇ ಮುಂದಾಯಿತು. ಓದು ಬಿಟ್ಟೇಹೋಯಿತು. ಗಾಂಧೀ ಗುಂಗು ಮೈಯೆಲ್ಲಾ ತುಂಬಿಕೊಂಡು ದುಮುದುಮಿಸುತ್ತಿತ್ತು.

ಬಿಡುಗಡೆಯ ಹೋರಾಟದಲ್ಲಿ ದುಮ್ಮಿಕ್ಕುವುದರ ಜೊತೆಗೆ, ತಮ್ಮಂಥ ತರುಣರ ವಿದ್ಯಾರ್ಜನೆ ಸುಸೂತ್ರವಾಗುವಂತೆ ಮಾಡಬೇಕೆಂಬ ಬಯಕೆ. ಗಾಂಧೀಜಿ ನಂಬಿದ್ದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕೆಂಬ ಹಂಬಲ. ಗ್ರಾಮದ ಉದ್ಧಾರವಾಗದೆ ರಾಷ್ಟ್ರದ ವಿಮೋಚನೆ, ಪ್ರಗತಿ ಆಗಲಾರದೆಂಬ ನಂಬಿಕೆ. ಹೀಗೆ ಮೂರು ಬಗೆಯ ಚಿಂತನದಿಂದ ಮುಪ್ಪುರಿಗೊಂಡ ಮನಸ್ಸು ಏನನ್ನಾದರೂ ಸಾಧಿಸಲು ಹಾತೊರೆಯುತ್ತಿತ್ತು.

ಬಡ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿ ನಿಲಯ ನಡಸಬೇಕೆಂದು ಭದ್ರಯ್ಯನವರು ತಮ್ಮ ಕೆಲವು ಮಿತ್ರರು ಹಾಗೂ ಆಶ್ರಯದಾತರೊಂದಿಗೆ ಕಾರ್ಯ ಪ್ರವೃತ್ತರಾದರು. ಇದರ ಫಲವೇ ವಿವೇಕಾನಂದ ವಿದ್ಯಾರ್ಥಿ ನಿಲಯ ಶ್ರೀಮಂತರ ಮಕ್ಕಳಿಂದ ಹಣ, ಬಡವರ ಮಕ್ಕಳಿಗೆ ಉಚಿತ ಊಟ ವಸತಿ. ಇದು ಈ ನಿಲಯದ ಹಿಂದೆ ಇದ್ದ ತತ್ವ.

ಸುಮಾರು ಇದೇ ಕಾಲಕ್ಕೆ ಅವರ ಇನ್ನೊಂದು ಹಂಬಲವೂ ಕಾರ್ಯರೂಪಕ್ಕೆ ಬಂತು. ಗ್ರಾಮ ಸೇವೆಯ ವಿಚಾರಗಳಿಗೇ ಮೀಸಲಾದ ಪತ್ರಿಕೆ ಗ್ರಾಮಸೇವಾ ಪತ್ರಿಕೆ. ೧೯೩೭ ರಿಂದ ೧೯೪೨ ರ ವರೆಗೆ ಭದ್ರಯ್ಯನವರು ಈ ಮಾಸಪತ್ರಿಕೆಯ ಸಂಪಾದಕರಾಗಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವುದಂತೂ ಇದ್ದೇ ಇತ್ತು. ಸರ್ಕಾರ ಅವರ ಮೇಲೆ ಕಣ್ಣಿಟ್ಟಿತು. ಪತ್ರಿಕೆಯ ಮೇಲೆ ಸರ್ಕಾರದ ಗದಾಪ್ರಹಾರ. ಪತ್ರಿಕೆ ನಿಂತು ಹೋಯಿತು. ವಿವೇಕಾನಂದ ವಿದ್ಯಾರ್ಥಿ ನಿಲಯವೂ ತಟಸ್ಥವಾಯಿತು.

ಸೋಲೊಪ್ಪಲಿಲ್ಲ ಭದ್ರಯ್ಯ. 'ಕಿರುತಾರೆ' ಎಂಬ ಪತ್ರಿಕೆಯನ್ನು ಸ್ವಲ್ಪಕಾಲ ನಡಸಿದರು. ಗ್ರಾಮಸೇವಾ ವಿದ್ಯಾರ್ಥಿ ನಿಲಯ ತೆರೆದರು. ಅನೇಕ ಶ್ರೀಮಂತರು ಅದಕ್ಕೆ ಹಣ ನೀಡುತ್ತಿದ್ದರು. ಸಂತೇಪೇಟೆಯ ವರ್ತಕರಿಂದ ಧಾರಾಳವಾಗಿ ಧಾನ್ಯ ಸಂಗ್ರಹ ವಾಗುತ್ತಿತ್ತು. ಈ ಕಾಲದಲ್ಲಿ ಅವರ ದಸ್ತಗಿರಿ ಮಾಡಿ ಸರ್ಕಾರ ಅವರನ್ನು ತೀರ್ಥಹಳ್ಳಿ ಯಿಲ್ಲಿಟ್ಟಿತ್ತು. ಅವರು ಬಿಡುಗಡೆಯಾಗಿ ಬರುವ ವೇಳೆಗೆ ಗ್ರಾಮಸೇವಾ ವಿದ್ಯಾರ್ಥಿ ನಿಲಯ ಮುಚ್ಚಿಹೋಗಿತ್ತು.

ಭದ್ರಯ್ಯನವರು ಸಹಜವಾಗಿಯೇ ಬರವಣಿಗೆಯ ಅಭ್ಯಾಸ ಬೆಳೆಸಿಕೊಂಡಿದ್ದರು. ಅವರಿಗೆ ಬರವಣಿಗೆ ಕೇವಲ ಹೊತ್ತುಗಳೆಯುವ ಹವ್ಯಾಸ. ಸ್ವಂತ ಸಂತೋಷಕ್ಕೆಂದೇ ಬರೆದಂಥವಲ್ಲ, ಅವರ ಕೃತಿಗಳು. ಅವು ಭದ್ರಯ್ಯನವರಿಗೆ ಸಂತೋಷ ಕೊಟ್ಟಿಲ್ಲವೆಂದಲ್ಲ. ಓದುಗರಲ್ಲಿ, ಮುಖ್ಯವಾದ ಮಕ್ಕಳಲ್ಲಿ, ಅಕ್ಷರ ಕಲಿತವರಲ್ಲಿ, ತಿಳಿವು ಮೂಡಿಸುವುದು ಅವರ ಮುಖ್ಯ ಉದ್ದೇಶ. ತಮಗೆ ಸಂತೋಷ, ತಿಳಿವು ನೀಡಿದ ಅನುಭವವನ್ನು ಇತರರಿಗೂ ದೊರಕಿಸಿಕೊಡಬೇಕು.

'ಮಹಾತ್ಮಾ ಗಾಂಧಿ' ಎಂಬುದು ಅವರು ಬರೆದ ಒಂದು ಕೃತಿ. 'ಅಶೋಕ ಚಕ್ರವರ್ತಿ,' 'ಪ್ರಪಂಚದ ಕಥೆ', 'ಸಾಹಸ ಕಥೆಗಳು', 'ಎವರೆಸ್ಟ್ ಆರೋಹಣ', 'ಧ್ರುವ ಸಂಶೋಧನೆ', 'ಸಾಗರ ಸಂಶೋಧನೆ', 'ಯಕ್ಷನೌಕೆ', 'ನಿಮ್ಮ ದೇಹ'—ಇವು ಇತರ ಕೆಲವು ಕೃತಿಗಳು. ಇವುಗಳ ಹೆಸರುಗಳಿಂದಲೇ ಈ ಪುಸ್ತಕಗಳನ್ನು ಬರೆಯುವುದರ ಹಿಂದಿದ್ದ ಉದ್ದೇಶವನ್ನು ತಿಳಿಯಬಹುದು. ಸರಳ ನೇರ ಶೈಲಿ. ಪೂರ್ವಾಗ್ರಹ ದೂರವಾದ, ವಸ್ತುನಿಷ್ಠ ದೃಷ್ಟಿ. ಇವು ಈ ಕೃತಿಗಳ ಲಕ್ಷಣಗಳು. 'ಮಹಾತ್ಮಾ ಗಾಂಧಿ', 'ಅಶೋಕ ಚಕ್ರವರ್ತಿ'—ಇವು ಜೀವನ ಚರಿತ್ರೆಗಳಾದರೆ, 'ಎವರೆಸ್ಟ್ ಆರೋಹಣ' ಮುಂತಾದವು ಸಾಹಸ ಕಥನಗಳು, ಪ್ರದೇಶ ಪರಿಶೋಧನೆಯ ಪರಿಚಯಗಳು, 'ಯಕ್ಷ ನೌಕೆ' ಎಂಬುದು ಆಕಾಶದಲ್ಲಿ ಹಾರಾಡುವ ತಟ್ಟೆಗಳನ್ನು ಕುರಿತ ಕುತೂಹಲ ಜನಕ ವಾದ ಒಕ್ಕಣೆ. 'ನಿಮ್ಮ ದೇಹ', 'ಜೀವ ಸಂತಾನ ಸಾಗಿದ ಬಗೆ' ಎಂಬ ಪುಸ್ತಕಗಳು ಆರೋಗ್ಯಶಾಸ್ತ್ರ ಜೀವವಿಜ್ಞಾನ ಕುರಿತ ಕೃತಿಗಳು. 'ನಡೆದು ನೋಡು ಕೊಡಗಿನ ಬೆಡಗು' ಒಂದು ಪ್ರವಾಸ ಕಥನ. 'ಆಕಾಶದ ಆಶ್ಚರ್ಯ' ಎಂಬ ಖಗೋಳಶಾಸ್ತ್ರ ಕುರಿತ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಪ್ರಾಪ್ತವಾಯಿತು. 'ಗಾಂಧೀ ಪ್ರಮಾಣ ವಚನಗಳು; 'ಕುಮಾರವ್ಯಾಸನ ಕರ್ಣ', 'ಅರ್ಪಣೆ'—ಇವು ಭದ್ರಯ್ಯನವರು ಸಂಪಾದಿಸಿ ಪ್ರಕಟಿಸಿದ ಕೃತಿಗಳು. ಗಾಂಧೀಜಿಯ ಎಪ್ಪತ್ತೊಂದನೆಯ ಜನ್ಮದಿನೋತ್ಸವ ಸಂದರ್ಭದಲ್ಲಿ ಅರ್ಪಿಸಿದ ಕೃತಿ 'ಅರ್ಪಣೆ'.

ನ. ಭದ್ರಯ್ಯನವರ ಈ ಎಲ್ಲ ಕೃತಿಗಳೂ ಬಹಳ ಜನಪ್ರಿಯವಾದುವು. ವಿದ್ಯಾರ್ಥಿ ಗಳ ಮೆಚ್ಚುಗೆ ಗಳಿಸಿದುವು. ಒಂದೆರಡು ಕೃತಿಗಳು ಪಠ್ಯಪುಸ್ತಕಗಳೂ ಆಗಿದ್ದುವು. ಸಹಜವಾಗಿಯೇ ಭದ್ರಯ್ಯನವರಿಗೆ ಒಂದಿಷ್ಟು ಹಣ ಬಂತು. ಭದ್ರಯ್ಯನವರಿಗೆ ಹಣ ಒಂದು ಸಾಧನವೇ ಹೊರತು ಕಡೇ ಸಾಧನೀಯವಲ್ಲ. ಅಂತಿಮ ಗುರಿಯಲ್ಲ, 'ಬದುಕು ಸರಳ, ಬಗೆ ಗಂಭೀರ'—Simple living, high thinking—ಎಂಬ ಗಾಂಧೀ ಸೂತ್ರವನ್ನು ನಿಷ್ಠೆಯಿಂದ ಅನುಷ್ಠಾನಿಸುತ್ತಿದ್ದ ಭದ್ರಯ್ಯನವರು ಆ ಹಣವನ್ನು

ಸದುಪಯೋಗಪಡಿಸಿಕೊಂಡರು. ಒಮ್ಮೆ ಬಂದ ಹಣದಿಂದ ಇಂಗ್ಲೆಂಡ್ ಪ್ರವಾಸ ಮಾಡಿದರು—ಹಡಗಿನಲ್ಲಿ ಪ್ರಯಾಣ. ಕೈಯಲ್ಲಿ ಉಳಿದ ಹಣದಿಂದ ಅವರು ಅಲ್ಲಿ ಮುದ್ರಣ ಯಂತ್ರ ಕೊಂಡು ತಂದರು. ಗ್ರಾಮಸೇವಾ ಪ್ರೆಸ್ ಪ್ರಾರಂಭಿಸಿದರು. ಸಿದ್ಧವನಹಳ್ಳಿ ಕೃಷ್ಣಶರ್ಮರ ಅನೇಕ ಪುಸ್ತಕಗಳ ಮುದ್ರಣವಾದ್ದು ಈ ಮುದ್ರಣಾಲಯದಲ್ಲಿ. ಅವರು ಸಂಪಾದಿಸಿದ 'ಅರ್ಪಣೆ' ಅಚ್ಚಾದ್ದೂ ಇಲ್ಲೇ.

ಆದರೆ ಸರ್ಕಾರಕ್ಕೆ ಅಪ್ರಿಯವಾದ ಸಾಮಗ್ರಿಯೂ ಇಲ್ಲಿ ಅಚ್ಚಾಗುತ್ತಿದೆಯೆಂಬ ಅಂಜಿಕೆಯಿಂದ ಆಗಿನ ಸರ್ಕಾರ ಅದರ ಜಪ್ತಿಗಾಗಿ ಪ್ರಯತ್ನ ನಡಸಿತ್ತು. ಭದ್ರಯ್ಯನವರು ಒಂದು ರೀತಿಯಲ್ಲಿ ಅಜಾತಶತ್ರು. ಸರ್ಕಾರದ ಗುಪ್ತಚಾರಿ ಪೋಲೀಸರೇ ಅನೇಕ ಸಾರಿ ಅವರಿಗೆ ಮುಂದಾಗಿ ಸರ್ಕಾರದ ಅಂಥ ಆಜ್ಞೆಯನ್ನು ತಿಳಿಸುತ್ತಿದ್ದರಂತೆ. ಕೊನೆಗೂ ಭದ್ರಯ್ಯನವರು ಆ ಮುದ್ರಣಾಲಯವನ್ನು ಮುಚ್ಚಬೇಕಾಯಿತು. ಮತ್ತೊಮ್ಮೆ ಅವರು ಲಂಡನ್ನಿಗೆ ಹೋಗಿ ಬಂದರು. ಇನ್ನೊಂದು ಅಚ್ಚುಕೂಟ ತೆರೆದರು—ಚೇತನ ಮುದ್ರಾಲಯ. ಅವರು ಕಟ್ಟಿಕೊಂಡಿದ್ದ ಹಲವಾರು ಕಲಾಪಗಳಿಂದಾಗಿ ಅದನ್ನೂ ಅವರು ತಮ್ಮ ಆದರ್ಶಕ್ಕೆ ಅನುಸಾರವಾಗಿ ನಡೆಸಲಾಗಲಿಲ್ಲ. ಕೊನೆಗೆ ಅದನ್ನು ತಮ್ಮ ತಮ್ಮಂದಿರಲ್ಲೊಬ್ಬರಿಗೆ ವಹಿಸಿಕೊಟ್ಟು ಕೈತೊಳೆದುಕೊಂಡರು. ಮುದ್ರಣಾಲಯವಾಗಲಿ, ಪುಸ್ತಕ ಲೇಖನವಾಗಲಿ, ಪ್ರಕಾಶನವಾಗಲಿ ಎಂದೂ ಅವರಿಗೆ ಒಂದು ವ್ಯವಹಾರವಾಗಿರಲಿಲ್ಲ: ತಮ್ಮ ಗುರಿ ಸಾಧನೆಗೆ ಅವೆಲ್ಲ ಮಾರ್ಗಗಳು.

ರಚನಾತ್ಮಕ ಕಾರ್ಯಕ್ರಮ, ಗ್ರಾಮಸುಧಾರಣೆ—ಇವುಗಳಲ್ಲಿ ಭದ್ರಯ್ಯನವರಿಗೆ ವಿಶೇಷವಾದ ಆಸಕ್ತಿ. ರಾಜಕೀಯ ದೊಂಬರಾಟವಾಗಲಿ, ಪ್ರಚಾರದ ಜೊಬ್ಬೆಯಾಗಲಿ ಅವರಿಗೆ ಎಂದೂ ಸೇರುತ್ತಿರಲಿಲ್ಲ. ಮೂಲೆಯಲ್ಲಿ ಕುಳಿತು ತಾವು ನಂಬಿದ ತತ್ವಗಳ ಸಾಧನೆಗಾಗಿ ಕಾರ್ಯಪ್ರವೃತ್ತರಾಗುವುದೇ ಅವರಿಗೆ ತುಂಬ ಪ್ರಿಯ. ವಯಸ್ಕರ ಶಿಕ್ಷಣ ಚಳವಳಿ ಅವರಿಗೆ ಹೇಳಿ ಮಾಡಿಸಿದಂತಿತ್ತು.

ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕೆಲವು ಅಧ್ಯಾಪಕರು ವಯಸ್ಕರ ಶಿಕ್ಷಣ ಚಳವಳಿಯಲ್ಲಿ ವಿಶೇಷವಾದ ಆಸಕ್ತಿ ತಳೆದಿದ್ದರು. ಪ್ರೊ|| ಈಗಲ್‌ಟನ್, ಟಿ. ಕೃಷ್ಣಮೂರ್ತಿ, ಎಸ್. ವಿ. ಶ್ರೀನಿವಾಸರಾವ್ ಮುಂತಾದವರನ್ನು ಭದ್ರಯ್ಯನವರೂ ಕೂಡಿಕೊಂಡರು. ಎಲ್ಲ ಪ್ರಗತಿಗೂ ವಿದ್ಯೆಯೇ ಮೂಲ ಎಂಬುದನ್ನು ಭದ್ರಯ್ಯನವರು ಆ ವೇಳೆಗಾಗಲೇ ಕಂಡುಕೊಂಡಿದ್ದರು. ವಿದ್ಯೆ ನೀಡುವುದೆಂದರೆ ವಿಶ್ವಕ್ಕೆ, ವಿಚಾರಕ್ಕೆ, ಜ್ಞಾನವಿಜ್ಞಾನಗಳಿಗೆ ಕಿಟಕಿ ತೆರೆದಿಟ್ಟಂತೆ. ತನ್ನ ಇರವಿನ ಅರಿವು ತನಗೆ ಆದಾಗಲೇ ವ್ಯಕ್ತಿಯಲ್ಲಿ ಉದಿಸುತ್ತದೆ, ಪುರೋಗಮನದ ಅಭೀಪ್ಸೆ. ಈ ಚಳವಳಿಯಲ್ಲಿ ಅವರು ಪೂರ ಧುಮುಕಿದರು. ಮೈ, ಮನಸ್ಸು, ಆಯುಸ್ಸು ಎಲ್ಲವನ್ನೂ ಇದಕ್ಕೆ ಅರ್ಪಿಸಿಕೊಂಡರು. ಆಗಿನ ಮೈಸೂರು ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ ಚಳವಳಿಯನ್ನು ಬೆಳಸಿದ ಅಗ್ರಗಣ್ಯರಲ್ಲಿ ಭದ್ರಯ್ಯನವರೂ ಒಬ್ಬರು ಎಂಬುದನ್ನು ಎಲ್ಲರೂ ಬಲ್ಲರು. ಯಾವುದೇ ಲಾಭದ, ಕೀರ್ತಿಯ, ಅಧಿಕಾರದ ಆಸೆಯಿಲ್ಲದೆ ಅವರು ಇದಕ್ಕಾಗಿ ದುಡಿದರು. ಹೊಣೆಯೊಂದಿಗೆ ಅಧಿಕಾರ—ಅಥವಾ ಅಧಿಕಾರದೊಂದಿಗೆ ಹೊಣೆ—ಬಂತು. ಅವರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯ




ನಭ ಮತ್ತು ಶ್ರೀಮತಿ ಶಾಂತಿ ಭದ್ರಯ್ಯ (1964)



ಶ್ರೀಮತಿ ಶಾಂತಿ ಭದ್ರಯ್ಯ, ಮಗಳು ಶುಭ ಹಾಗೂ ನಭ



ನಭ ನೈರೋಬಿಯಾದಲ್ಲಿದ್ದಾಗ (1975)



ನಭ ಅವರಿಗೆ ನೆಹರು ಸಾಕ್ಷರತಾ ಪ್ರಶಸ್ತಿ ಬಂದಾಗ ಮಗಳು ಶುಭಳೊಂದಿಗೆ (1982)

ದರ್ಶಿಯೂ ಅಧ್ಯಕ್ಷರಾಗಿಯೂ ಹಲವು ವರ್ಷ ದುಡಿದರು. ಶಿಕ್ಷಣ ಕೇವಲ ಓದುಬರಹ ವಲ್ಲ. ನಿತ್ಯ ಜೀವನದೊಂದಿಗೆ ಹೆಣೆದುಕೊಳ್ಳದಿದ್ದರೆ ಅದರಿಂದ ಹೆಚ್ಚಿನ ಪ್ರಯೋಜನ ವಿಲ್ಲ. ಓದಿಗೂ ಬದುಕಿಗೂ, ಕೆಲಸಕ್ಕೂ, ಸಂಲಗ್ನವಾದಾಗಲೇ, ಒಂದು ಇನ್ನೊಂದಕ್ಕೆ ಪೋಷಕವಾದಾಗಲೇ ಶಿಕ್ಷಣದ ಸಾರ್ಥಕತೆ. ಇಂದು ಬಹಳವಾಗಿ ಕೇಳಿ ಬರುತ್ತಿರುವ ಕ್ರಿಯಾತ್ಮಕ ಶಿಕ್ಷಣವನ್ನು ಅವರು ಆಗಲೇ ಪ್ರಯೋಗಮಾಡಿ ತೋರಿಸಿಕೊಟ್ಟರು. ಹಳೆಯ ಮೈಸೂರಿನಲ್ಲಿ ಜಿಲ್ಲೆಗೊಂದರಂತೆ ಅವರು ಸ್ಥಾಪಿಸಿದ ವಿದ್ಯಾಪೀಠಗಳು ಅವರ ಈ ನಂಬಿಕೆಯ ಫಲ. (ಭದ್ರಯ್ಯನವರ ಬದುಕಿನ ಈ ಮುಖವನ್ನು ಇತರ ಲೇಖಕರು ಪರಿಚಯಮಾಡಿಕೊಡುವರಾದ್ದರಿಂದ ಅದನ್ನು ನಾನು ಈ ಲೇಖನದಲ್ಲಿ ಹೆಚ್ಚಾಗಿ ಹೇಳುವುದಿಲ್ಲ.)

ಭದ್ರಯ್ಯನವರ ಈ ಕೆಲಸ ವಿಶ್ವದ ಗಮನ ಸೆಳೆಯದೆ ಇರಲಿಲ್ಲ. ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಸಾಂಸ್ಕೃತಿಕ ಸಂಸ್ಥೆಯ ಯುನೆಸ್ಕೊ ಕಲಾಪಗಳಲ್ಲಿ ವಯಸ್ಕರ ಶಿಕ್ಷಣವೂ ಒಂದು. ಆ ಸಂಸ್ಥೆ ಭದ್ರಯ್ಯನವರ ಸದ್ದಿಲ್ಲದ ಸೇವೆಯನ್ನು ಗುರುತಿಸಿ ಅವರನ್ನು ಈ ವಿಚಾರದಲ್ಲಿ ಸಲಹೆಗಾರರಾಗಿ ನೇಮಿಸಿಕೊಂಡಿತು. ವಯಸ್ಕರ ಶಿಕ್ಷಣ ಚಳವಳಿಯ ಅಧ್ಯಯನವಾಗಿ ಅವರು ಆ ಸಂಸ್ಥೆಯ ಪರವಾಗಿ ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿ ದುಡಿದರು. ಯುನೆಸ್ಕೋ ಮಾತ್ರವೇ ಅಲ್ಲ; ಫೋರ್ಡ್ ಪ್ರತಿಷ್ಠಾನ, ಗ್ರಾಮೀಣ ಶಿಕ್ಷಣ ಕುರಿತ ಅಂತರರಾಷ್ಟ್ರೀಯ ಸಮಿತಿ—ಇಂಥ ಸಂಸ್ಥೆಗಳು ಕೂಡ ಭದ್ರಯ್ಯನವರ ಸೇವೆಯನ್ನು ಬಳಸಿಕೊಂಡುವು. ಈ ಸಂಸ್ಥೆಗಳ ಆಶಯದಂತೆ ಅವರು ಆಫ್ರಿಕದ ಕ್ಯಾಮರೂನ್, ಪಶ್ಚಿಮ ಏಷ್ಯದ ಅರಬ್ ದೇಶಗಳು, ಇಂಡೊನೇಷ್ಯ, ಇರಾನ್, ಕೆನ್ಯ ಮುಂತಾದ ಅನೇಕ ದೇಶಗಳಿಗೆ ತಮ್ಮ ಜ್ಞಾನ ಅನುಭವಗಳ ಪ್ರಯೋಜನ ದೊರಕಿಸಿಕೊಟ್ಟರು. ಜೊತೆಗೆ ಅವರು ತಾವಾಗಿಯೇ ಅನೇಕ ದೇಶ ಗಳಲ್ಲಿ ಸಂಚರಿಸಿದರು. ವಯಸ್ಕರ ಶಿಕ್ಷಣ ಕುರಿತ ಅನೇಕ ಸಭೆ, ಸಮ್ಮೇಳನ, ಗೋಷ್ಠಿ, ವಿಚಾರಸಂಕಿರ್ಣಗಳಲ್ಲಿ ಭಾಗವಹಿಸಿದರು. ಸಾಕ್ಷರತೆಯ ಪ್ರಸಾರ, ನವಸಾಕ್ಷರರಿಗೆ ಅಗತ್ಯವಾದ ಸಾಹಿತ್ಯದ ಸೃಷ್ಟಿ, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಹಿಂದುಳಿದ ಜನರ ಮುನ್ನಡೆಯ ಸಾಧನೆ—ಇವೇ ಭದ್ರಯ್ಯನವರ ಮುಖ್ಯ ಕಾಳಜಿ ಗಳಾದುವು.

ನಮ್ಮ ಅನೇಕ ಸಮಾಜ ಸುಧಾರಕರೂ ಶಿಕ್ಷಣ ಪ್ರೇಮಿಗಳೂ ಸಾಮಾನ್ಯವಾಗಿ ಪ್ರಚಾರಪ್ರಿಯರು, ಪ್ರಶಂಸೆ ಪ್ರಶಸ್ತಿಗಳ ಮೇಲೆ ಕಣ್ಣಿಟ್ಟವರು. ಇದೊಂದು ಮಾನವ ದೌರ್ಬಲ್ಯ. ಆದರೆ ಭದ್ರಯ್ಯನವರು ಈ ಮಾತಿಗೆ ಅಪವಾದ. ಅವರೆಂದೂ ತಮಗಾಗಲಿ ತಾವು ಮಾಡುತ್ತಿದ್ದ ಕೆಲಸಕ್ಕಾಗಲಿ ಪ್ರಚಾರ ಬಯಸಿದವರಲ್ಲ. ಒಳ್ಳೆಯ ಕೆಲಸ ಕಸ್ತೂರಿಯ ಪರಿಮಳದಂತೆ. ಅದು ತಾನಾಗಿಯೇ ಸುತ್ತೆಲ್ಲ ಪಸರಿಸುತ್ತದೆ. ಯಾರಿಗಾಗಿ ಆ ಕೆಲಸ ಕೈಕೊಳ್ಳಲಾಗುವುದೋ ಅವರ ಪ್ರೀತಿ ಅಭಿಮಾನ ಮೆಚ್ಚುಗೆಗಳಿಗಿಂತ ಬೇರೆಯ ಬೇಕು? ಅವರ ವಿಕಾಸವನ್ನು ನೋಡುವುದೇ ಆನಂದ. ಭದ್ರಯ್ಯ ಅವರು ಯಾವ ಯಾವ ದೇಶಗಳಲ್ಲಿ ಸಾಕ್ಷರತೆ ಹಾಗೂ ಸಾಹಿತ್ಯರಚನೆಯ ಕಾರ್ಯಕ್ಕಾಗಿ ನಿಯೋಜಿತ ರಾಗಿದ್ದರೋ, ಅಲ್ಲೆಲ್ಲ ಜನರೊಂದಿಗೆ ಬೆರೆಯುತ್ತಿದ್ದರು. ಅವರ ಕಷ್ಟಸುಖಗಳಲ್ಲಿ

ಭಾಗಿಗಳಾಗುತ್ತಿದ್ದರು. ಅವರ ವೈಯಕ್ತಿಕ ಹಾಗೂ ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುತ್ತಿದ್ದರು. 'ನೀವು ನಮ್ಮನ್ನಗಲಿ ಹೋಗಬೇಡಿ, ಇಲ್ಲೇ ಇರಿ' ಎಂದು ಅವರು ಒತ್ತಾಯ ಮಾಡುವ ಮಟ್ಟಿಗೆ ಭದ್ರಯ್ಯನವರು ಅವರ ಪ್ರೀತಿ ವಿಶ್ವಾಸ ಗಳಿಸುತ್ತಿದ್ದರು. ಆ ದೇಶಗಳ ಸರ್ಕಾರಗಳು ತಾವಾಗಿಯೇ ಆ ಸಂಸ್ಥೆಗಳಿಗೆ ಬರೆದು, ಅವರ ಸೇವೆಯನ್ನು ಇನ್ನಷ್ಟುಕಾಲ ಮುಂದುವರಿಸಬೇಕೆಂದು ಕೋರುತ್ತಿದ್ದುವು. ಇಂಡೊನೇಷ್ಯಕ್ಕೆ ಒಂದು ವರ್ಷಕ್ಕೆಂದು ಹೋದ ಭದ್ರಯ್ಯನವರು ಅಲ್ಲಿ ಮೂರು ವರ್ಷ ಇದ್ದರು. ಕೆನ್ಯದಲ್ಲಿ ಒಂದೇ ವರ್ಷ ಇರುತ್ತೇನೆಂದರೆ ಅಲ್ಲಿಯವರು ಐದು ವರ್ಷ ಅವರನ್ನು ತಮ್ಮಲ್ಲಿರಿಸಿಕೊಂಡರು. ಎಲ್ಲೆಲ್ಲೂ ಸರ್ಕಾರದ, ಜನತೆಯ ಹೊಗಳಿಕೆ; ಕೃತಜ್ಞತೆಯ ಆನಂದಬಾಷ್ಪ. ಇದು ಎಲ್ಲರಿಗೂ ಲಭ್ಯವಾಗುವ ಭಾಗ್ಯವಲ್ಲ. ಇದರ ಹಿಂದೆ ಇದ್ದ ಗುಣಗಳೆಂದರೆ ಭದ್ರಯ್ಯನವರ ಸೇವಾಕಾಂಕ್ಷೆ, ನಿಷ್ಠೆ, ಪ್ರಾಮಾಣಿಕತೆ, ತಮ್ಮ ಕೆಲಸದಲ್ಲೂ ಸುತ್ತಣ ಜನರಲ್ಲೂ ತಾದಾತ್ಮ್ಯ.

ಯಾವುದೇ ದೇಶಕ್ಕೆ ಹೋದರೂ ಅಲ್ಲಿಯ ಜನರಲ್ಲಿ ಒಂದಾಗಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುವುದು ಭದ್ರಯ್ಯನವರಿಗಿದ್ದ ಒಂದು ಸ್ವಭಾವ. ವಯಸ್ಕರ ಶಿಕ್ಷಣವೆಂಬುದು ಕೇವಲ ಓದುಬರಹ ಕಲಿಸುವುದಲ್ಲ ಎಂಬುದನ್ನು ಅವರು ಬಾಯಲ್ಲಿ ಹೇಳುವುದು ಮಾತ್ರವಲ್ಲ, ಅಂತೆಯೇ ನಂಬಿ ನಡೆಯುತ್ತಿದ್ದರು. ಜನ ಜೀವನವನ್ನು ಸಂಪದ್ಭರಿತವಾಗಿ ಮಾಡುವುದು ಹೇಗೆಂಬುದೇ ಸದಾ ಅವರ ಚಿಂತೆ. ಹಲವೆಡೆಗಳಲ್ಲಿ ಅವರು ಶಿಕ್ಷಣದ ಜೊತೆಗೆ, ವಯಸ್ಕರ ಶಿಕ್ಷಣ ಕುರಿತ ತರಬೇತಿ ಕೇಂದ್ರಗಳನ್ನು ನಿರ್ದೇಶಿಸುವುದರ ಜೊತೆಗೆ ಅಲ್ಲಿಯ ಜನರ ಜೀವನೋಪಾಯದ ಸಮಸ್ಯೆಗಳ ಪರಿಹಾರ ಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೂ ಉಂಟು, ಜೀವನಕ್ರಮ ಸುಧಾರಣೆಗೆ ಶ್ರಮಿಸಿದ್ದೂ ಉಂಟು, ಆ ಜನರ ಕಲಾಪ್ರಕಾರಗಳಲ್ಲಿ ಆಸಕ್ತಿ ವಹಿಸಿ ಅವರಿಗೆ ತಮ್ಮ ನಾಡಿನ ಜನರ ಕಲೆಗಳ ಪರಿಚಯ ಮಾಡಿಕೊಡುತ್ತಿದ್ದುದೂ ಉಂಟು. ಒಮ್ಮೆ ಇಂಡೊನೇಷ್ಯದ ಗ್ರಾಮಪ್ರದೇಶದಲ್ಲಿ ಪ್ರವಾಸ ಮಾಡುತ್ತಿದ್ದಾಗ ಒಂದು ಹಳ್ಳಿ ಯಲ್ಲಿ ಹೆಂಗಸೊಬ್ಬಳು ಒನಕೆಯಿಂದ ಬತ್ತ ಕುಟ್ಟುತ್ತಿದ್ದುದು ಕಂಡುಬಂತು. ಅಲ್ಲಿಯ ಜನ ಕಲಾವಂತರು. ಆದರೆ ಬತ್ತ ಕುಟ್ಟುವ ವಿಚಾರದಲ್ಲಿ ಮಾತ್ರ ಕೌಶಲ, ಕಲಾವಂತಿಕೆ ಗಳನ್ನೇಕೆ ಅವರು ಪ್ರದರ್ಶಿಸದೆ ಆಯಾಸವಾಗುವ ರೀತಿಯಲ್ಲಿ ಕುಟ್ಟುತ್ತಿದ್ದಾರೆ ಎನಿಸಿತು ಭದ್ರಯ್ಯನವರಿಗೆ. ಬತ್ತವನ್ನು ಸುಲಭವಾಗಿ, ಆಯಾಸವಾಗದಂತೆ ಕುಟ್ಟುವ ರೀತಿಯನ್ನು ಅವರು ತೋರಿಸಿಕೊಟ್ಟರು. ಅಲ್ಲಿಯ ಜನಕ್ಕೂ, ಭದ್ರಯ್ಯನವರ ಜೊತೆ ಗಾರರಿಗೂ ಪರಮಾಶ್ಚರ್ಯ. ಪ್ರತಿಯೊಂದು ಹಳ್ಳಿಯಲ್ಲೂ ನೀವು ಈ ಪ್ರದರ್ಶನ ವನ್ನೂ ನೀಡಿ ಎಂದು ಅವರು ಭದ್ರಯ್ಯನವರಿಗೆ ದುಂಬಾಲು ಬಿದ್ದರಂತೆ.

ಭದ್ರಯ್ಯನವರಿಗೆ ನಮ್ಮ ಜನಪದ ಕಲಾಪ್ರಕಾರಗಳ ಪರಿಚಯ ಚೆನ್ನಾಗಿತ್ತು. ಇಂಡೊನೇಷ್ಯದಲ್ಲಿ ಹಲವೆಡೆ ಇಂದಿಗೂ ರಾಮಾಯಣ ಮಹಾಭಾರತ ಕಥೆಗಳನ್ನು ಆಧರಿಸಿದ ತೊಗಲುಗೊಂಬೆ ಪ್ರದರ್ಶನಗಳು ನಡೆಯುವುವಂತೆ. ಇಂಥ ಒಂದು ಪ್ರದರ್ಶನದಲ್ಲಿ ಅವರು ಮುಖ್ಯ ಅತಿಥಿಯಾಗಿದ್ದರು. ಆಗ ಅವರು ನಮ್ಮಲ್ಲಿಯ ತೊಗಲುಗೊಂಬೆ ಆಟವನ್ನು ವಿವರಿಸಿದರು. ಆ ಜನಕ್ಕೆ ಕುತೂಹಲ ಕೆರಳಿತು. ಅವರ

ಒತ್ತಾಯಕ್ಕೆ ಕಟ್ಟುಬಿದ್ದು ಭದ್ರಯ್ಯನವರು ಪ್ರದರ್ಶನ ನೀಡಿದರು. ಇಡೀ ದಿನವೇ ಅವರ ತೊಗಲುಗೊಂಬೆಯಾಟಕ್ಕೆ ಮೀಸಲಾಯಿತಂತೆ.

ಎಂಥ ಪ್ರಸಂಗದಲ್ಲೂ ಸಹನೆ ಕಳೆದುಕೊಳ್ಳದ, ಭೀತಿಗೆ ಒಳಗಾಗದ ಪ್ರಸಂಗಾವಧಾನ ಭದ್ರಯ್ಯನವರು. ಅವರ ಪ್ರವಾಸಗಳಲ್ಲಿ ಅನೇಕ ವೇಳೆ ಅವರು ದಾರಿತಪ್ಪಿದ್ದೂ, ಪತ್ನಿಯೊಂದಿಗೆ ಅಪರಿಚಿತ ಹಾಗೂ ಅಪಾಯಕಾರಿ ಸನ್ನಿವೇಶದಲ್ಲಿ ಸಿಕ್ಕಿಬಿದ್ದದ್ದೂ ಉಂಟು. ಅಂಥ ಸಂದರ್ಭಗಳಲ್ಲಿ ಅವರು ಧೈರ್ಯಗೆಡದೆ ಪರಿಸ್ಥಿತಿಯಿಂದ ಪಾರಾಗುತ್ತಿದ್ದರು. ಇದನ್ನೆಲ್ಲ ಅವರು ತಮ್ಮ ಪ್ರವಾಸಕಥನಗಳಲ್ಲಿ ಹೇಳಿಕೊಂಡಿದ್ದಾರೆ.

ನ. ಭದ್ರಯ್ಯನವರದು ನೇರ ಸರಳವಾದ ಮುಚ್ಚುಮರೆಯಿಲ್ಲದ ಜೀವನ. ಅವರ ಬದುಕು ಒಂದು ತೆರೆದ ಪುಸ್ತಕ. ಅವರು ಯಾರಿಗೂ ಏನೂ ಉಪದೇಶ ಮಾಡುತ್ತಿರಲಿಲ್ಲ. ತಮ್ಮ ತಮ್ಮಂದಿರಿಗೆ ಕೂಡ. ದೊಡ್ಡ ದೊಡ್ಡ ಆದರ್ಶಗಳ ಮಾತಾಡದೆ, ಅವನ್ನು ನಂಬಿದಂತೆ ನಡೆಯುವುದಷ್ಟೇ ಅವರ ರೀತಿ. ಇತರರ ಕಷ್ಟದಲ್ಲಿ ಸದ್ದಿಲ್ಲದೆ ನೆರವು ನೀಡುವುದು, ಅನಂತರ ಅದನ್ನು ಮರೆತುಬಿಡುವುದು ಅವರ ಗುಣ. ಈಚೆಗೆ ಅವರೊಮ್ಮೆ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾಗ ಅದೇ ಆಸ್ಪತ್ರೆಯಲ್ಲಿ ಬೇರೊಂದೆಡೆ ಅವರ ಪರಿಚಿತರೊಬ್ಬರ ಬಂಧುಗಳು ಮಲಗಿದ್ದರು. ಆ ಪರಿಚಿತರು ಭದ್ರಯ್ಯನವರನ್ನು ನೋಡಿದಾಗ ತಮ್ಮ ಕಷ್ಟ ಹೇಳಿಕೊಂಡರು. ಆರ್ಥಿಕವಾಗಿ ಅವರು ತೊಂದರೆಯಲ್ಲಿದ್ದರು. ಭದ್ರಯ್ಯನವರು ಹಿಂದುಮುಂದು ನೋಡದೆ ಅವರಿಗೆ ಬೇಕಾಗಿದ್ದಷ್ಟು ಹಣಕ್ಕೆ ಚೆಕ್ ಬರೆದುಕೊಟ್ಟೇಬಿಟ್ಟರು. ಆ ಮೇಲೆ ಆ ಬಗ್ಗೆ ಚಕಾರವನ್ನು ಯಾರಲ್ಲೂ ಎತ್ತಲಿಲ್ಲ. ಎಷ್ಟೋ ಕಾಲವಾದ ಮೇಲೆ ಆ ಉಪಕೃತರು ಅವರಲ್ಲಿಗೆ ಬಂದು ಆ ಹಣವನ್ನು ಹಿಂದಿರುಗಿಸಿದಾಗ ಭದ್ರಯ್ಯನವರಿಗೇ ಅದರ ನೆನಪಿರಲಿಲ್ಲ. ಮನೆಯವರಿಗೂ ಆ ಸಂಗತಿ ತಿಳಿದದ್ದು ಆಗಲೇ. ಅವರ ಬದುಕಿನಲ್ಲಿ ಇಂಥ ಪ್ರಸಂಗಗಳು ಎಷ್ಟೋ.

ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಯಾಗಿ ಹಲವಾರು ದೇಶಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿ ಸಂಚಾರ ಮಾಡುತ್ತಿದ್ದಾಗಲೂ ತಮ್ಮ ಹಿರಿಮೆ ಗರಿಮೆಗಳ ಪರಿವೆಯೇ ಇಲ್ಲದೆ, ಅವರನ್ನು ಇತರರಿಗೆ ತೋರಗೊಡದೆ ಇದ್ದಾಗ ಎಷ್ಟೋ ವಿನೋದಕರ ಸನ್ನಿವೇಶಗಳು ಉದ್ಭವಿಸಿದ್ದೂ ಉಂಟು. ಪ್ರವಾಸಕಾಲದಲ್ಲಿ ಒಮ್ಮೆ ಅವರು ಸಿಂಗಪುರದಲ್ಲಿ ತಂಗಿದಾಗಿನ ಸಂದರ್ಭವನ್ನು ನಿದರ್ಶನವಾಗಿ ಕೊಡಬಹುದು. ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅವರು ಇತರ ಪ್ರಯಾಣಿಕರೊಂದಿಗೆ ಬಸ್ಸನ್ನೇರಿದರು. ಅದು ಸಿಂಗಪುರದ ಸುಪ್ರಸಿದ್ಧ ಹೋಟಲೊಂದರ ಮುಂದೆ ನಿಂತಿತು. ಭದ್ರಯ್ಯನವರೂ ಸಹಪ್ರಯಾಣಿಕರೊಂದಿಗೆ ಬಸ್ಸಿನಿಂದ ಇಳಿದರು. ಉಳಿದ ಪ್ರಯಾಣಿಕರ ಸಾಮಾನುಗಳನ್ನು ಹೋಟಲು ಸಿಬ್ಬಂದಿಯ ಜನ ಎತ್ತಿಕೊಂಡರು. ಆದರೆ ಭದ್ರಯ್ಯನವರ ಸೂಟ್‌ಕೇಸ್ ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಅವರ ಕೃಶ ದೇಹ, ಕೊಳೆಯಾದ ಉಡುಪು—ಇವನ್ನು ನೋಡಿ ಹೋಟಲ ಸಿಬ್ಬಂದಿ ಅವರನ್ನು ಯಾರೋ ಎಂದು ತಿಳಿದರು. 'ಇದು ರ್‍ಯಾಫೆಲ್ ಹೋಟೆಲ್, ಗೊತ್ತಾಯಿತೆ?' ಎಂದು ಕೂಡ ಒಬ್ಬ ಅರಚಿದ. ಭದ್ರಯ್ಯನವರು ಮಾತಾಡಲಿಲ್ಲ. ತಮ್ಮ ಸೂಟ್‌ಕೇಸನ್ನು ತಾವೇ ಎತ್ತಿಕೊಂಡು ಹೋಟಲಿನ ಒಳ ನಡೆದರು. ಹೋಟಲಿನ ಸ್ವಾಗತಕಾರ ಅವರು ಯಾರೆಂಬು

ದನ್ನು ತಿಳಿದು ಮರ್ಯಾದೆಯಿಂದ ನಡೆದುಕೊಂಡು ಅವರಿಗಾಗಿ ಒಳ್ಳೆಯ ಕೊಠಡಿಯನ್ನೇ ಗೊತ್ತುಮಾಡಿದ. ಅವರ ಕೈಪೆಟ್ಟಿಗೆಯನ್ನು ಎತ್ತಿಕೊಳ್ಳಲೊಲ್ಲದೆ ಸಿಡುಕಾಡಿದ ಆಳಿನ ಮುಖ ಹೇಗಿತ್ತೆಂಬುದನ್ನು ಊಹಿಸಿಕೊಳ್ಳಬೇಕು!

ನ. ಭದ್ರಯ್ಯನವರು ಈ ಪ್ರವಾಸಗಳನ್ನು ಕೈಗೊಳ್ಳುವುದಕ್ಕೆ ಮುಂಚೆ ರಚಿಸಿದ್ದ ಪುಸ್ತಕಗಳ ವಿಚಾರವನ್ನು ಹಿಂದೆ ಹೇಳಿದ್ದೇನೆ. ನಾನಾ ದೇಶಗಳಲ್ಲಿ ಅವರು ಮಾಡಿದ ಪ್ರವಾಸದ ಅನುಭವಗಳನ್ನೂ, ಮಾಡಿದ ಕೆಲಸದ ಸ್ವರೂಪವನ್ನೂ, ಆ ದೇಶಗಳ ಭೌಗೋಳಿಕ ಐತಿಹಾಸಿಕ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಸ್ವರೂಪಗಳನ್ನೂ, ಸಮಸ್ಯೆಗಳನ್ನೂ ಕುರಿತು ಅವರು ಮೂರು ಮಹತ್ವದ ಕೃತಿಗಳನ್ನು ಬರೆದಿದ್ದಾರೆ. 'ಕ್ಯಾಮರೂನಿನ ಬಣಗಳೊಡನೆ' ಎಂಬುದು ಒಂದು. 'ಪ್ರಪಂಚ ಪರ್ಯಟಣೆ' ಇನ್ನೊಂದು. 'ಯುನೆಸ್ಕೋ ಸೇವೆಯಲ್ಲಿ' ಎಂಬುದು ಮೂರನೆಯದು. ತಮ್ಮ ದಿನಚರಿಯ ನಮೂದುಗಳನ್ನು ಆಧರಿಸಿ ರಚಿಸಿರುವ ಈ ಕೃತಿಗಳಲ್ಲಿ ಭದ್ರಯ್ಯನವರ ವ್ಯಕ್ತಿತ್ವ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಆತ್ಮೀಯವಾದ ಗದ್ಯಶೈಲಿಯ ಈ ಕಥನಗಳು ಕನ್ನಡದ ಉತ್ತಮ ಪ್ರವಾಸ ಸಾಹಿತ್ಯವೆಂಬುದರಲ್ಲಿ ಸಂಶಯವಿಲ್ಲ. 'ಭದ್ರಯ್ಯನವರ ಸರಳ ನಡೆನುಡಿಗಳು, ಉದಾತ್ತವಾದ ಆಚಾರ ವಿಚಾರಗಳು, ಅವರು ಜನಜೀವನವನ್ನು ಕಾಣುವ ಸಮಗ್ರ ದೃಷ್ಟಿ ಧೋರಣೆಗಳು ಪುಟಪುಟಗಳಲ್ಲಿಯೂ ಪ್ರತಿಬಿಂಬಿಸಿವೆ' ಎನ್ನುತ್ತಾರೆ, ಡಾ. ತಿಪ್ಪೇರುದ್ರಸ್ವಾಮಿ. ಈ ಮಾತು ನೂರಕ್ಕೆ ನೂರರಷ್ಟು ನಿಜ. ನ. ಭದ್ರಯ್ಯನವರ ಕಾವ್ಯನಾಮ 'ನಭ', 'ಆಕಾಶ' ಎಂದು ಇದರ ಅರ್ಥ. ವಿಶ್ವವನ್ನೇ ಅಪ್ಪಿಕೊಳ್ಳುವ ವ್ಯಕ್ತಿತ್ವ ಅವರದು. ನಭ ಅವರ ಕೃತಿಗಳು ಈ ಮಾತಿಗೆ ಸಾಕ್ಷಿ.

ನ. ಭದ್ರಯ್ಯನವರು ಗಾಂಧಿಯವರ ಹಾದಿಯಲ್ಲಿ ನಡೆದವರು. ಗಾಂಧಿಯವರಂತೆಯೇ ಅವರದು ನಿಷ್ಕಾಮಂತ ಜೀವನ. ಅವರ ಪತ್ನಿ ಶಾಂತಿ ಅವರು ಅಮೆರಿಕನರು. ವಯಸ್ಕರ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವೀಧರರಾದ ಇವರು ಭದ್ರಯ್ಯನವರ ನಿಷ್ಠೆಯ ಬದುಕಿಗೆ ಮನಸೋತು ಒಲಿದವರು. ಭಾರತೀಯ ಜೀವನ ಸಂಸ್ಕೃತಿಗಳಿಗೆ ಮಾರುಹೋದವರು. ಭದ್ರಯ್ಯನವರ ಕೊನೆಯ ದಿನಗಳಲ್ಲಿ ಇವರು ತಮ್ಮ ಪತಿಗೆ ಮಾಡಿದ ಸೇವೆ ಅನುಪಮವಾದ್ದು. ಭದ್ರಯ್ಯನವರ ಆಯುಸ್ಸು ಇನ್ನಷ್ಟು ವಿಸ್ತರಿಸಲು ಸಾಧ್ಯವಾದ್ದು ಇವರಿಂದಾಗಿ.

ಭದ್ರಯ್ಯನವರ ವಿಶ್ರಾಂತ ಜೀವನ ಆಡಂಬರ ರಹಿತವಾದ್ದು. ನಾಡ ಬಿಡುಗಡೆಯ ಹೋರಾಟ, ಗ್ರಾಮಸೇವೆ, ವಿದ್ಯಾರ್ಥಿನಿಲಯಗಳ ಸ್ಥಾಪನೆ, ವಯಸ್ಕರ ಶಿಕ್ಷಣ ಮುಂತಾದ ಹಲವೆಂಟು ಚಳವಳಿಗಳನ್ನು ಹಮ್ಮಿಕೊಂಡು ನಿರ್ವಹಿಸಿದರೂ ಅವನ್ನೆಂದೂ ಅವರು ಸ್ವಪ್ರತಿಷ್ಠೆಯ ಅಥವಾ ಸ್ವಲಾಭದ ಸಾಧನಗಳಾಗಿ ಮಾಡಿಕೊಳ್ಳಲಿಲ್ಲ. ಪ್ರಚಾರಕ್ಕೂ ಅವರಿಗೂ ಬಹಳ ದೂರ. ತಮ್ಮ ದೂರವಾಣಿಯ ಸಂಖ್ಯೆ ಕೂಡ ಗುಟ್ಟಾಗಿರಬೇಕೆಂದು ಅವರು ಬಯಸಿದ್ದರು. ವಿನಾ ಕಾರಣ ಅವರು ಯಾರನ್ನಾದರೂ ಸಂಪರ್ಕಿಸುವುದಾಗಲಿ, ಇತರರು ಅವರನ್ನು ಸಂಪರ್ಕಿಸುವುದಾಗಲಿ ಅವರಿಗೆ ಹಿಡಿಸುತ್ತಿರಲಿಲ್ಲ. ನಗರದ ದೂರವಾಣಿ ಕೈಪಿಡಿಯಲ್ಲಿ ಅವರ ಹೆಸರು ಇರಬಾರದೆಂದು ಅವರು ಬಯಸಿದ್ದರು.

ಬದುಕಿನಲ್ಲಿ ಹೇಗೋ ಹಾಗೆ ಸಾವಿನಲ್ಲೂ ಅವರು ಪ್ರಚಾರವನ್ನು ದೂರ ಇಟ್ಟರು. ತಾವು ಸತ್ತಾಗ ತಮ್ಮ ದೇಹಕ್ಕೆ ಸ್ನಾನ ಮಾಡಿಸುವುದಾಗಲಿ, ಬಟ್ಟೆ ಬದಲಾಯಿಸುವುದಾಗಲಿ ಕೂಡದು. ಸತ್ತ ನಾಲ್ಕು ಗಂಟೆಯೊಳಗಾಗಿ ದೇಹವನ್ನು ವಿದ್ಯುಚ್ಛಕ್ತಿ ಚಿತಾಗಾರಕ್ಕೆ ಕೊಂಡೊಯ್ದು ಅಲ್ಲಿ ಚಿತೆಗೆ ಕೊಡಬೇಕು. ಯಾರಿಗೂ ಕಾಯಬೇಕಾಗಿಲ್ಲ. ಯಾವ ಉತ್ತರಾದಿ ಕ್ರಿಯೆಗಳೂ ಬೇಕಿಲ್ಲ. ಚಿತಾಭಸ್ಮವನ್ನು ತಂದು ತಮ್ಮ ತೋಟದ ಗಿಡಗಳಿಗೆ ಹಾಕಿದರೆ ಸಾಕು. ಇದು ಭದ್ರಯ್ಯನವರ ಅಂತ್ಯೇಚ್ಛೆ.

ಭದ್ರಯ್ಯನವರಿಗೆ ಅಂದವಾದ ಕೈತೋಟಗಾರಿಕೆಯಲ್ಲಿ ಅಪಾರವಾದ ಆಸಕ್ತಿ. ಮನೆಯ ಸುತ್ತಣ ಹೂಗಿಡಗಳೇ ಅವರ ಸಂಗಾತಿಗಳು. ಅರಳುವ ಹೂಗಳಲ್ಲಿ ಭದ್ರಯ್ಯನವರು ವಿಶ್ವಾತ್ಮವನ್ನೇ ಕಾಣುತ್ತಿದ್ದರು. ಅದರಲ್ಲಿ ಲೀನವಾಗುವುದಷ್ಟೇ ಅವರಿಗಿದ್ದ ಬಯಕೆ. ಕರ್ನಾಟಕದಲ್ಲೂ, ವಿಶ್ವದ ಇತರ ಹಲವು ಎಡೆಗಳಲ್ಲೂ ನಡೆದಾಡಿದಲ್ಲೆಲ್ಲ ನಗೆಯ ನೆಮ್ಮದಿಯ ಹೂ ಅರಳಬೇಕೆಂದು ಹಂಬಲಿಸಿದವರು, ನ. ಭದ್ರಯ್ಯ.

---

ಮಕ್ಕಳು, ಯುವಕರು ಮತ್ತು ಮಹಿಳೆಯರು—ಎಲ್ಲರೂ ಸರಿಸಮಾನವಾಗಿ ಬೆಳೆಸಿಕೊಳ್ಳಬಹುದಾದ ಶಕ್ತಿ ಅಂದರೆ ಅಹಿಂಸೆ.

ಕೆಟ್ಟದ್ದನ್ನು ನಾಶಮಾಡದಿರಬೇಕಾದರೆ, ಕೆಟ್ಟದ್ದರಿಂದ ಪೂರ್ಣವಾಗಿ ದೂರ ಇರಬೇಕು.

ಗಾಂಧೀಜಿ

# ನ. ಭದ್ರಯ್ಯ—ಆಪ್ತ ನೆನಪುಗಳು

ಎಚ್. ಎಚ್. ಅಣ್ಣಯ್ಯಗೌಡ

ಭದ್ರಯ್ಯನವರು ಇನ್ನಿಲ್ಲ. ವಾರಕ್ಕೆ ಒಂದೆರಡು ಬಾರಿ ಅವರನ್ನು ಭೇಟಿಮಾಡಿ ಇಹಪರ ವಿಚಾರಗಳ ಬಗ್ಗೆ ಮಾತನಾಡುವ ಭಾಗ್ಯ ನನ್ನದಾಗಿತ್ತು. ಅವರನ್ನು ಭೇಟಿ ಮಾಡುವುದು ವಿಳಂಬವಾದರೆ ಅಥವಾ ದೂರವಾಣಿಯ ಮೂಲಕವಾದರೂ ಮಾತನಾಡಲು ಬಿಡುವಿಲ್ಲದ ಪಕ್ಷದಲ್ಲಿ "ಏನು ಪ್ರೊಫೆಸರ್, ಎಲ್ಲಿ ಹೋಗಿದ್ದಿರಿ? ಊರಲ್ಲಿರಲಿಲ್ಲವೇ? ಅಧ್ಯಯನ, ಬರಹ ಹೇಗಿದೆ? ಸದ್ಯಕ್ಕೆ ಏನು ಕುರಿತು ಚಿಂತನೆ ನಡೆಸಿದ್ದೀರಿ?" ಎಂಬಿತ್ಯಾದಿ ಹೃದಯದಿಂದ ಬರುವ ಆಪ್ಯಾಯಮಾನಕರವಾದ ಮಾತುಗಳನ್ನು ಯಾರಿಂದ ನಿರೀಕ್ಷಿಸುವುದು? ಚಾರ್ಲ್ಸ್ ಲ್ಯಾಂಬ್ ತನ್ನ ಒಬ್ಬ ಸ್ನೇಹಿತನನ್ನು ಕುರಿತು ಒಂದು ಕಡೆ ಆಡುವ ಮಾತುಗಳು ನೆನಪಿಗೆ ಬರುತ್ತವೆ: "He was good man, if even good man lived"—"ಒಳ್ಳೆಯ ಮನುಷ್ಯ ಬದುಕಿದ್ದರೆ, ಇವನೇ ಆತ".

ನಭ ಅವರನ್ನು ಅನೇಕರು ಅನೇಕ ದೃಷ್ಟಿಕೋನಗಳಿಂದ ನೋಡ ಬಹುದು; ಅವರು ಒಂದು ಸಮುದ್ರದಂತೆ. ಈ ಕಾಲದಲ್ಲಿ ಅಪರೂಪವಾಗುತ್ತಿರುವ ಪಂಥಕ್ಕೆ ಸೇರಿದ ಗಾಂಧೀವಾದಿ. ಸರಳ ವ್ಯಕ್ತಿ, ಶಿಕ್ಷಣ ತಜ್ಞ, ಬರಹಗಾರ, ಪತ್ರಿಕೋದ್ಯಮಿ, ದೇಶಭಕ್ತ. ಹಳೆಯ ಮೈಸೂರು ಪ್ರಾಂತ್ಯದಲ್ಲಿ ವಿದ್ಯಾಪೀಠಗಳು ಮೈದಾಳಿ ವಯಸ್ಕರ ಶಿಕ್ಷಣ ಹಬ್ಬಲು ದುಡಿದವರು. ಇಂಥ ಮಹನೀಯ ನನ್ನ ಪಾಲಿಗೆ "Friend, Philosopher and Guide."

ಇವರನ್ನು ನಾನು ಮೊದಲು ನೋಡಿದ್ದು ನಮಗೆಲ್ಲ ಸ್ನೇಹಿತ ರಾಗಿದ್ದ ದಿವಂಗತ ರಾಜಗೋಪಾಲರವರ ಕಂಟೋನ್‌ಮೆಂಟ್ ಸೆಪ್ಪಿಂಗ್ಸ್ ರೋಡ್ ಮನೆಯಲ್ಲಿ, ೧೯೫೩–೫೪ರಲ್ಲಿ. ಇಬ್ಬರೂ ನಿಲುವಂಗಿ, ಬಿಳಿ ಪಂಚೆ ಧರಿಸುತ್ತಿದ್ದರು. ಸದಾ ಶ್ವೇತವಸ್ತ್ರಧಾರಿ ಗಳಾದ ಇವರ ಚಿತ್ರ ನನ್ನ ಕಣ್ಮುಂದೆ ಬರುವಂತಾಯಿತು. ನಾನು

ಇಂಗ್ಲಿಷ್ ಉಪಾಧ್ಯಾಯ ಎಂದು ತಿಳಿದ ಮೇಲೆ ನಮ್ಮಲ್ಲಿ ಇಂಗ್ಲಿಷ್ ಓದುವವರು ತೀರಾ ವಿರಳ ಚೆನ್ನಾಗಿ ಓದಿ ಎಂದು ಪ್ರೋತ್ಸಾಹದ ಮಾತನಾಡಿದರು. ಅವರ ಅನನ್ಯ ಆತ್ಮೀಯತೆಗೆ ನಾನು ಮರುಳಾದೆ. ಅಂದಿನಿಂದ ನಮ್ಮ ಸ್ನೇಹ ಗಾಢವಾಯಿತು. ತರುವಾಯದಲ್ಲಿ ನನಗೆ ಮೈಸೂರಿಗೆ ವರ್ಗವಾಯಿತು. ಹಾಗಾಗಿ ಹೆಚ್ಚು ಹೆಚ್ಚು ಅವರನ್ನು ಭೇಟಿ ಮಾಡುವುದು ಸಾಧ್ಯವಾಯಿತು. ಆಗ ಅವರು ಕೃಷ್ಣಮೂರ್ತಿಪುರಂ ನಲ್ಲಿ ವಾಸಿಸುತ್ತಿದ್ದರು. ಆ ಸಂದರ್ಭದಲ್ಲಿಯೇ ನನಗೆ ದಿ॥ ಶ್ರೀರಂಗರಾಜು ಮತ್ತು ಮುಂದೆ ನಭರವರ ಪತ್ನಿಯಾದ Miss Evans ಅವರ ಪರಿಚಯವಾಯಿತು.

ನಾನು ಅನೇಕ ಸಲ ವಿದೇಶದಲ್ಲಿ ಅವರನ್ನು ಭೇಟಿಯಾದಾಗಲೂ ಅವರು ಉಡುಗೆತೊಡುಗೆಗಳಲ್ಲಿ ಖಾದಿಯನ್ನು ಬಿಟ್ಟು ಬೇರೆ ಧರಿಸಿದುದು ನನ್ನ ಗಮನಕ್ಕೆ ಬರಲಿಲ್ಲ; ಅವರ ಅಪ್ಪಟ ಗಾಂಧಿತನ ನನಗೆ ಮತ್ತಷ್ಟು ಸ್ಪಷ್ಟವಾಯಿತು. ೧೬೫೬ರಲ್ಲಿ ಪಿಕ್ಯಾಡೆಲಿಯಲ್ಲಿ ಭೇಟಿಯಾದ ಸಂದರ್ಭ ನೆನೆಪಿಗೆ ಬರುತ್ತಿದೆ. ನಮ್ಮ Mysore Trade Agent ರಾಗಿದ್ದ ಶ್ರೀ H.G.U. ರೆಡ್ಡಿ (ಈಗ ಇವರು B.D.A. ಅಧ್ಯಕ್ಷರು) ಯವರ ಕೊಠಡಿಯಲ್ಲಿ ಭೇಟಿಯಾಯಿತು. ನನ್ನ ಕ್ಷೇಮ ಸಮಾಚಾರ ವಿಚಾರಿಸಿಯಾದ ಮೇಲೆ ಡರ್‍ಬ್ಯಾರಿ ವಿ. ವಿ. ನಿಲಯಕ್ಕೆ ಯಾವಾಗ ಹೋಗುತ್ತಿದ್ದೀರಿ ಅಂದರು. ಕೆಳಗಡೆ ಇದ್ದ ಹೋಟೆಲ್ ಒಂದರಲ್ಲಿ ಕಾಫಿ ಕುಡಿಯುವಾಗ: ಮಡದಿ ಮಕ್ಕಳನ್ನು ಬಿಟ್ಟು ಬಂದಿದ್ದೀರಿ; ಬೇಜಾರಾಗುವುದು ಸಹಜ. ಕಾಗದ ಪತ್ರ ಬರೆಯುತ್ತಿರಿ ಎಂದು ಧೈರ್ಯದ ಮಾತು ಆಡಿದರು. ನಾಲ್ಕೈದು ಗಂಟೆಗಳ ಕಾಲ ಲಂಡನ್ನಿನಲ್ಲಿ ಒಟ್ಟಿಗಿದ್ದೆವು.

ಆನಂತರ ನಾನು ೧೯೬೬ ರಲ್ಲಿ Fulbright Senior professor ಆಗಿ ಅಮೆರಿಕಾದ washington D. C. ಯಲ್ಲಿದ್ದ ಸಂದರ್ಭದಲ್ಲಿ ಇಂಡೊನೇಷಿಯಾ ದಿಂದ ಒಂದು ಕಾಗದ ಬರೆದರು. ಆ ವೇಳೆಗೆ ಅವರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ Miss Evans ರನ್ನು ಮದುವೆಯಾಗಿದ್ದರು. ಮದುವೆಯಾದ ಮೇಲೆ ಅವರನ್ನು ಶಾಂತಿ ಎಂದು ಕರೆದರು. ಶಾಂತಿಯೇ ಮೈವೆತ್ತಂತಿರುವ ಇವರು ನಭರೊಡನೆ ಹೆಗಲಿಗೆ ಹೆಗಲು ಕೊಟ್ಟು ಮೂರು ದಶಕಗಳ ಕಾಲ ಸೇವೆಸಲ್ಲಿಸಿ ಆದರ್ಶ ದಾಂಪತ್ಯ ವನ್ನು ಮೆರೆದಿದ್ದಾರೆ. ಶ್ರೀಮತಿಯವರು ಓದಿದ್ದು ಅಮೆರಿಕೆಯಲ್ಲಿ ಪ್ರಸಿದ್ಧವಾದ ವ್ಯಾಸರ್ ಮಹಿಳಾ ಕಾಲೇಜಿನಲ್ಲಿ. ಅನಂತರ Fulbright ವಿದ್ಯಾರ್ಥಿ ವೇತನ ಪಡೆದು ವಯಸ್ಕರ ಶಿಕ್ಷಣದ ಬಗ್ಗೆ ಹಾಗೂ ಗಾಂಧೀಜಿಯವರ ಮೇಲೆ ಅಧ್ಯಯನ ಮಾಡಲು ಇಂಡಿಯಾಕ್ಕೆ ಬಂದರು. ಭದ್ರಯ್ಯನವರಿಗಿಂತ ಉತ್ತಮವಾದ ಗಾಂಧಿವಾದಿ, ಮಾರ್ಗದರ್ಶಿ ಅವರಿಗೆ ಬೇರೆ ಎಲ್ಲಿ ಸಿಕ್ಕಬಲ್ಲರು? ಆ ದಾಂಪತ್ಯದ ಫಲವಾಗಿ ಹುಟ್ಟಿದ ಹೆಣ್ಣು ಮಗು ಶುಭ ಈಗ ಉದಯೋನ್ಮುಖ ಕವಿ.

ನಭರವರು ಸಾಯುವುದಕ್ಕೆ ಮೊದಲು ಮಗಳ ಮದುವೆಯನ್ನು ಅವಳ ಸಹಪಾಠಿ ಸುಬ್ರಹ್ಮಣ್ಯಂ ಜೊತೆ ನೆರವೇರಿಸಿದ್ದರು. ಪ್ರವೃತ್ತಿಯಲ್ಲಿ ಕವಿಯಾದರೂ ಶುಭ ವೃತ್ತಿಯಲ್ಲಿ ಇಂಜನಿಯರ್; ಮಗಳು ಅಳಿಯ ಇಬ್ಬರೂ ಇಂಜನಿಯರ್ ಆಗಿರುವ ವಿಷಯ ನಭರವರಿಗೆ ಸಂತೋಷ ತಂದಿತ್ತು.

Miss Evans ಇವರನ್ನು ಭೇಟಿಯಾದ ಅನಂತರ ಅವರ ಜೀವನದಲ್ಲಿ ಮಹತ್ತರವಾದ ಮಾರ್ಪಾಡು ಆಯಿತು. ಇವರು ವಾಷಿಂಗ್‌ಟನ್‌ನಲ್ಲಿ ಸ್ವಲ್ಪ ದಿನ President hostel ನಲ್ಲಿದ್ದರು. ಅನಂತರ ಆಫ್ರಿಕಾದ Kenya ದಲ್ಲಿದ್ದರು. ಯುಗಾಂಡಾದ ಮಕರೇರಿ ವಿಶ್ವವಿದ್ಯಾನಿಲಯದ ಕಾಮನ್‌ವೆಲ್ತ್ ಸಮ್ಮೇಳನಕ್ಕೆ ನಾನು ಹೋಗುವಾಗ ಮತ್ತು ವಾಪಸ್ಸು ಬರುವಾಗ ಒಂದೆರಡು ದಿನ ಇವರ ಮನೆಯಲ್ಲಿ ತಂಗಿದ್ದೆ. ಆ ವೇಳೆಗೆ ಶುಭ ದೊಡ್ಡ ಹುಡುಗಿಯಾಗಿ ಬೆಳೆಯುತ್ತಿದ್ದಳು. ಪದ್ಯ ಬರೆಯುವು ದಕ್ಕೂ ಶುರು ಮಾಡಿದ್ದಳು. Kenya Publishing house ಇವಳ ಒಂದು ಸಂಕಲನವನ್ನು ಪ್ರಕಟಿಸಿದೆ. ಮುಂದೆ ಬಹಳ ಬುದ್ಧಿವಂತೆಯಾಗುವಳು ಎಂದು ನನಗೆ ಆಗಲೇ ತೋರಿತ್ತು. ಮಗಳ ವಿದ್ಯಾಭ್ಯಾಸವನ್ನು ತಾಯಿ ಶಾಂತಿ ಬಹಳ ಎಚ್ಚರಿಕೆಯಿಂದ ಮುಂದುವರಿಸಿದ್ದರು. ಇವಳಲ್ಲಿ ನೃತ್ಯ, ಸಂಗೀತ, ಸಾಹಿತ್ಯ ಇವು ಮೂರು ಮುಪ್ಪುರಿ ಗೊಂಡಿವೆ. ಇವಳ ಯಶಸ್ಸಿನ ಹಿಂದೆ ಭದ್ರಯ್ಯ ದಂಪತಿಗಳ ಶ್ರಮ ಇದೆ ಎಂದು ಬೇರೆ ಹೇಳಬೇಕಾಗಿಲ್ಲ. ಭದ್ರಯ್ಯನವರು UNESCO ದಲ್ಲಿ ಮಾಡಿದ ಸ್ತುತ್ಯಾರ್ಹವಾದ ಕೆಲಸವನ್ನು ಜಗತ್ತಿನ ನಾನಾ ಖಂಡಗಳ ವಿದ್ವನ್ಮಣಿಗಳು ಮೆಚ್ಚಿಕೊಂಡಿದ್ದಾರೆ. ಅವರ ಅತಿಥಿಯಾಗಿದ್ದ ಒಂದೆರಡು ದಿನಗಳಲ್ಲಿ Kenya ದ National park ಮತ್ತು Museume ಮತ್ತಿತರ ನೋಡತಕ್ಕ ಸ್ಥಳಗಳನ್ನು ತೋರಿಸಿ, ಮಾರನೆಯ ದಿನ ಭಾರತಕ್ಕೆ ನನ್ನನ್ನು ಬೀಳ್ಕೊಟ್ಟರು.

೧೯೬೦ ರಲ್ಲಿ ರೀಡರ್ ಆಗಿ ನಾನು ಮೈಸೂರಿಗೆ ಬಂದೆ. ಅವರಿನ್ನೂ ವಿದೇಶದಲ್ಲಿಯೇ ಇದ್ದರು. ಪತ್ರ ಬರೆದು ಆಗಾಗ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು. ಅವರು ಮರಳಿ ಭಾರತಕ್ಕೆ ಬಂದ ಮೇಲೆ, ಮೊದಲೇ ತಿಳಿಸಿದ ಹಾಗೆ ಅವರ ನನ್ನ ಬಾಂಧವ್ಯ ಬಹಳ ಗಾಢವಾಯಿತು. ಒಂದು ವಾರ ಮೀರುವುದರೊಳಗೆ ಅವರನ್ನು ಭೇಟಿ ಮಾಡ ಬೇಕಾಗಿತ್ತು, ಇಲ್ಲವೇ ದೂರವಾಣಿಯ ಮೂಲಕ ಮಾತನಾಡಬೇಕಾಗಿತ್ತು; ಇಲ್ಲದೇ ಹೋದರೆ ಏನೋ ನಷ್ಟವಾದಂತೆನಿಸುತ್ತಿತ್ತು. "A friend in need is a friend in deed" ಎಂಬ ಮಾತು ಅವರಿಗೆ ಚೆನ್ನಾಗಿ ಒಪ್ಪುವುದು. ನಮ್ಮ ಆಪ್ತ ವಲಯಕ್ಕೆ ಸೇರಿದ್ದ ರಾಜಗೋಪಾಲ್ ಮತ್ತು ಕರಿಯಪ್ಪನವರು ಭದ್ರಯ್ಯ ನವರಿಗಿಂತ ಮೊದಲೇ ದೇಹ ಬಿಟ್ಟರು. ನಾನು ಏನು ಕೆಲಸಮಾಡಬೇಕಾದರೂ ಇವರಿಗೆ ತಿಳಿಸುತ್ತಿದ್ದೆ ಅಥವ ಸಮಾಲೋಚನೆ ನಡೆಸುತ್ತಿದೆ. ನಾನು ಇಂಗ್ಲಿಷ್ ವಿಭಾಗದಲ್ಲಿ ಅಥವ ಕಾಮನ್‌ವೆಲ್ತ್ ಸೆಂಟರ್‌ನಲ್ಲಿ ಒಂದು ಸೆಮಿನಾರೋ ಅಥವಾ ನಾಟಕವನ್ನೋ ಏರ್ಪಾಟು ಮಾಡಿದರೆ ಭದ್ರಯ್ಯ ದಂಪತಿಗಳು ಬಂದು ಬಹಳ ಸಂತೋಷದಿಂದ ಭಾಗವಹಿಸುತ್ತಿದ್ದರು. ಕಾಮನ್‌ವೆಲ್ತ್ ಸೆಂಟರ್‌ಗೆ ಬಂದ ಅಚಿಬೆ, ಬ್ರಾತ್‌ವೇಯ್ಟ್ ದಂಪತಿಗಳು, ಕಿಂಗ್ ದಂಪತಿಗಳು ಇವರ ಮನೆಗೆ ಹೋಗಿ ಚಹಾ ಪಾನ ಮಾಡುತ್ತ ಸಾಹಿತ್ಯ, ರಾಜಕೀಯ ವಿಚಾರವನ್ನು ಕುರಿತು ಚರ್ಚೆ ಮಾಡುತ್ತಿದ್ದರು. ಇಂಥ ಸಂದರ್ಭಗಳು ಸಾಂಸ್ಕೃತಿಕ ಸಭೆಗಳಾಗಿ ಪರಿವರ್ತನಗೊಳ್ಳುತ್ತಿದ್ದುವು. ಆಸ್ಟ್ರೇಲಿಯಾದ ಕ್ರೆಪ್ಸ್ ಎನ್ನುವ ಕವಯಿತ್ರಿ ಭದ್ರಯ್ಯ ದಂಪತಿಗಳ ಮೂಲಕ ಶುಭಳ ಪರಿಚಯ ಗಳಿಸಿದಳು. ಶುಭ ಕೊಟ್ಟ ಉಡುಗೊರೆಯಾದ ಸೀರೆಯನ್ನು ಅವಳು ಸ್ವೀಕರಿಸಿ ಅನಂತರ ಒಂದು ಪದ್ಯದಲ್ಲೂ ಈ ಎಲ್ಲ ಅನುಭವಗಳನ್ನು ಅಭಿವ್ಯಕ್ತಗೊಳಿಸಿದ್ದಾಳೆ.

ನನ್ನ ಜೀವನದ ಅತ್ಯಂತ ಮುಖ್ಯವಾದ ಘಟ್ಟವೆಂದರೆ ಆಗಿನ ಮುಖ್ಯಮಂತ್ರಿಯುವರಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರ ಸಾಹಿತ್ಯ ಕಾರ್ಯದರ್ಶಿಯಾಗಿ ೧೯೫೫ ಅವರ staff ಅನ್ನು ಸೇರಿದುದು. ನ. ಭದ್ರಯ್ಯನವರು, ದಿ|| ಕರಿಯಪ್ಪನವರು ಪ್ರೊಫೆಸರ್ ಜವರೇಗೌಡರು ಮತ್ತು chief justice ರಾಗಿದ್ದ ದಿ|| ಎಚ್. ಹೊಂಬೇಗೌಡರು ಇದಕ್ಕೆ ಸಮ್ಮತಿಸಿದ್ದರು. ಇವರೆಲ್ಲ ನನ್ನ ಹಿತ ಚಿಂತಕರು.

ಶ್ರೀಯುತರು ೧೯೫೩ ಅಥವ ೫೪ ರಲ್ಲಿ ಕುವೆಂಪು ಟ್ರಸ್ಟ್ ಮಾಡಬೇಕೆಂದು ಆರಂಭಿಸಿದ್ದರು. ಹಿಂದೆ ಕಾಂಗ್ರೆಸ್ ಮುಖ್ಯ ಮಂತ್ರಿಯಾಗಿದ್ದ ದಿ|| ಚೆಂಗಲ್‌ರಾಯರೆಡ್ಡಿ ಅದಕ್ಕೆ ಅಧ್ಯಕ್ಷರು. ಆ ಸಂದರ್ಭದಲ್ಲಿ ನಾವು ಈ ಕುರಿತು ವಿಚಾರ ಪ್ರಸ್ತಾಪ ಮಾಡುವಾಗ ಶ್ರೀ ಕೆಂಗಲರ ಭೇಟಿಯಾದದ್ದು ಉದಕಮಂಡಲದಲ್ಲಿ. ನನ್ನ ಹೆಸರು ಪರಿಚಯುವಾದ ಕೂಡಲೆ ಆ ವೇಳೆಗೆ ಪ್ರಕಟವಾಗಿದ್ದ ನನ್ನ "ಮೃಗಪ್ರಭುತ್ವ" ಗ್ರಂಥವನ್ನು ಅವರು ನೆನಪು ಮಾಡಿಕೊಂಡರು. ಅವರು ಅದನ್ನು ಓದಿದ್ದರು. ನಾನು ಅವರ ಸಾಹಿತ್ಯ ಕಾರ್ಯದರ್ಶಿಯಾಗಲು ಇದು ನಾಂದಿಯಾಯಿತು. ರಾಜಗೋಪಾಲ್‌ರವರು ಕೆ. ಸಿ. ರೆಡ್ಡಿಯುವರ ಹತ್ತಿರ ಕೆಲಸಮಾಡಿದ್ದವರು. ಹಾಗಾಗಿ ಶ್ರೀ ಹನುಮಂತಯ್ಯನವರನ್ನು ಕಂಡರೆ ಕೊಂಚ ಕಹಿ. ನನ್ನನ್ನು ಅವರಿಗೆ "ಮಾರಮ್ಮನ ಪೂಜಾರಿ" ಎಂದು ತಮಾಷೆ ಮಾಡುತ್ತಿದ್ದರು. ಭದ್ರಯ್ಯನವರು ಪದೇ ಪದೇ ಈ ಮಾತನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಶ್ರೀ ಹನುಮಂತಯ್ಯನವರು ಮತ್ತು ಶ್ರೀ ಕೆ. ಸಿ. ರೆಡ್ಡಿಯುವರದ್ದು ಕೇವಲ personality problem ಅಷ್ಟೆ. ಇಬ್ಬರೂ ಪಟ್ಟು ಬಿಡದವರು. ತಾವು ಯೋಚಿಸಿದ್ದೇ ಸರಿ ಎನ್ನುವ ಸ್ವಭಾವದವರು. ಆದರೆ ಅವರು ಹೃದಯಾಂತರಾಳದಲ್ಲಿ ಮಾತ್ರ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು.

ಭದ್ರಯ್ಯನವರಲ್ಲಿ ಸಣ್ಣತನ ಇರಲಿಲ್ಲ. ಜಾತೀಯತೆಯನ್ನು ಕಂಡರೆ ಅವರು ಸಿಡಿಯುತ್ತಿದ್ದರು. ಇದನ್ನು ಗಮನಿಸಿದ ಕುವೆಂಪುರವರು ಭದ್ರಯ್ಯನವರು ನನ್ನ ಕಲ್ಪನೆಯ ವಿಶ್ವಮಾನವ ಎಂದು ವರ್ಣಿಸುತ್ತಿದ್ದರು. ಇವರು ಖಾಯಿಲೆ ಬಿದ್ದಾಗ ಪುಟ್ಟಪ್ಪನವರು ತಮ್ಮ ಅಳಿಯ ಡಾ|| ಚಿದಾನಂದಗೌಡರ ಮೂಲಕ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳುತ್ತಿದ್ದರು. ಗುರು ಅವರಿಗೆ ಒಳ್ಳೆಯದು ಮಾಡಲಿ ಎಂದು ಹಾರೈಸುತ್ತಿದ್ದರು.

ಇವರು ಮೈಸೂರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕೆಲಸ ಬಹಳ ಮಹತ್ತರವಾದುದು. ಅಪ್ಪಟಗಾಂಧಿ ಅನುಯಾಯಿಗಳಾದ ಇವರು ಡೆನ್ಮಾರ್ಕ್ ಸಹಾಯ ಪಡೆದು ಒಂದೊಂದು ಜಿಲ್ಲೆಯಲ್ಲೂ ವಿದ್ಯಾಪೀಠಗಳನ್ನು ತೆರೆದರು. ನಾನು ಒಂದು ಪೀಠದ ಸಮಿತಿಯ ಸದಸ್ಯನೂ ಆಗಿದ್ದೆ.

ಪುಸ್ತಕರಹಿತ ಮನೆಗಳಿಗೆ ("Bookless homes") ಸ್ಲೇಟು, ಪುಸ್ತಕಗಳ ಹೊಳೆ ಹರಿಸಿ ವಯಸ್ಸಾದ ಮುದುಕರೂ ಓದಿ ವಿದ್ಯಾವಂತರಾಗಲು ಶ್ರೀಯುತರು ಶ್ರಮಿಸಿದರು. ಅವರು ಇದ್ದ ಕಾಲದಲ್ಲಿ ಹಣದ ಕೊರತೆ ಇತ್ತು. ಸರ್ಕಾರದ ಗ್ರಾಂಟ್ ಒಂದು ಲಕ್ಷವೋ ಎರಡು ಲಕ್ಷ ರೂಪಾಯಿಯೋ ಆಗಿರುತ್ತಿತ್ತು; ಇಂತಹ ಮುಗ್ಗಟ್ಟಿನ ಕಾಲದಲ್ಲೂ ಎಲ್ಲ ಕಡೆ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿ ಅನಕ್ಷರಸ್ಥರಿಗೆ ಜ್ಞಾನದ ದೀವಿಗೆಯನ್ನು ಕೊಟ್ಟರು. ತಾವಾಗಿ ಎಂದೂ ಯಾವ ಪದವಿಯನ್ನೂ ಯಾವ

ಪುರಸ್ಕಾರವನ್ನೂ ಅವರು ಆಶಿಸಿದವರಲ್ಲ. ರಾಜ್ಯ ಸರ್ಕಾರದ ಪದವಿ ಮತ್ತು ನೆಹರೂ ಪುರಸ್ಕಾರ ಅವರನ್ನು ಹುಡುಕಿಕೊಂಡು ಬಂದ ಪದವಿಗಳಾಗಿವೆ.

ನಿವೃತ್ತರಾಗಿ Kenyaದಿಂದ ವಾಪಸ್ಸು ಬಂದ ಮೇಲೆ ನಿವೃತ್ತಿಯ ದಿನಗಳನ್ನು ಯಾವ ರೀತಿ ಕಳೆಯುವುದು ಎಂಬ ಪ್ರಶ್ನೆ ಅವರನ್ನು ಕಾಡಲಿಲ್ಲ. ಸುಂದರವಾದ ಮನೆ, ಮನೆಯ ಸುತ್ತಮುತ್ತ ನಾನಾ ತರಹದ ಹೂವಿನ ಗಿಡಗಳು, ಎತ್ತರದ ಅಡಿಕೆ ಮರಗಳು. ಸಂಜೆಹೊತ್ತು ಈ ಪರಿಸರದಲ್ಲಿ ಕುಳಿತುಕೊಂಡು ಶಾಂತಿಯವರು ಗ್ರಂಥ ಪಠಣ ಮಾಡಿದರೆ ಶ್ರೀಯುತರು ಏಕಾಗ್ರತೆಯಿಂದ ಕೇಳಿಸಿಕೊಳ್ಳುತ್ತಿದ್ದರು. "ಶ್ರೀ" ಎಂಬ ನಾಮಾಂಕಿತದ ಇವರ ಮನೆ ನಿಜವಾದ ಅರ್ಥದಲ್ಲಿ ಒಂದು "ಧಾಮ". ಕವಿ Auden ಹೇಳುವಂತೆ: "home in a beautiful landscope."

ಪರೋಪಕಾರಕ್ಕೆ ಹೆಸರಾದ ಇವರು ಅಸಂಖ್ಯಾತರಿಗೆ ಸಹಾಯ ಮಾಡಿದ್ದಾರೆ. ತಮ್ಮ ಹುಟ್ಟಿದ ಊರಿನಲ್ಲಿ ಉಚಿತವಾಗಿ ಒಂದು ಶಾಲೆ ನಡೆಸುತ್ತಿದ್ದರು. ಸ್ನೇಹಿತರಿಗೆ ಮತ್ತು ಸಂಬಂಧಿಗಳಿಗೆ ತೊಂದರೆ ಬಂದರೆ ತಮ್ಮ ಮಿತಿಯನ್ನೂ ಮೀರಿ ಸಹಾಯ ಮಾಡಲು ಮುಂದಾಗುತ್ತಿದ್ದರು.

ಚುಂಚನಗಿರಿ ಮಠವೆಂದರೆ ಬಹಳ ಪ್ರೇಮ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ರಚನಾತ್ಮಕ ಕೆಲಸಗಳನ್ನು ಬಹುವಾಗಿ ಮೆಚ್ಚಿಕೊಂಡು ಆ ದಿಶೆಯಲ್ಲಿ ತಮ್ಮ ಕೈಲಾದುದನ್ನು ಮಾಡಲು ತೊಡಗುತ್ತಿದ್ದರು. ಸ್ವಾಮೀಜಿಯವರಿಗೂ ಶ್ರೀಯುತರೆಂದರೆ ಅಷ್ಟೆ ಅಕ್ಕರೆ. ಶ್ರೀಯುತರು ಅಸುನೀಗುವುದಕ್ಕೆ ಮೊದಲು ಸ್ವಾಮೀಜಿ ಯವರಿಗೆ ಅವರನ್ನು ನೋಡಬೇಕೆನ್ನಿಸಿತಂತೆ. ಸ್ವಾಮಿಗಳ ಆಶೀರ್ವಾದ ಮಾತ್ರ ಶ್ರೀಯುತರ ಮೇಲೆ ಎಂದೆಂದೂ ಇದ್ದೇ ಇದೆ.

ಶ್ರೀಯುತರ ಸಾಹಿತ್ಯ ಸೇವೆಯೂ ಗಣನೀಯವಾದುದೇ. ಪರ್ವತಾರೋಹಣ, ಆರೋಗ್ಯಶಾಸ್ತ್ರ, ಖಗೋಳಶಾಸ್ತ್ರ ಮತ್ತು ಪ್ರವಾಸಸಾಹಿತ್ಯ ವಿಭಾಗಗಳಲ್ಲಿ ಗ್ರಂಥ ರಚನೆ ಮಾಡಿದ್ದಾರೆ. ಅಪರೂಪವಾದ ಸರಳ ಶೈಲಿಯನ್ನು ಕರಗತ ಮಾಡಿಕೊಂಡಿದ್ದ ಇವರ ಕನ್ನಡ ನಿಜಕ್ಕೂ 'ಸುಲಿದ ಬಾಳೆಯ ಹಣ್ಣಿನಂಥ' ಇನಿಗನ್ನಡ. ಇತರರಿಂದಲೂ ಕನ್ನಡ ಸೇವೆ ಮಾಡಿಸಲು ಅವರು ಉತ್ಸುಕರಾಗಿದ್ದರು. ಎ. ಆರ್. ಕೃಷ್ಣಶಾಸ್ತ್ರಿಗಳು ಭಾರತ ವನ್ನು ಬರೆಯಲು ಪ್ರೇರಣೆ ದೊರೆತದ್ದು ಶ್ರೀಯುತರಿಂದ.

ರಾಜಕೀಯ, ಸಾಮಾಜಿಕ, ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ದುಡಿದು, ಆಡಂಬರ ಗಳ ವಿರೋಧಿ ಮತ್ತು ನಿಷ್ಕಾಮಕರ್ಮಿಗಳಂತೆ ಬದುಕಿದ ಭದ್ರಯ್ಯನವರು ಮೇ ೧೯, ೧೯೮೮ರಂದು ಇಹಲೋಕದ ವ್ಯಾಪಾರವನ್ನು ಮುಗಿಸಿದರು. ಅವರ ಬದುಕು ನಮಗೆಲ್ಲ ಒಂದು ಆದರ್ಶ. ದಿನದಿಂದ ದಿನಕ್ಕೆ ನಾವೆಲ್ಲ ದೂರವಾಗುವವರು. ಆದರೂ ಸ್ನೇಹಕ್ಕೆ ಮುಪ್ಪಿದೆಯೇ?

None of us are as young
as we were. So what?
Friendship never ages.

(*W. H. Auden*)

# ದಿವಂಗತ ನ. ಭದ್ರಯ್ಯನವರು

ಬಿ. ಆರ್. ಪ್ರಾಣೇಶರಾವ್

ದಿ॥ ನ. ಭದ್ರಯ್ಯನವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಕ್ರಮದಲ್ಲಿ ತೀವ್ರ ಶ್ರದ್ಧೆ ಹೊಂದಿದ್ದವರು. ತಮ್ಮ ಜೀವನವನ್ನೇ ಸ್ವಾತಂತ್ರ್ಯ ಹೋರಾಟ ಮತ್ತು ರಚನಾತ್ಮಕ ಕಾರ್ಯಗಳಿಗೆ ಸಮರ್ಪಿಸಿಕೊಂಡಿದ್ದ ಮಹನೀಯರು.

ಭದ್ರಯ್ಯನವರು ಸಾಂಪ್ರದಾಯಿಕವಾಗಿ ಶಾಲಾ ಕಾಲೇಜುಗಳಿಗೆ ಹೋಗಿ ಪದವಿ ಪ್ರಶಸ್ತಿಗಳನ್ನೇನೂ ಪಡೆದಿರಲಿಲ್ಲ. ಆದರೆ ಅವರು ಜೀವನಪರ್ಯಂತ ಸ್ವಂತ ಪರಿಶ್ರಮದಿಂದ ಜ್ಞಾನಾರ್ಜನೆ ಮಾಡಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಅಪಾರ ಜ್ಞಾನ ಸಂಪತ್ತನ್ನು ಗಳಿಸಿದ್ದರು. ಸರ್ವೋದಯದಲ್ಲಿ ಶ್ರದ್ಧೆ ಇಟ್ಟುಕೊಂಡಿದ್ದ ಭದ್ರಯ್ಯನವರಿಗೆ ಗ್ರಾಮಾಭಿವೃದ್ಧಿ ಮತ್ತು ಅನಕ್ಷರತೆಯ ನಿವಾರಣೆಯ ಕಡೆಗೆ ಸ್ವಾಭಾವಿಕವಾಗಿ ಒಲವು ಬಂದಿತ್ತು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಎಲ್ಲ ಪ್ರಮುಖ ಸತ್ಯಾಗ್ರಹಗಳಲ್ಲೂ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದರು. ಸೆರೆಮನೆಯಿಂದ ಹೊರಗಿದ್ದಾಗ ಗ್ರಾಮಾಭಿವೃದ್ಧಿ, ವಯಸ್ಕರ ಅಕ್ಷರ ಪ್ರಚಾರ, ಗಾಂಧೀ ಸಾಹಿತ್ಯ ಪ್ರಸಾರದಲ್ಲಿ ತನ್ಮಯರಾಗಿರುತ್ತಿದ್ದರು.

೧೯೪೨ರ ಚಲೇಜಾವ್ ಚಳವಳಿ ಸ್ತಬ್ಧವಾದ ಮೇಲೆ ಉತ್ಸಾಹಿ ವಿದ್ಯಾರ್ಥಿಗಳ ದೇಶ ಪ್ರೇಮ ಮತ್ತು ಸೇವಾ ನಿಷ್ಠೆಯನ್ನು ಸಂಘಟಿಸಲು ಮೈಸೂರಿನಲ್ಲಿ ವಯಸ್ಕರ ಶಿಕ್ಷಣ ಆಂದೋಲನ ಆರಂಭವಾಯಿತು. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕೊಡಲು ಪ್ರೊ॥ ಈಗಲ್‌ಟನ್, ಟಿ. ಕೃಷ್ಣಮೂರ್ತಿ, ಎಸ್. ವಿ. ಶ್ರೀನಿವಾಸರಾವ್, ಎನ್. ಭದ್ರಯ್ಯ ಮತ್ತು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಅವರುಗಳು ಮುಂದೆ ಬಂದರು. ಇವರುಗಳ ಆದರ್ಶ ಮಾರ್ಗದರ್ಶನ ರಾಜ್ಯಮಟ್ಟದಲ್ಲಿ ನಂತರ ರಾಷ್ಟ್ರಮಟ್ಟದಲ್ಲಿ

ವಯಸ್ಕರ ಅಕ್ಷರ ಪ್ರಚಾರ ಮತ್ತು ವಿದ್ಯಾಭ್ಯಾಸ ಚಳವಳಿಗೆ ನಾಂದಿಯಾಯಿತು. ಮುಂದೆ ಪ್ರೊ|| ಈಗಲ್‌ಟನ್ ಅವರು ಯುನೆಸ್ಕೊ ಸಂಸ್ಥೆಯ ನಿರ್ದೇಶಕರಾದಾಗ ಅವರು ಪ್ರಧಾನವಾಗಿ ಯುನೆಸ್ಕೊ ಮೂಲಕ ವಿಶ್ವದಾದ್ಯಂತ ವಯಸ್ಕರ ಶಿಕ್ಷಣದ ಆಂದೋಲನದ ಕಾರ್ಯಕ್ರಮವನ್ನು ಆರಂಭಿಸಿದರು. ಈ ಕ್ಷೇತ್ರದಲ್ಲಿ ಅನುಭವ ಪಡೆದಿದ್ದ ನ. ಭದ್ರಯ್ಯ, ಟಿ. ಕೃಷ್ಣಮೂರ್ತಿ ಮತ್ತು ಎಸ್. ವಿ. ಶ್ರೀನಿವಾಸರಾವ್ ಅವರನ್ನು ಯುನೆಸ್ಕೊದಲ್ಲಿ ಪರಿಣಿತರಾಗಿ ಸೇವೆ ಸಲ್ಲಿಸಲು ಆಹ್ವಾನಿಸಿದರು. ನ. ಭದ್ರಯ್ಯನವರು ಪರಿಣಿತ ಹುದ್ದೆಯನ್ನು ಸ್ವೀಕರಿಸಲು ಇಂಗ್ಲೆಂಡಿಗೆ ಹೋದರು. ಭದ್ರಯ್ಯನವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಲು ಬಂದಿದ್ದ ಪ್ರೊ|| ಈಗಲ್‌ಟನ್ ಅವರು ಭದ್ರಯ್ಯನವರನ್ನು ನೋಡಿ ಬೆರಗಾದರಂತೆ. ಕಾರಣ ಭದ್ರಯ್ಯನವರು ಮೈಸೂರಿನಲ್ಲಿ ಯಾವ ರೀತಿ ಉಡುಗೆ ಉಡುತ್ತಿದ್ದರೋ ಅದೇ ಉಡುಪಿನಲ್ಲಿ—ದಟ್ಟಿ ಪಂಚೆ, ಜುಬ್ಬ ಧರಿಸಿಕೊಂಡು ಲಂಡನ್ನಿನಲ್ಲಿ ಇಳಿದಿದ್ದರು. ಈ ಸರಳತೆಯನ್ನು ಭದ್ರಯ್ಯನವರು ಎಂದಿಗೂ ಬಿಟ್ಟವರಲ್ಲ. ಸರಳ ಜೀವನ ಮತ್ತು ಉದಾತ್ತ ವಿಚಾರ ಅವರ ಜೀವನದಲ್ಲಿ ಮೂರ್ತಿವೆತ್ತಾಗಿದ್ದವು.

ಭದ್ರಯ್ಯನವರು ಇಬ್ಬರು ಗೆಳೆಯರೊಡನೆ ಸ್ವಾತಂತ್ರ್ಯ ಪೂರ್ವದಲ್ಲಿ ಅಖಿಲ ಭಾರತ ಪ್ರವಾಸ ಹೊರಟರು. ಅವರು ಮೂರು ಜನ ಒಡಂಬಡಿಕೆ ಮಾಡಿಕೊಂಡು ಹೊರಟಿದ್ದರು. ಪ್ರಯಾಣಕ್ಕೆ ಅಗತ್ಯವಿದ್ದಷ್ಟು ಮಾತ್ರ ಬಟ್ಟೆ ಬರೆ ಗಂಟು ತೆಗೆದುಕೊಂಡು ಹೊರಟಿದ್ದರು. ಯಾವುದೇ ಸಂದರ್ಭದಲ್ಲಿ ಎಲ್ಲಿಯೂ ಕೂಲಿಯನ್ನು ಗೊತ್ತು ಮಾಡಿಕೊಳ್ಳಕೂಡದು. ತಮ್ಮ ತಮ್ಮ ಗಂಟನ್ನು ತಾವು ತಾವೇ ಹೊತ್ತುಕೊಂಡು ಹೋಗಬೇಕು. ಪ್ರವಾಸದ ಸಂದರ್ಭದಲ್ಲಿ ಊರುಗಳನ್ನು ನೋಡುವಾಗ ಜಟಕಾ, ಟ್ಯಾಕ್ಸಿಗಳನ್ನು ಉಪಯೋಗಿಸದೆ ಕಾಲುನಡಿಗೆಯಲ್ಲೇ ಊರುಗಳನ್ನು ನೋಡಬೇಕೆಂಬ ನಿರ್ಧಾರ ಮತ್ತೊಂದು. ಇಡೀ ಭಾರತ ಪ್ರವಾಸ ಮುಗಿಸಿ ಬರುವವರೆಗೆ ಭದ್ರಯ್ಯನವರು ಈ ನಿರ್ಧಾರರನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದಲ್ಲದೆ ಇಬ್ಬರು ಸಹಪಾಠಿಗಳು ಸಹ ಅದನ್ನು ಪಾಲಿಸುವಂತೆ ಕಟ್ಟುನಿಟ್ಟು ನಿಯಮ ಮಾಡಿ ಅತ್ಯಂತ ಮಿತವ್ಯಯದಲ್ಲಿ ಅಖಿಲ ಭಾರತ ಪ್ರವಾಸವನ್ನು ಮಾಡಿದ್ದರು. ಹಾಗೆಯೇ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲುಗೊಂಡಿದ್ದರು.

ಭದ್ರಯ್ಯನವರಿಗೆ ಸೇವಾಗ್ರಾಮಕ್ಕೆ ಹೋಗಿ ಮಹಾತ್ಮಾ ಗಾಂಧಿಯವರನ್ನು ಕಂಡು ಮಾತುಕತೆ ನಡೆಸುವ ಸದವಕಾಶ ದೊರಕಿತ್ತು. ಗ್ರಾಮಾಭಿವೃದ್ಧಿಯಲ್ಲಿ ವಿಶೇಷ ಆಸಕ್ತಿ ಮತ್ತು ಶ್ರದ್ಧೆಯನ್ನು ಹೊಂದಿದ್ದ ಭದ್ರಯ್ಯನವರು ಒಂದು ಗ್ರಾಮಾಭ್ಯುದಯ ಯೋಜನೆಯನ್ನು ತಯಾರಿಸಿದ್ದರು. ಅದನ್ನು ಗಾಂಧೀಜಿಯವರ ಅವಗಾಹನೆಗೆ ಕೊಟ್ಟರು. ಗಾಂಧೀಜಿ ಅದನ್ನು ಓದಿ ಮಂದಹಾಸ ಬೀರಿ ಒಂದು ಪ್ರಶ್ನೆ ಹಾಕಿದರಂತೆ "ನೀನು ಮಾಡಿರುವ ಯೋಜನೆ ಚೆನ್ನಾಗಿಯೇ ಇದೆ. ಅದು ಮಾಡಬೇಕು, ಇದು ಮಾಡಬೇಕು ಎಂದು ಸಲಹೆ ಮಾಡಿದ್ದೀಯೆ. ಆದರೆ ನೀನು ಏನು ಮಾಡುತ್ತೀಯೆ ಎಂಬುದನ್ನೇ ಕಾಣಿಸಿಲ್ಲವಲ್ಲ" ಎಂದು ಹೇಳಿದರಂತೆ. ಅದರಿಂದ ಭದ್ರಯ್ಯನವರಿಗೆ ಒಳ್ಳೆಯ ಪಾಠ ಹಾಗೂ ಸೂಚನೆ ಗಾಂಧಿಯವರಿಂದ ಒದಗಿದಂತಾಯಿತು. ವ್ಯಕ್ತಿ ತಾನು ಸ್ವತಃ ಒಂದು

ಕಾರ್ಯಕ್ರಮದಲ್ಲಿ ಕೇಂದ್ರಬಿಂದುವಾಗಿ ಭಾಗವಹಿಸದಿದ್ದರೆ ಈ ಯೋಜನೆ ಸಫಲವಾಗುವುದಿಲ್ಲ. ಅಂತೆಯೇ ಅವರು ಯಾವ ಕೆಲಸಕಾರ್ಯಗಳನ್ನು ಕೈಗೊಂಡರೂ ಭದ್ರಯ್ಯನವರು ತಮ್ಮನ್ನು ತಾವು ಅರ್ಪಿಸಿಕೊಂಡು ದುಡಿಯುತ್ತಿದ್ದರು. ಅವರ ವ್ಯಕ್ತಿತ್ವ ಮತ್ತು ವರ್ಚಸ್ಸಿನ ಬೆಳವಣಿಗೆಯ ಗುಟ್ಟು ಅದಾಗಿತ್ತು.

ಭದ್ರಯ್ಯನವರು ಉತ್ತಮ ಬರಹಗಾರರಾಗಿದ್ದರು. ಸರಳ ಶೈಲಿಯಲ್ಲಿ ಗಹನವಾದ ವಿಷಯಗಳನ್ನು ನಿರೂಪಿಸುತ್ತಿದ್ದರು. ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿಯ ಸದಸ್ಯರಲ್ಲಿ ಒಬ್ಬರಾಗಿದ್ದು ಕನ್ನಡದಲ್ಲಿ ಇಪ್ಪತ್ತು ಸಂಪುಟಗಳಲ್ಲಿ ಸಾರಭೂತವಾದ ಗಾಂಧೀ ಸಾಹಿತ್ಯ ದೊರಕಿಸಿಕೊಡಲು ಸಕ್ರಿಯವಾಗಿ ಕಾರ್ಯ ನಿರ್ವಹಿಸಿದರು.

ಸರಳತೆ, ವಿನಯ, ವಿಶ್ವಾಸ, ಸ್ನೇಹಪರತೆ, ಮಾನವಪ್ರೇಮ—ಇವೆಲ್ಲವನ್ನೂ ಮೈಗೂಡಿಸಿಕೊಂಡಿದ್ದ ಭದ್ರಯ್ಯನವರು ಮರೆಯಲಾಗದ ಉದಾತ್ತ ವ್ಯಕ್ತಿ.

---

ಅಹಿಂಸೆ ಹೇಡಿತನವಲ್ಲ, ಆತ್ಮ ಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿಮುಟ್ಟಬೇಕಾದರೆ ತಾಳ್ಮೆ ಅಗತ್ಯ.

ದೇವರಿಗೆ ಭಯಪಡಬೇಕು ; ಮನುಷ್ಯರಿಗೆ ಭಯಪಡಬಾರದು.

ಗಾಂಧೀಜಿ

# ಸೇವೆಯ ಬದುಕು

**ಶಾಂತಿ ಭದ್ರಯ್ಯ**

ಮೊತ್ತ ಮೊದಲ ಸಲ ಶ್ರೀ ನ. ಭದ್ರಯ್ಯನವರ ಪರಿಚಯ ನನಗಾದದ್ದು ನ್ಯೂ ಹೇವನಿನಲ್ಲಿ. ಧಾರ್ಮಿಕ ಅಧಿವೇಶನವೊಂದು ಅಲ್ಲಿ ನಡೆಯುತ್ತಿತ್ತು. ಸಂಗಾತಿಯನ್ನು ಕಳೆದುಕೊಂಡು ದುಃಖ ತಪ್ತಳಾಗಿದ್ದ ನನ್ನ ಗೆಳತಿಯೊಬ್ಬಳ ಜೊತೆ ಕುತೂಹದಿಂದ ನಾನೂ ಅಲ್ಲಿಗೆ ಹೋಗಿದ್ದೆ. ಅಲ್ಲಿ ಭದ್ರಯ್ಯನವರನ್ನು ಕಂಡಾಗ, "ತಾಜ್‌ಮಹಲ್ ಬಳಿ ಎರಡು ಆತ್ಮಗಳು ಒಂದಾಗಿವೆ" ಎಂಬ ಸಂದೇಶವೊಂದು ಇನ್ನೊಂದು ಜಗತ್ತಿನಿಂದ ಕೇಳಿಬಂದಂತೆ ನನಗನಿಸಿತು. ನನ್ನನ್ನೇ ನಿರ್ದೇಶಿಸಿದಂತಿರುವ ಅದನ್ನು ಕೇಳಿ ನನಗಾದ ಅಚ್ಚರಿಯನ್ನು ನೀವೇ ಊಹಿಸಿ. ನಾನೂ ನನ್ನ ಭಾವೀ ಪತಿಯೂ ಮುಂದೆ ಮಾಡಬೇಕಾಗಿದ್ದ ಕೆಲಸದ ವಿವರಣೆಯನ್ನೇ ಈ ಸಂದೇಶ ಒಳಗೊಂಡಿದೆ ಎನ್ನಬಹುದು.

ಈ ಅಲೌಕಿಕ ಸಂದೇಶದಲ್ಲಿ ಸಹಜವಾಗಿ ಯಾವುದೇ ಹೆಸರಿಲ್ಲ. ಇಂಥವು ಯಾವಾಗಲೂ ಅಸ್ಪಷ್ಟವಾಗಿಯೇ ಇರುತ್ತವೆ. ನಾನದನ್ನು ನಂಬಿದೆನೇ ನಂಬಲಿಲ್ಲವೇ ಎಂದು ಹೇಳುವುದು ಕಷ್ಟ ಏನೇ ಇರಲಿ, ಮುಂದೆ ಬದುಕನ್ನು ಸಾಧಿಸಲು ಈ ಸಂದೇಶದಿಂದ ನನಗೆ ಕೆಲಮಟ್ಟಿನ ಪ್ರಯೋಜನವಾಯಿತು. ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ವಯಸ್ಕರ ಶಿಕ್ಷಣದಲ್ಲಿ ಎಂ. ಎ. ಪದವಿ ಪೂರೈಸಿಕೊಂಡು ಜೀವನಕ್ಕಾಗಿ ಸಿದ್ಧತೆ ನಡೆಸಲು ಪ್ರಾರಂಭಿಸಿದೆ. ಈ "ಸಂದೇಶ"ವನ್ನು ಕುರಿತು ನಾನು ಯಾರಿಗೂ ತಿಳಿಸಲಿಲ್ಲ. ಮುಂದೆ ಭದ್ರಯ್ಯನವರಿಗೂ ತಿಳಿಸಲಿಲ್ಲ. ಇದನ್ನು ಹೇಳಿದ್ದರೆ ಅವರು ನಕ್ಕು ಬಿಡುತ್ತಿದ್ದರೋ ಏನೋ! ತಾಜ್‌ಮಹಲನ್ನು ನಾವು ಒಟ್ಟಿಗೆ ಸಂದರ್ಶಿಸಲಿಲ್ಲ. ಅವರು ಅದನ್ನು ಮೊದಲೇ ನೋಡಿದ್ದರು. ತಾಜ್‌ಮಹಲ್‌ಗೆ ಮಿತಿಮೀರಿದ ಬೆಲೆ ಕಟ್ಟಲಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. "ಸಂದೇಶ"ದಲ್ಲಿ ಬಂದ ತಾಜ್, ಸಂಪೂರ್ಣವಾಗಿ ಒಂದು ರೂಪಕವಾಗಿತ್ತು.

ಎರಡನೆಯ ಸಲ ನನಗೆ ಭದ್ರಯ್ಯನವರ ಪರಿಚಯವನ್ನು ಮಾಡಿಕೊಟ್ಟದ್ದು ನವದೆಹಲಿಯಲ್ಲಿನ ಜಾಮಿಯ ಮಿಲ್ಲಿಯದ ಸಂಶೋಧನ, ತರಬೇತಿ, ಹಾಗೂ ಉತ್ಪಾದನ ಕೇಂದ್ರದ ನಿರ್ದೇಶಕರು. ೧೯೫೬ ರಲ್ಲಿ ವಯಸ್ಕರ ಶಿಕ್ಷಣ ಚಳವಳಿಯ ಬಗೆಗಿನ ಅಧ್ಯಯನ ನಡೆಸಲೋಸುಗ ಫುಲ್‌ಬ್ರೈಟ್ ಫೆಲೋ ಆಗಿ ನಾನು ಭಾರತಕ್ಕೆ ಬಂದಾಗ, ಅವರು ನನ್ನ ಸಲಹೆಗಾರರಾಗಿದ್ದರು. ನನಗಾಗಿ ಅಧ್ಯಯನ ಪ್ರವಾಸದ ವ್ಯವಸ್ಥೆ ಮಾಡುವ ಸಂಬಂಧದಲ್ಲಿ ಅವರು ಶ್ರೀ ಭದ್ರಯ್ಯನವರಿಗೆ ಪತ್ರ ಬರೆದು, "ಅವರೊಬ್ಬ ಪ್ರಿಯ ವ್ಯಕ್ತಿಯಾದ್ದರಿಂದ—" ಮೈಸೂರಿನ ಪ್ರವಾಸದಲ್ಲಿ ನನ್ನ ಮಾರ್ಗದರ್ಶಿಯಾಗಿರುವಂತೆ ಅವರನ್ನು ಕೇಳಿಕೊಳ್ಳುವ ಸ್ವಾತಂತ್ರ್ಯವನ್ನು ತಾವು ತೆಗೆದುಕೊಂಡಿರುವುದಾಗಿ ತಿಳಿಸಿದ್ದರು. ಹೀಗೆ, ೧೯೫೭ ರ ಶಿವರಾತ್ರಿಯ ಮುನ್ನಾದಿನ, ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಹಳೆಯ ಕಛೇರಿಯ ಮೆಟ್ಟಲುಗಳ ಮೇಲೆ ನಮ್ಮಿಬ್ಬರ ಭೇಟಿಯಾಯಿತು. ನಾನು ಭಾರತಕ್ಕೆ ಬರುವ ವೇಳೆಗೆ, ಅವರು ಅಮೆರಿಕದಲ್ಲಿ, ಅರಬ್ ದೇಶಗಳಲ್ಲಿನ ಗ್ರಾಮೀಣ ಶಿಕ್ಷಣಕ್ಕೆ ಸಂಬಂಧಿಸಿದಂತೆ ಫೋರ್ಡ್ ಫೌಂಡೇಷನ್ ಸಲಹೆಗಾರರಾಗಿದ್ದುದು ಕಾಕತಾಳೀಯವಾಗಿದೆ.

ಇವೆರಡೂ ಪ್ರಸಂಗಗಳು, ನಮ್ಮ ನಡುವಣ ಸಂಬಂಧ ಮತ್ತು ಮಾಧುರ್ಯವೇ ಮುಖ್ಯ ತಿರುಳಾಗಿರುವ ಅವರ ವ್ಯಕ್ತಿತ್ವಗಳೆರಡನ್ನೂ ಸಾಂಕೇತಿಕವಾಗಿ ನಿರೂಪಿಸುತ್ತವೆಯಾದ್ದರಿಂದಲೇ ಇವುಗಳನ್ನು ನಾನಿಲ್ಲಿ ಉಲ್ಲೇಖಿಸಿದ್ದೇನೆ. ಹೀಗೆಂದ ಮಾತ್ರಕ್ಕೆ ಅವರೆಂದೂ ಕೋಪಗೊಂಡಿಲ್ಲ ಎಂದರ್ಥವಲ್ಲ. ಅನೇಕ ಮಂದಿ ಗಮನಿಸಿದಂತೆ, ಮೂರ್ಖತನ ಹಾಗೂ ಆಲಸ್ಯವನ್ನು ಕಂಡಾಗ ಅವರು ಸಹನೆ ಕಳೆದುಕೊಳ್ಳುತ್ತಿದ್ದರು. ಆದರೆ ಅವರು ದಯಾಳುಗಳೂ ಸಹಾನುಭೂತಿಪರರೂ ಆಗಿದ್ದರು. ಇತರ ವ್ಯಕ್ತಿಗಳ ದೃಷ್ಟಿಕೋನವನ್ನೂ ಅವರ ದುಃಖಸಂಕಟಗಳನ್ನೂ ಅರ್ಥಮಾಡಿಕೊಳ್ಳಲು ಮತ್ತು ತಮಗೆ ಸಾಧ್ಯವಾದಾಗಲೆಲ್ಲ ಅವರಿಗೆ ಸಹಾಯ ಮಾಡಲು ಅವರು ಪ್ರಯತ್ನಿಸುತ್ತಿದ್ದರು.

ಮೈಸೂರಿನಲ್ಲಿ ಮೊದಲ ಸಲ ನಾನು ತಂಗಿದ ಅವಧಿಯಲ್ಲಿ, ಭಾರತ ಹಾಗೂ ವಿದೇಶಗಳಲ್ಲಿ ವಯಸ್ಕರ ಶಿಕ್ಷಣ, ಮೈಸೂರಿನಲ್ಲಿ ಅವರು ಪ್ರಾರಂಭಿಸಿದ್ದಂತಹ ವಿದ್ಯಾಪೀಠ ಚಳುವಳಿ, ಸ್ವತಂತ್ರ ಭಾರತದ ಸಮಸ್ಯೆಗಳು ಮತ್ತು ಸ್ವಾತಂತ್ರ್ಯ ಸಮರ ಮುಂತಾದ ಹಲವು ವಿಷಯಗಳ ಬಗ್ಗೆ ನಾವು ಚರ್ಚೆ ನಡೆಸಿದೆವು. ಸ್ವಾತಂತ್ರ್ಯ ಹೋರಾಟಗಾರರನ್ನು ರಾಜಕೀಯ ಬಂದಿಗಳಾಗಿ ಪ್ರತ್ಯೇಕವಾಗಿ ವರ್ಗೀಕರಿಸುವವರೆಗೆ ಅವರನ್ನು ಕೊಲೆಪಾತಕರು ಹಾಗೂ ಇತರ ಅಪರಾಧಿಗಳೊಂದಿಗೆಯೇ ಸೆರೆಮನೆಯಲ್ಲಿ ಇರಿಸಲಾಗುತ್ತಿತ್ತು. ಆ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರನಾಗಿ ಸೆರೆಮನೆಯಲ್ಲಿದ್ದಾಗಿನ ತಮ್ಮ ಅನುಭವಗಳನ್ನು ಅವರು ವಿವರಿಸಿದರು. ಕೊಲೆಪಾತಕರೂ ಅಪರಾಧಿಗಳೂ ಹಾಗಾಗಲು ಕಾರಣವಾದಂಥ ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ಅವರೊಂದಿಗೆ ಭದ್ರಯ್ಯನವರು ಗೆಳೆತನ ಬೆಳೆಸಲು ಹಾಗೂ ಅವರಲ್ಲಿ ವಿದ್ಯಾಪ್ರಸಾರ ಮಾಡಲು ಪ್ರಯತ್ನಿಸಿದ್ದರು.

ಸೆರೆಮನೆಯಲ್ಲಿ ನೀಡಲಾಗುತ್ತಿದ್ದ ಆಹಾರ ಭಯಂಕರವಾಗಿತ್ತು. ಮುಖ್ಯವಾಗಿ ಅನ್ನ ಮನುಷ್ಯರು ಊಟಮಾಡುವುದಕ್ಕೇ ಅಯೋಗ್ಯವಾಗಿತ್ತು. ಅನ್ನವನ್ನು ಊಟಕ್ಕೆ

ಸಜ್ಜುಗೊಳಿಸುವಾಗ, ಸೆರೆಮನೆವಾಸಿಗಳು, ಮೇಲ್ಭಾಗದಲ್ಲಿ ಹುಳುಗಳಿರುವುದರಿಂದ ಅದನ್ನು ಎಸೆಯಬೇಕಾಗಿತ್ತು. ತಳಭಾಗದಲ್ಲಿ ಕೇವಲ ಕಲ್ಲುಗಳಿರುತ್ತಿದ್ದುದರಿಂದ ಮಧ್ಯದ ಭಾಗದ ಅನ್ನವಷ್ಟನ್ನೇ ಉಣ್ಣಬಹುದಾಗಿತ್ತು. ಒಮ್ಮೆ ಸೆರೆಮನೆಯಲ್ಲಿರುವಾಗ ಅವರು ಜಾಂಡಿಸ್ ರೋಗಕ್ಕೆ ಈಡಾದರು. ಕೊನೆಗೆ ಅವರನ್ನು ಬಿಡುಗಡೆಗೊಳಿಸ ಲಾಯಿತು. ಇನ್ನೊಂದು ಸಲ ಸೆರೆಮನೆಯಿಂದ ಇನ್ನೇನು ಅವರನ್ನು ಬಿಡುಗಡೆ ಮಾಡ ಬೇಕು ಎಂಬ ವೇಳೆಗೆ ಅವರ ತೂಕ ಕೇವಲ ೯೬ ಪೌಂಡ್ ಎಂಬುದು ತಿಳಿದುಬಂತು. ಹೀಗೆ ತೂಕ ಇಳಿದು ಹೋದ ಬಗ್ಗೆ ಜನರ ಪ್ರತಿಕ್ರಿಯೆಯನ್ನು ಎದುರಿಸಲು ಹೆದರಿದ ಸೆರೆಮನೆ ಅಧಿಕಾರಿಗಳು ಅವರಿಗೆ ವಿಶೇಷ ಆಹಾರ ನೀಡುವ ಏರ್ಪಾಟು ಮಾಡಿದರಂತೆ; ಆದರೆ ಅಂಥ ಆಹಾರದ ಹೆಚ್ಚು ಭಾಗವನ್ನು ಭದ್ರಯ್ಯನವರು ತನ್ನ ಜೊತೆಗಾರರಿಗೆ ನೀಡಿದರು.

ಇಂತಹ ಅನುಭವಗಳನ್ನು ಕುರಿತಂತೆ ಅವರು ಮಾತನಾಡುತ್ತಿದ್ದಾಗ ನನ್ನ ಮೇಲೆ ಹೆಚ್ಚು ಪರಿಣಾಮ ಬೀರಿದ ವಿಷಯವೆಂದರೆ ಇದು: ಬ್ರಿಟಿಷರ ಅಧೀನದಲ್ಲಿ ಅವರು ಅಷ್ಟೊಂದು ಕಷ್ಟ ಅನುಭವಿಸಿದ್ದರೂ, ಅವರ ಬಗ್ಗೆ ವೈರವಾಗಲಿ, ಅಸಮಾಧಾನವಾಗಲಿ ಭದ್ರಯ್ಯನವರಿಗಿರಲಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಅನಂತರವೂ ಸ್ವಾತಂತ್ರ್ಯ ಹೋರಾಟ ಕೊನೆಗೊಳ್ಳ ಲಿಲ್ಲ. ಮೈಸೂರು ಇನ್ನೂ ಸ್ವಾತಂತ್ರ್ಯ ಪಡೆಯಬೇಕಾಗಿತ್ತು. ಮತ್ತೆ ಭದ್ರಯ್ಯನವರು ಬಂಧಿತರಾದರು. ಈ ಬಾರಿ ಅವರು ಅದನ್ನು ನಿರೀಕ್ಷಿಸುತ್ತಲೇ ಇದ್ದರು. ಆ ವೇಳೆಗೆ ಸೆರೆಮನೆಯ ಪರಿಸ್ಥಿತಿ ಸಾಕಷ್ಟು ಸುಧಾರಣೆಗೊಂಡಿತ್ತು. ಪುಸ್ತಕಗಳನ್ನೂ ಬರವಣಿಗೆಯ ಸಾಧನಗಳನ್ನೂ ಸೆರೆಮನೆಯಲ್ಲಿ ಜೊತೆಗೆ ಇರಿಸಿಕೊಳ್ಳುವ ಅವಕಾಶವಿತ್ತು. ಹೀಗೆ ಬರೆಯು ವುದು ಸಾಧ್ಯವಾಗಿದ್ದುದರಿಂದ ತಮ್ಮ ಸೆರೆಮನೆಯ ವಾಸದ ಅವಧಿ ವಿಸ್ತರಿಸುವುದನ್ನೇ ಅವರು ಬಯಸಿದರು. ಬೇಗನೆ ಬಿಡುಗಡೆಯಾದಾಗ ಅವರಿಗೆ ನಿರಾಶೆಯಾಯಿತು.

ತಾರುಣ್ಯದಲ್ಲಿ ಅವರು ಗಾಂಧೀಜಿಯವರ ತೀವ್ರ ಪ್ರಭಾವಕ್ಕೆ ಒಳಗಾಗಿದ್ದರು. ಗಾಂಧೀಜಿಯವರ ಸಿದ್ಧಾಂತವನ್ನು ಬದುಕಿನ ಉದ್ದಕ್ಕೂ ಅನುಸರಿಸಲು ಅವರು ಪ್ರಯತ್ನಿ ಸಿದರು. "ಸರಳ ಜೀವನ ಮತ್ತು ಉನ್ನತ ಚಿಂತನೆಗೆ" ಹಾಗೂ ಸರಳತೆ ಮತ್ತು ಹಿತಮಿತ ವಾದ ಅಭ್ಯಾಸಗಳಿಗೆ ಅವರು ಹೆಸರು ಪಡೆದಿದ್ದರು. ಗಾಂಧೀಜಿಯವರ ಪ್ರಭಾವ ಅವರ ಆಂತರಿಕ ಗುಣಸ್ವಭಾವಗಳಲ್ಲಿಯೇ ಗಾಢವಾಗಿ ಉಂಟಾಗಿತ್ತು. ಅವರಿನ್ನೂ ಪುಟ್ಟ ಹುಡುಗನಾಗಿದ್ದಾಗಿನ ಒಂದು ಪ್ರಸಂಗ. ಮಾಂಸಾಹಾರವನ್ನು ಸೇವಿಸುವಂತೆ ಒತ್ತಾಯಿಸಿ ಅವರ ತಂದೆ ಅವರಿಗೆ ಹೊಡೆದರೂ ಅವರು ಒಪ್ಪದೆ, ಊಟವನ್ನೇ ಮಾಡಲು ನಿರಾಕರಿಸಿದ ರಂತೆ. ಕೊನೆಗೂ ಅವರಿಗೆ ಸಸ್ಯಾಹಾರಿಯಾಗಿ ಉಳಿಯುವ ಅವಕಾಶ ನೀಡಲಾಯಿತು. ಅವರೆಂದೂ ಮದ್ಯಪಾನವನ್ನಾಗಲಿ ಧೂಮಪಾನವನ್ನಾಗಲಿ ಮಾಡಲಿಲ್ಲ. ಅಂತರ ರಾಷ್ಟ್ರೀಯ ವಲಯಗಳಲ್ಲಿ ಕೆಲಸ ಮಾಡುವಾಗ ಕೂಡ ಅವರು ತಮ್ಮ ವ್ರತದಿಂದ ವಿಚಲಿತರಾಗಲಿಲ್ಲ. ವಿದೇಶಗಳಲ್ಲಿನ ಅಧಿಕಾರಿಗಳ ಜೀವನ ಪದ್ಧತಿಗಳಿಗೆ ಸರಿಹೊಂದು ವಂತೆ ವರ್ತನೆ ಬದಲಿಸಿಕೊಳ್ಳಬೇಕೆಂಬ ಒತ್ತಡವಿದ್ದರೂ ಅವರು ತಮ್ಮ ದಾರಿ ಬದಲಿಸಲಿಲ್ಲ.

ಸರಳತೆಯ ಬಗೆಗಿನ ಪ್ರೀತಿಯನ್ನು ಅವರ ಜೀವನದ ಎಲ್ಲ ಮುಖಗಳಲ್ಲಿಯೂ ಕಾಣಬಹುದು. ನಮ್ಮಲ್ಲಿ ವಿದೇಶೀ ಕಾರು ಇರುವುದು ಸತ್ಯ. ಆದರೆ ಅದನ್ನು ಖರೀದಿಸಿದ ದೇಶದಲ್ಲಿ ಅದಕ್ಕೆ ಆ ಕಾಲದಲ್ಲಿ ಭಾರತದಲ್ಲಿ ಅಂಬ್ಯಾಸಡರ್ ಕಾರಿಗಿಂತ ಕಡಮೆ ಬೆಲೆಯಿತ್ತು. ಸಾಮಾನ್ಯವೂ, ಸುಂದರವೂ ನೆಚ್ಚಿಕೆಗೆ ಅರ್ಹವೂ ಆಗಿ, ನಮ್ಮ ಕುಟುಂಬದ ಓರ್ವ ಸದಸ್ಯನಂತಿದ್ದ ಕಾರಿಗೆ ನಾವು 'ಸುಶೀಲಾ' ಎಂಬ ಹೆಸರಿಟ್ಟಿದ್ದೆವು. ವಿದೇಶಗಳಲ್ಲಿ ಏಳು ವರ್ಷಗಳ ಕಾಲ ಬಳಸಿದ ಅನಂತರ ನಾವು ಅದನ್ನು ಭಾರತಕ್ಕೆ ತಂದೆವು. ಹೀಗೆ ಅದನ್ನು ನಮ್ಮೊಡನೆ ತರುವಾಗ, ಬಹಳ ವೆಚ್ಚ ತಗಲಿತು. ನಮಗೆ ದೊಡ್ಡ ಮನೆಯಿದೆ. ಆದರೆ ನಿವೇಶನವನ್ನು ಕೊಂಡದ್ದು ಅನೇಕ ವರ್ಷಗಳ ಹಿಂದೆ ಹರಾಜಿನಲ್ಲಿ. ಮನೆಯನ್ನು ನಾವು ಸರಳವಾಗಿಯೇ ಕಟ್ಟಿಸಿಕೊಂಡಿದ್ದೇವೆ.

ಜೀವನದ ಪ್ರಮುಖ ಘಟನೆಗಳಲ್ಲಿಯೂ ನಾವು ಸರಳತೆಯನ್ನು ಉಳಿಸಿಕೊಂಡಿದ್ದೇವೆ. ನಮ್ಮ ಒಬ್ಬಳೇ ಮಗಳ ಮದುವೆಯ ವಿಚಾರವನ್ನೇ ತೆಗೆದುಕೊಳ್ಳಿ. ಧಾರ್ಮಿಕ ವಿಧಿಗಳಿಗಾಗಿ ನಾವು ಆರು ಜನ ನಂಜನಗೂಡಿನ ದೇವಸ್ಥಾನಕ್ಕೆ ಹೋಗಿದ್ದೆವು. ಅನಂತರ ಮನೆಯಲ್ಲಿ ನಡೆದ ಸಮಾರಂಭಕ್ಕೆ ಹತ್ತಿರದ ಸಂಬಂಧಿಗಳನ್ನೊಳಗೊಂಡಂತೆ ಹತ್ತು ಹನ್ನೆರಡು ಜನರನ್ನು ಮಾತ್ರ ನಾವು ಆಹ್ವಾನಿಸಿದ್ದೆವು.

ಅಂತಿಮ ಸಂಸ್ಕಾರಕ್ಕೆ ಸಂಬಂಧಪಟ್ಟಂತೆ ಕೂಡ ಯಾವುದೇ ಸಮಾರಂಭವನ್ನು ಆಚರಿಸಬಾರದೆಂದು ಅವರು ಅಪೇಕ್ಷೆಪಟ್ಟಿದ್ದರು. ಕೆಲವೇ ಜನರಿಗೆ ಸಾವಿನ ಸುದ್ದಿ ತಿಳಿಸಬೇಕೆಂದೂ, ಯಾರ ಬರುವಿಗೂ ಕಾಯದೆ, ಸತ್ತ ನಾಲ್ಕು ಗಂಟೆಗಳ ಒಳಗೆ ದೇಹವನ್ನು ಸ್ಮಶಾನಕ್ಕೆ ಕೊಂಡೊಯ್ಯಬೇಕೆಂದೂ ಅವರು ಬಯಸಿದ್ದರು. "ಆತ್ಮ ಅಗಲಿ ಹೋದಾಗ, ಕೇವಲ ಹೊರಕವಚದಂತಹ ದೇಹದ ಬಗ್ಗೆ ಅಷ್ಟು ಗದ್ದಲ ಮಾಡುವುದಾದರೂ ಏಕೆ?" ಎಂದು ಅವರು ಎಷ್ಟು ಸಾರಿ ಉದ್ಗರಿಸಿಲ್ಲ!

ಬಹುಮಟ್ಟಿಗೆ ಎಲ್ಲ ಧರ್ಮಗಳ ಅಧ್ಯಯನವನ್ನೂ ಅವರು ನಡೆಸಿದ್ದರು. ಎಲ್ಲ ಧರ್ಮಗಳನ್ನೂ ತುಂಬ ಗೌರವಿಸುತ್ತಿದ್ದರು. ಬಾಲ್ಯದಲ್ಲಿ ಹಿಂದೂ-ಧರ್ಮ ಗ್ರಂಥಗಳ ಮೊದಲ ತರಬೇತಿ ಅವರಿಗೆ ದೊರೆತದ್ದು ತಾಯಿಯಿಂದ. ಮುಂದೆ ಮೈಸೂರಿನ ವೆಸ್ಲಿ ಮಿಷನ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿರುವ ಅವಧಿಯಲ್ಲಿ ಅದು ಹೇಗೋ ಸಾರ್ವತ್ರಿಕ ಚಿಂತನೆಯತ್ತ ಅವರ ಮನಸ್ಸು ಹರಿಯಿತು. ಮುಸ್ಲಿಮ್ ರಾಷ್ಟ್ರಗಳಲ್ಲಿ ಅವರು ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಆ ರಾಷ್ಟ್ರಗಳಲ್ಲಿಯೂ ಅವರಿಗೆ ಸ್ವದೇಶದಲ್ಲಿದ್ದಂತೆ ಅನಿಸಿತ್ತು. ಕ್ರೈಸ್ತ ಧರ್ಮ ಪ್ರಚಾರಕರೊಂದಿಗೆ ಅವರು ಸುದೀರ್ಘ ಚರ್ಚೆಗಳನ್ನು ನಡೆಸಿದ್ದುಂಟು. ಭಾರತದಲ್ಲಿ ಕ್ರೈಸ್ತ ಮತ ಪ್ರಚಾರ ಮಾಡಲು ಬರುವ ಮೊದಲು, ಬೈಬಲಿನ ಕೂಲಂಕಷ ಅಧ್ಯಯನ ಮಾಡುವಂತೆ ವಿದೇಶೀಯನೊಬ್ಬನಿಗೆ ಒಂದು ಸಂದರ್ಭದಲ್ಲಿ ಅವರು ಸಲಹೆ ಮಾಡಿದ್ದೂ ಉಂಟು. ಅಮೆರಿಕದಲ್ಲಿ ಕ್ವೇಕರ್ ಸಭೆಯ ಮೌನ ಧ್ಯಾನದಲ್ಲಿ ಅವರು ಪಾಲ್ಗೊಂಡದ್ದುಂಟು. ಅಲ್ಲಿಯೂ ಅವರಿಗೆ ಸ್ವದೇಶದಲ್ಲಿದ್ದಂಥ ಅನುಭವವಾಗಿತ್ತು. ಭಜನೆಗಳೊಂದಿಗೆ ಮನೆಯಲ್ಲಿ ಪೂಜೆ ಮಾಡುವ ಸಂದರ್ಭ ಬಂದಾಗಲೆಲ್ಲ 'ಕರುಣಾಳು ಬಾ ಬೆಳಕೆ' ಎಂಬ ತಮ್ಮ ಮೆಚ್ಚಿನ ಕ್ರೈಸ್ತ ಗೀತೆಯನ್ನು ಅವರು ಕನ್ನಡದಲ್ಲಿ ಹಾಡುತ್ತಿದ್ದರು, ನಾನು ಮತ್ತು ಶುಭಾ ಅದೇ ಹಾಡನ್ನು ಇಂಗ್ಲಿಷಿನಲ್ಲಿ ಹಾಡುತ್ತಿದ್ದೆವು.

ಮೈಸೂರಿನಲ್ಲಿ ಅವರು ಜೈನ ಧರ್ಮಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತಂತೆ ಹೇಳುವುದಾದರೆ, ಅವರನ್ನು ಜೈನರೆಂದೇ ಕೆಲವರು ಭಾವಿಸಿದ್ದರು. ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ, ರಾತ್ರಿ ತುಂಬ ತಡವಾಗಿ ಅಥವಾ ಬೆಳಗ್ಗೆ ತುಂಬ ಬೇಗ ಧ್ಯಾನ ಮಾಡುವುದನ್ನು ಬಹುಮಟ್ಟಿಗೆ ತಪ್ಪಿಸುತ್ತಿದ್ದಿಲ್ಲ. ಪದ್ಮಾಸನದಲ್ಲಿ ಹೆಚ್ಚು ಸಮಯ ಕುಳಿತಿರಲು ಸಾಧ್ಯವಿಲ್ಲವಾದಾಗ, ರಾಮನಾಮವನ್ನು ಮತ್ತೆ ಮತ್ತೆ ಜಪಿಸುತ್ತಾ ಹಾಸಿಗೆಯ ಮೇಲೆಯೇ ರಾತ್ರಿಯ ಬಹು ಕಾಲವನ್ನು ಅವರು ಕಳೆಯುತ್ತಿದ್ದರು.

ಅವರ ದೃಷ್ಟಿಯಲ್ಲಿ ಕೆಲಸಕ್ಕೆ ಅತಿ ಹೆಚ್ಚು ಪ್ರಾಮುಖ್ಯ. ಉಳಿದೆಲ್ಲವೂ ಗೌಣ. ತನಗೆ ಮಾಡಲು ಏನೂ ಕೆಲಸವಿಲ್ಲದ ಸ್ಥಳಕ್ಕೆ ಅವರೆಂದೂ ಹೋಗುತ್ತಿದ್ದಿಲ್ಲ. ಮಾಡಲು ಕೆಲಸವಿದ್ದಾಗ, ತನಗೆ ಎಷ್ಟೇ ಅನನುಕೂಲವಾಗಲಿ ಅಥವಾ ತೊಂದರೆಯಾಗಲಿ, ಅದನ್ನು ಹೇಗೋ ನಿಭಾಯಿಸುತ್ತಿದ್ದರು.

ಬ್ರಿಟಿಷ್ ಕ್ಯಾಮರೂನ್‌ಗಳಲ್ಲಿ ಯುನೆಸ್ಕೋ ಕೆಲಸದಲ್ಲಿದ್ದಾಗ ಅವರ ಈ ಗುಣ ಹೆಚ್ಚು ಸ್ಫುಟವಾಗಿ ವ್ಯಕ್ತವಾಗಿದೆ. ಆ ಅನಭಿವೃದ್ಧ ದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳ ಬಗೆಗಿನ ಸರ್ವೇಕ್ಷಣೆಯನ್ನು ಅವರು ಮಾಡಬೇಕಾಗಿತ್ತು. ಸರ್ವೇಕ್ಷಣೆ ಮಾಡಬೇಕಾದ ಪ್ರದೇಶಗಳಲ್ಲಿ ಹೆಚ್ಚಿನವು ದೂರದ ಒಳನಾಡುಗಳಲ್ಲಿದ್ದವು. ಅವೆಲ್ಲವೂ "ವ್ಯಾಧಿ-ವಲಯ"ದೊಳಗಿದ್ದವು. ಭದ್ರಯ್ಯನವರ ಯೋಜನೆಗೆ ಅನುಸಾರವಾಗಿ, ದೂರದ ಆ ಪ್ರದೇಶಗಳಿಗೆ ಪ್ರವಾಸ ಮಾಡಲು ಸರಕಾರಿ ಅಧಿಕಾರಿಗಳು ಹೆದರುತ್ತಿದ್ದರು. ಅಷ್ಟು ಅಪಾಯಕರವಾದ ಪ್ರದೇಶಗಳಲ್ಲಿ ಯಾವ ಕೆಲಸವನ್ನೂ ಕೈಗೊಳ್ಳದಂತೆ ಎಲ್ಲರೂ ಮನವಿ ಮಾಡಿಕೊಂಡರು. ಆಗ ಆ ದೇಶವನ್ನು ದಾಟಿಹೋಗುವ ಒಂದೇ ಒಂದು ಮುಖ್ಯ ರಸ್ತೆಯಿತ್ತು. ಎರಡು ದಿನಕ್ಕೊಮ್ಮೆ ಏಕಮುಖ ಸಂಚಾರಕ್ಕೆ ಮಾತ್ರ ಆ ಮಾರ್ಗದಲ್ಲಿ ಅವಕಾಶವಿತ್ತು. 'ಸರಕಾರ ನಿಮಗೆ ಜೀಪನ್ನೂ ಡ್ರೈವರನ್ನೂ ಕೊಟ್ಟದೆ; ಆದರೆ ಓಡಾಡಲು ರಸ್ತೆಯನ್ನೇ ಕೊಟ್ಟಿಲ್ಲ' ಎಂದು ಆಗಾಗ ನಾನು ತಮಾಷೆ ಮಾಡುತ್ತಿದ್ದೆ.

ಅಗತ್ಯವಿರುವ ಅಂಕಿಅಂಶಗಳನ್ನೂ ಇತರ ಮಾಹಿತಿಗಳನ್ನೂ ಸಂಗ್ರಹಿಸಲು ಅನುಕೂಲವಾಗುವಂತೆ ಸಂದರ್ಶನ ನಡೆಸಲು, ದೂರದ ಆ ಪ್ರದೇಶಗಳ ಜನರನ್ನೇ ರಾಜಧಾನಿಗೆ ಕರೆಸುವ ವ್ಯವಸ್ಥೆ ಮಾಡುವಂತೆ ಸರಕಾರಿ ಅಧಿಕಾರಿಗಳು ಒತ್ತಾಯಿಸಿದರು. ಆದರೆ ಭದ್ರಯ್ಯನವರು, ಆ ಪ್ರದೇಶಗಳ ಸ್ಥಿತಿಗಳ ವಾಸ್ತವ ಚಿತ್ರವನ್ನು ತಿಳಿದುಕೊಳ್ಳಲು ತಾವೇ ಅಲ್ಲಿಗೆ ಹೋಗಬೇಕಾದ್ದು ಅಗತ್ಯವೆಂದೂ, ಒಂದೊಮ್ಮೆ ಇದು ಸಾಧ್ಯವಾಗದೆ ಹೋದಲ್ಲಿ ಕೆಲಸವನ್ನು ಬಿಟ್ಟು ಭಾರತಕ್ಕೆ ಹಿಂದಿರುಗುವುದು ಒಳ್ಳೆಯದೆಂದೂ ಭಾವಿಸಿದ್ದರು. ಅವರ ನಿರ್ಧಾರ ದೃಢವಾದುದೆಂದು ಅರಿತ ಅಧಿಕಾರಿಗಳು, ಅಂಥದೊಂದು ದೀರ್ಘ ಪ್ರವಾಸಕ್ಕೆ ಅಗತ್ಯವೆಂದು ತಾವು ಭಾವಿಸಿದ ಭಾರೀ ಪ್ರಮಾಣದ ಸರಕುಗಳನ್ನು ಸಾಗಿಸಲು ಸೇವಕರ ಪರಿವಾರವನ್ನು ಗೊತ್ತು ಮಾಡಿದರು. ಆದರೆ ಭದ್ರಯ್ಯನವರು ಆ ಸೇವಕರ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ಕಡಿತಗೊಳಿಸಿದರು. ತನಗೆ ಸ್ವಲ್ಪವೇ ತಲೆ ನೋವು ಬಂದರೂ, ತತ್‌ಕ್ಷಣ ಅವರಲ್ಲಿಗೆ ಒಬ್ಬ ಸೇವಕನನ್ನು ಕಳುಹಿಸುತ್ತೇನೆ ಎಂದು ಅವರು ಒಪ್ಪಿದಾಗ ಮಾತ್ರ, ಆ ಅಧಿಕಾರಿಗಳು ಮನಸ್ಸಿಲ್ಲದ ಮನಸ್ಸಿನಿಂದ ಭದ್ರಯ್ಯನವರಿಗೆ ಹೋಗಲು ಒಪ್ಪಿಗೆ ನೀಡಿದರು.

ಕೆಲ ತಿಂಗಳುಗಳ ಅನಂತರ, ಭದ್ರಯ್ಯನವರು ವಾಪಸ್ ಬಂದಾಗ, ಆ ಅಧಿಕಾರಿಗಳಿಗೆ ಅವರ ಭೂತವನ್ನೇ ಕಂಡಂತೆನಿಸಿತು. ಅಂದರೆ ಅವರು ಅಷ್ಟೊಂದು ಬಳಲಿದ್ದರೆಂದಲ್ಲ. ಆಶ್ಚರ್ಯವೆಂದರೆ ಅವರಿಗೆ ಅಲ್ಲಿ ಕೆಲಸ ಮಾಡುತ್ತಿರುವ ಅವಧಿಯಲ್ಲಿ ತಲೆನೋವೂ ಬಂದಿರಲಿಲ್ಲ. ಅವರನ್ನು ಮತ್ತೆ ನೋಡುತ್ತೇವೆಂದು ಅಧಿಕಾರಿಗಳು ಎಂದೂ ನಿರೀಕ್ಷಿಸಿರಲಿಲ್ಲ. 'ಕ್ಯಾಮರೂನಿನ ಬಣಗಳೊಡನೆ' ಪುಸ್ತಕದ ಓದುಗರು, ಭದ್ರಯ್ಯನವರು ಅಲ್ಲಿ ಇದ್ದಾಗಿನ ಸನ್ನಿವೇಶಗಳನ್ನು ತಿಳಿದಿರುತ್ತಾರೆ.

ಯುನೆಸ್ಕೊ ತಜ್ಞರಾಗಿ ಅವರು ಜನಪ್ರಿಯರೂ ಯಶಸ್ವಿಗಳೂ ಆಗಿದ್ದರು. ಅವರು ಎಲ್ಲಿಗೇ ಹೋಗಲಿ, ಅಲ್ಲಿ ಕೆಲಸ ಮಾಡುವ ಅವಧಿಯನ್ನು ಇನ್ನಷ್ಟು ವಿಸ್ತರಿಸುವಂತೆ ಯುನೆಸ್ಕೋವನ್ನು ಕೇಳಿಕೊಳ್ಳಲಾಗುತ್ತಿತ್ತು. ಒಂಬತ್ತು ತಿಂಗಳ ಕೆಲಸಕ್ಕಾಗಿ ಇಂಡೊನೇಷ್ಯಕ್ಕಾಗಿ ಹೋದ ಭದ್ರಯ್ಯನವರು ಹತ್ತಿರಹತ್ತಿರ ಮೂರು ವರ್ಷಗಳ ಕಾಲ ಅಲ್ಲಿ ಉಳಿದರು. ವಾಸ್ತವವಾಗಿ, ಹೇಳುವುದಾದರೆ, ವ್ಯಾಪಕ ಸಾಕ್ಷರತಾ ಚಳವಳಿಯೊಂದನ್ನು ಕೈಗೊಳ್ಳಲು ಹಾಗೂ ಕಾಲಿಮಾಂಟನಿನಲ್ಲಿ (ಬೋರ್ನಿಯೊ) ಈ ಉದ್ದೇಶಕ್ಕಾಗಿ ಮುಂದಿನ ಕಾರ್ಯಕ್ರಮಗಳಿಗಾಗಿ ಸಿದ್ಧತೆ ನಡೆಸಲು, ಅವರು ಇನ್ನೂ ಎರಡು ವರ್ಷಗಳ ಕಾಲ ತಮ್ಮೊಡನೆ ಇರಬೇಕೆಂದು ಪ್ರಾರ್ಥಿಸಿಕೊಳ್ಳಲು ಅಲ್ಲಿನ ಉನ್ನತ ಅಧಿಕಾರಿಗಳು ನಮ್ಮ ಮನೆಗೇ ಬಂದಿದ್ದರು. ಈ ಘಟನೆ ನಡೆದದ್ದು ಅಧ್ಯಕ್ಷ ಸುಕರ್ನೊ ಅವರು ತಮ್ಮ 'ಸಿಡಿ-ಗುಂಡು' ಹಾರಿಸಿದಾಗ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ರಾಜಕೀಯದಿಂದ ಹಿಂದೆ ಸರಿದಾಗ. ಅಮೆರಿಕದ ಎಲ್ಲ ಉದ್ಯೋಗಿಗಳಿಗೂ ತತ್‌ಕ್ಷಣ ಹುದ್ದೆಯನ್ನು ತೊರೆದುಹೋಗುವಂತೆ ಆದೇಶ ನೀಡಲಾಯಿತು. ಆಗ ಕೂಡ, ಮಾಡುತ್ತಿದ್ದ ಕೆಲಸವನ್ನು ಮುಗಿಸಲು ಮೂರು ತಿಂಗಳ ಕಾಲ ನಾವಲ್ಲಿ ನಿಂತೆವು. ಕೆಲಸ ಬಿಟ್ಟುಹೋದವರಲ್ಲಿ ನಾವೇ ಕೊನೆಯವರು.

ನಾಲ್ವರು ತಜ್ಞರನ್ನು ಒಳಗೊಂಡ ಯೋಜನೆಯೊಂದರ ಮುಖ್ಯಸ್ಥರಾಗಿ ಎರಡು ವರ್ಷಗಳ ಮಟ್ಟಿಗೆ ಭದ್ರಯ್ಯನವರು ಇರಾನಿಗೆ ಹೋಗಬೇಕಾಗಿ ಬಂತು. ಆದರೆ ಮತ್ತೆರಡು ವರ್ಷಗಳ ಕಾಲ ಅಲ್ಲಿ ಉಳಿದ ಏಕೈಕ ತಜ್ಞರೆಂದರೆ ಅವರೊಬ್ಬರೇ. ಕೀನ್ಯಾದಲ್ಲಿ ಐದು ಮಂದಿಯಿರುವ ತಂಡದ ಮುಖ್ಯಸ್ಥರಾಗಿ ಅವರಿರಬೇಕಾದ ಅವಧಿ ಎರಡು ವರ್ಷ ಮಾತ್ರವಾಗಿದ್ದರೂ ಐದು ವರ್ಷಗಳ ಕಾಲ ಅವರು ಅಲ್ಲಿದ್ದರು. ಹೆಚ್ಚಿಗೆ ನಾಲ್ವರು ಅಂತರರಾಷ್ಟ್ರೀಯ ಸಲಹೆಗಾರರಿಗೆ ಸಂಬಂಧಿಸಿದ ಅಧಿಕ ವೆಚ್ಚ ಮಾಡದೆಯೇ, ಸಮಗ್ರ ಯೋಜನೆಯನ್ನು ಸ್ಥಳೀಯ ಸಿಬ್ಬಂದಿಗಳ ನೆರವು ಪಡೆದು, ಓರ್ವ ಅನುಭವಸ್ಥ ವ್ಯಕ್ತಿಯೇ ನಿರ್ವಹಿಸಬಲ್ಲನೆಂದು ಅವರು ಸರಕಾರಕ್ಕೆ ಮನದಟ್ಟು ಮಾಡಿಕೊಟ್ಟರು. ಇಷ್ಟೇ ಅಲ್ಲ, ಮೂಲ ಯೋಜನೆಯನ್ನು ಅವರು ಕಾರ್ಯರೂಪಕ್ಕೆ ತರಲು ಆರಿಸಿದ್ದು ವಿಕ್ಟೋರಿಯ ಸರೋವರದ ಸಮೀಪದಲ್ಲಿರುವ ಚಿಕ್ಕ ಪ್ರದೇಶವೊಂದನ್ನು. ಅಲ್ಲಿ ಕೆಲಸ ಮಾಡಲು ಸಾಧ್ಯವೇ ಇಲ್ಲ ಎಂದು ಅಭಿಪ್ರಾಯ ಪಟ್ಟ ಮೊದಲ ವಿದೇಶೀ ತಜ್ಞರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಹೊರಟುಹೋಗಿದ್ದರು. ಆದರೆ ಅಲ್ಲಿ ಭದ್ರಯ್ಯನವರು ಯಶಸ್ಸು ಗಳಿಸಿದರಷ್ಟೇ ಅಲ್ಲ, ಆ ದೇಶದ ಎಲ್ಲ ಭಾಗಗಳಲ್ಲಿ ಹರಡಿರುವ ಆರು ಪ್ರತ್ಯೇಕ ಪ್ರದೇಶಗಳನ್ನೂ ವ್ಯಾಪಿಸುವಂತೆ ಯೋಜನೆಯನ್ನು ವಿಸ್ತರಿಸಿ

ದರು. ಕೀನ್ಯಾದಲ್ಲಿ ಕೂಡ ಅವರು ಇನ್ನಷ್ಟು ಸಮಯ ಇರುವಂತೆ ಸರಕಾರ ಬಯ ಸಿತು. ಆದರೆ ಒಂದು ಪ್ರದೇಶದಲ್ಲಿ ಒಬ್ಬ ವ್ಯಕ್ತಿ ಐದು ವರ್ಷಗಳಿಗಿಂತ ಹೆಚ್ಚು ಕಾಲ ತಜ್ಞನಾಗಿ ಕೆಲಸ ಮಾಡಲು ಯುನೆಸ್ಕೋದಲ್ಲಿ ಅವಕಾಶವಿರಲಿಲ್ಲ.

ಭದ್ರಯ್ಯನವರು ತಮ್ಮ ಕೆಲಸದಲ್ಲಿ ಅಷ್ಟು ಯಶಸ್ಸು ಪಡೆಯುತ್ತಿದ್ದುದು ಹೇಗೆ? ಅವರು ಆಯಾ ದೇಶದ ಸಮಸ್ಯೆಗಳನ್ನು ಕುರಿತು ಮೊದಲೇ ಕೂಲಂಕಷ ಅಧ್ಯಯನ ನಡೆಸಿ, ಸ್ಥಳೀಯ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಆ ಪ್ರದೇಶದ ಜನರ ಮನಸ್ಸನ್ನು ಅರಿಯುತ್ತಿದ್ದರು. ಉತ್ತಮ ಅಂತರ್‌ದೃಷ್ಟಿ ಹೊಂದಿದ್ದ ಅವರು ಸಮಸ್ಯೆ ಗಳಿಗೆ ಸಮರ್ಥ ಪರಿಹಾರಗಳನ್ನೇ ಕಂಡುಕೊಳ್ಳಬಲ್ಲವರಾಗಿದ್ದರು. ವಾಸ್ತವವಾಗಿ ಹೇಳುವುದಾದರೆ, ಈ ಅಂತರ್‌ದೃಷ್ಟಿ ಅವರ ಪ್ರಧಾನ ಗುಣಗಳಲ್ಲಿ ಒಂದಾಗಿದೆ. ಕೆಲವು ಸಂದರ್ಭಗಳಲ್ಲಿ, ನಾನೂ ಸೇರಿದಂತೆ ಅನೇಕ ಜನರು, ಭದ್ರಯ್ಯನವರು ಸಮಸ್ಯೆಯ ವಿಶ್ಲೇಷಣೆ ಮಾಡುವಲ್ಲಿ ಹಾಗೂ ಕಾರ್ಯವಿಧಾನದಲ್ಲಿ ತಪ್ಪಿದ್ದಾರೆ ಎಂದು ಆಲೋಚಿ ಸಿದ್ದೂ ಉಂಟು. ಆದರೆ ಕೊನೆಯಲ್ಲಿ ಫಲಿತಾಂಶವೇ ಅವರು ಹಿಡಿದ ಮಾರ್ಗ ಸರಿ ಎಂದು ದೃಢಪಡಿಸಿದೆ.

ಅಮೆರಿಕದ ಹಾಗೂ ಯೂರೋಪಿನ ರಾಷ್ಟ್ರಗಳ ತಜ್ಞರು ಸಾಮಾನ್ಯವಾಗಿ ಮಾಡುವಂತೆ ಒಂದು ದೇಶದಲ್ಲಿ ಕೆಲಸ ಮಾಡಿ ಸಮಸ್ಯೆಗೆ ಕಂಡು ಹುಡುಕಿದ ಪರಿಹಾರ ವನ್ನು, ಇನ್ನೊಂದು ರಾಷ್ಟ್ರದ ಸಮಸ್ಯೆಗೆ ನೇರವಾಗಿ ಭದ್ರಯ್ಯನವರು ಅನ್ವಯಿಸು ತ್ತಿದ್ದಿಲ್ಲ. ಅಭಿವೃದ್ಧಿ ಹೊಂದುತ್ತಿರುವ ಎರಡು ರಾಷ್ಟ್ರಗಳ ನಡುವೆ ಕೂಡ ಸ್ಥಿತಿಗತಿಗಳು ಬೇರೆಯೇ ಆಗಿರುತ್ತವೆ. ಆದ್ದರಿಂದ ಒಂದು ರಾಷ್ಟ್ರದಲ್ಲಿ ಸಫಲವೆನಿಸಿದ ಕಾರ್ಯಕ್ರಮ ಇನ್ನೊಂದರಲ್ಲಿ ವಿಫಲವಾಗಬಹುದೆಂದು ಅವರಿಗೆ ತಿಳಿದಿತ್ತು. ಸ್ವೀಡನ್ನಿನಲ್ಲಿ ನಾವು ಹೀಗೆ ಮಾಡಿದೆವು....ಮುಂತಾಗಿ ಜೊತೆಯಲ್ಲಿ ಕೆಲಸ ಮಾಡುವ ತಜ್ಞರು ಹೇಳಿದಾಗ ಅವರಿಗೆ ಅಸಹನೆಯುಂಟಾಗುತ್ತಿತ್ತು. ಒಂದೇ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುವ ಬದಲು, ಅವರು, ಆ ನಿರ್ದಿಷ್ಟ ಪ್ರದೇಶದಲ್ಲಿನ ಸನ್ನಿವೇಶ ಹಾಗೂ ಸ್ಥಿತಿಗತಿಗಳನ್ನು ಪ್ರತಿಯೊಂದೂ ದೃಷ್ಟಿಕೋನದಿಂದ, ಅಧ್ಯಯನ ಮಾಡುತ್ತಿದ್ದರು. ಯಾವುದೇ ತೀರ್ಮಾನಕ್ಕೆ ಬರುವ ಮೊದಲು ನಿಜವಾದ ಚಿತ್ರಣವೇನೆಂದು ತಿಳಿಯಲು, ಅನುಕೂಲ ವಾಗುವಂತೆ ತಾವೇ ಶೋಧಕ ಪ್ರಶ್ನೆಗಳನ್ನು ಸಮಸ್ಯೆಗೆ ಸಂಬಂಧಿಸಿದಂತೆ ಕೇಳಿಕೊಳ್ಳು ತ್ತಿದ್ದರು. ಒಂದು ವಿಚಾರ ಯುಕ್ತವಾದುದು ಎಂದು ಅವರಿಗನಿಸಿ ಅನುಸರಿಸಲು ಪರಿಹಾರವೊಂದನ್ನು ಕುರಿತು ಆಲೋಚಿಸಿದಾಗ, ಅವರದನ್ನು ಹೇಗೆ ಮಾಡುತ್ತಿದ್ದ ರೆಂದರೆ, ಯಾವ ಅಧಿಕಾರಿಯ ಜೊತೆ ಕೆಲಸ ಮಾಡುತ್ತಿದ್ದಾರೋ, ಆ ಅಧಿಕಾರಿ, ಅದು ತಾನೇ ಕಂಡುಕೊಂಡ ಪರಿಹಾರ ಹಾಗೂ ಅದರ ಯಶಸ್ಸಿನ ಕೀರ್ತಿ ಸಂಪೂರ್ಣವಾಗಿ ತನಗೇ ಸಲ್ಲತಕ್ಕದ್ದು ಎಂದು ಭಾವಿಸುವಂತೆ ಆಗುತ್ತಿತ್ತು. ಈ ರೀತಿಯಲ್ಲಿ ಯೋಜನೆ ಯನ್ನು ಕಾರ್ಯಗತಗೊಳಿಸುವಲ್ಲಿ ಅಧಿಕಾರಿ ನಿಜವಾದ ಆಸಕ್ತಿ ವಹಿಸುತ್ತಿದ್ದ. ಪರಿ ಣಾಮವಾಗಿ ಯೋಜನೆ ಯಶಸ್ವಿಯಾಗುವ ಅವಕಾಶ ಇನ್ನಷ್ಟು ಹೆಚ್ಚುತ್ತಿತ್ತು.

ಸ್ಥಳೀಯ ಸಿಬ್ಬಂದಿಗಳೊಂದಿಗೆ ವ್ಯವಹರಿಸುವುದು ಯಾವಾಗಲೂ ಸುಲಭವಾಗಿರು ತ್ತಿರಲಿಲ್ಲ. ದೂರದ ಪ್ರದೇಶಗಳಲ್ಲಿ ಕೆಲಸಮಾಡುವ ಅನಿವಾರ್ಯ ಸಂದರ್ಭ ಬಂದಾಗ, ಅಲ್ಲಿ

ನೇಮಕಗೊಂಡಂತಹ ಅಧಿಕಾರಿಗಳಲ್ಲಿ ಹಲವರು ತಮಗೆ ಶಿಕ್ಷೆ ಕೊಡಲಾಗಿದೆಯೆಂದೇ ಭಾವಿಸುತ್ತಿದ್ದರು. ರಾಜಧಾನಿಯಿಂದ ದೂರದಲ್ಲಿ ಬಹುಕಾಲ ಇರುವುದು ನಿಜವಾಗಿ ಶಿಕ್ಷೆಯೂ ಹೌದು. ತಮ್ಮ ಸಂಬಳವನ್ನು ಪಡೆಯಲು ಮಾತ್ರ ಎರಡು ವಾರಗಳಿಗೊಮ್ಮೆ ಕಛೇರಿಗೆ ಬರುವ ಪರಿಪಾಠವನ್ನು ಅವರು ಇಟ್ಟುಕೊಳ್ಳುತ್ತಿದ್ದರು. ಅಂಥ ಸಿಬ್ಬಂದಿಗಳಿಂದಲೂ ಭದ್ರಯ್ಯನವರು ಕೆಲಸ ಮಾಡಿಸಿಕೊಂಡರು, ಯೋಜನೆಯಲ್ಲಿ ಅವರಿಗೆ ಆಸಕ್ತಿ ಮೂಡುವಂತೆ ಮಾಡಿದರು, ಸಾಕಷ್ಟು ಉತ್ತಮವಾದ ಫಲಿತಾಂಶಗಳನ್ನು ಪಡೆದರು.

ದೂರದೂರದ ಪ್ರದೇಶಗಳಲ್ಲಿ ಕೆಲಸ ಮಾಡುವುದು ಭದ್ರಯ್ಯನವರಿಗೆ ಇಷ್ಟವಾಗಿದ್ದ ಕಾರಣ ಅಲ್ಲಿನ ಜನರು ಅವರನ್ನು ತಮ್ಮಲ್ಲೊಬ್ಬನೆಂದೇ ಭಾವಿಸುತ್ತಿದ್ದರು. ನಾವು ಹಳ್ಳಿಗಳ ಮನೆಗಳಲ್ಲಿ ಬಾಳಿದ್ದೇವೆ, ಅನೇಕ ಕಷ್ಟಗಳನ್ನು ಅನುಭವಿಸಿದ್ದೇವೆ. ಆದರೆ ತಮಗೆ ವಹಿಸಲಾದ ಕೆಲಸವನ್ನು ಯಶಸ್ವಿಯಾಗಿ ಪೂರೈಸಲು ಇದು ಅನಿವಾರ್ಯವೆಂದೇ ಭದ್ರಯ್ಯನವರು ಭಾವಿಸಿದ್ದರು. ಜನರು ಅವರಲ್ಲಿ ಎಂಥ ವಿಶ್ವಾಸವಿರಿಸಿದ್ದರೆಂಬುದಕ್ಕೆ ನಿದರ್ಶನವಾಗಿ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಜಕಾರ್ತಾದಲ್ಲಿ ಬ್ರಿಟಿಷ್ ರಾಯಭಾರ ಕಛೇರಿಗೆ ಬೆಂಕಿ ಹೊತ್ತಿದ ಸಂದರ್ಭ, ಎಲ್ಲ ತಜ್ಞರಿಗೂ ತತ್‌ಕ್ಷಣ ರಾಜಧಾನಿಗೆ ಮರಳುವಂತೆ ಆದೇಶ ನೀಡಲಾಯಿತು. ಇಂಥ ಅಪಾಯದ ಸನ್ನಿವೇಶದಲ್ಲಿಯೂ ಅಲ್ಲಿ ಭದ್ರಯ್ಯನವರೊಡನೆ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳು ನಮ್ಮ ರಕ್ಷಣೆಗೆ ಮುಂದೆ ಬಂದರು. ಹೀಗಾಗಿ ನಾವು ಅಲ್ಲಿಯೇ ಉಳಿಯಲು ಸಾಧ್ಯವಾಯಿತು. ಅದೇ ಕಾಲದಲ್ಲಿ, ಅಶಿಕ್ಷಿತ ವಯಸ್ಕರಿಗಾಗಿ ಸಾಹಿತ್ಯವನ್ನು ಸಿದ್ಧಗೊಳಿಸುವುದನ್ನು ಕುರಿತಂತೆ ಒಂದು ತಿಂಗಳ ಅವಧಿಯ ರಾಷ್ಟ್ರೀಯ ಕಾರ್ಯಾಗಾರಕ್ಕೆ ಒಂದು ವರ್ಷದಿಂದ ಭದ್ರಯ್ಯನವರು ಸಿದ್ಧತೆ ನಡೆಸುತ್ತಿದ್ದರು. ಕಾರ್ಯಾಗಾರದಲ್ಲಿ ಭಾಗವಹಿಸುವವರು ಆಗಲೇ ಅಲ್ಲಿಗೆ ಬಂದಿದ್ದರು. ರಾಷ್ಟ್ರದ ಎಲ್ಲೆಡೆಗಳಿಂದ ತುಂಬ ಖರ್ಚುಮಾಡಿ ಅವರನ್ನು ಅಲ್ಲಿಗೆ ಕರೆಸಿಕೊಳ್ಳಲಾಗಿತ್ತು. ಕೆಲವರಂತೂ ಸುದೀರ್ಘವೂ ಕಷ್ಟಕರವೂ ಆಗಿದ್ದ ಪ್ರವಾಸ ಮಾಡಿ ಹಾಜರಾಗಿದ್ದರು. ಇಂಥದೊಂದು ನಿರ್ಣಾಯಕ ಹಂತದಲ್ಲಿ ಭದ್ರಯ್ಯನವರು ಹೊರಟುಹೋಗಿದ್ದರೆ, ಇಡೀ ಕಾರ್ಯಕ್ರಮವೇ ಬಿದ್ದುಹೋಗುತ್ತಿತ್ತು. ಏಕೆಂದರೆ, ಅದು ಅವರು ವ್ಯವಸ್ಥೆಗೊಳಿಸುತ್ತಿದ್ದ ಅಂಥ ಮೊದಲ ಕಾರ್ಯಾಗಾರವಾಗಿತ್ತು. ಕಾರ್ಯಾಗಾರ ಯಶಸ್ವಿಯಾಗಿಯೇ ಮುಕ್ತಾಯಗೊಂಡಿತು. ಅವರ ಸಹೋದ್ಯೋಗಿಗಳೂ ಇತರರೂ ಕಾರ್ಯಾಗಾರವನ್ನು ಸದಾ ನೆನಪಿನಲ್ಲಿರಿಸಿಕೊಂಡರು ಹಾಗೂ ಕರ್ತವ್ಯಪಾಲನೆಯಲ್ಲಿ ಭದ್ರಯ್ಯನವರು ತೋರಿಸುವ ಶ್ರದ್ಧೆಗಾಗಿ ಮತ್ತು ತಮ್ಮಲ್ಲಿ ಅವರು ಇರಿಸಿದ ವಿಶ್ವಾಸಕ್ಕಾಗಿ ಗೌರವವನ್ನು ಸೂಚಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಳೀಯರ ನಡುವೆ ಭದ್ರಯ್ಯನವರು ವಿಶೇಷ ಜನಪ್ರಿಯರಾಗಿದ್ದರು. ಅವರು ಯಾವ ಹಳ್ಳಿಗೇ ಹೋಗಲಿ, ತಮ್ಮನ್ನು ಹಳ್ಳಿಯವನೆಂದೇ ತಿಳಿದುಕೊಳ್ಳುತ್ತಿದ್ದರು. ವಾಸ್ತವವಾಗಿ ಅವರು ಮೂಲತಃ ಹಳ್ಳಿಯಲ್ಲಿ ಹುಟ್ಟಿದವರೂ ಹೌದು. ಅವರು ಮಾತನಾಡುತ್ತಿದ್ದ ಭಾಷೆ ಸರಳ, ಆಲಂಕಾರಿಕ. (ಅಗತ್ಯ ಸಂದರ್ಭಗಳಲ್ಲಿ ದುಭಾಷಿಗಳಿದ್ದಾಗಲೂ ಕೂಡ.) ಆದರೂ ಅಭಿವೃದ್ಧ ಜಗತ್ತಿನಾದ್ಯಂತ ಇರುವ

ಹಳ್ಳಿಗಳ ಜನರು ಸುಲಭವಾಗಿ ಅದನ್ನು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಅವರ ಉಪನ್ಯಾಸಗಳು ಗಾದೆಗಳಿಂದ, ಎದ್ದು ಕಾಣುವ ನಿದರ್ಶನಗಳಿಂದ ತುಂಬಿರುತ್ತಿದ್ದುವು. ಉದಾಹರಣೆಗೆ, ಸ್ವಯಂ ತಮ್ಮ ಹಾಗೂ ತಮ್ಮ ರಾಷ್ಟ್ರದ ಅಭಿವೃದ್ಧಿಗಾಗಿ ಸರ್ಕಾರದೊಡನೆ ಜನರು ಕೆಲಸ ಮಾಡಬೇಕಾದುದು ಅಗತ್ಯವೆಂದು ವಿವರಿಸುವಾಗ, ಸರ್ಕಾರ ಸಾಬೂನಿನಂತೆ ಹಾಗೂ ಜನರು ನೀರಿನಂತೆ ಎಂದು ಅವರೆನ್ನುತ್ತಿದ್ದರು. ಸಾಬೂನನ್ನು ಮಾತ್ರ ಬಳಸಿದರೆ, ಬಟ್ಟೆ ಇನ್ನಷ್ಟು ಕೊಳಕಾಗುತ್ತದೆ, ಅಷ್ಟೆ ಬಟ್ಟೆಯ ಎಲ್ಲ ಭಾಗಗಳಿಗೆ ಸಾಬೂನಿನ ಸ್ವಚ್ಛಗೊಳಿಸುವ ಪರಿಣಾಮವನ್ನು ಉಂಟುಮಾಡಿ, ಆ ಮೂಲಕ ಅಪೇಕ್ಷಿತ ಫಲಿತಾಂಶವನ್ನು ಪಡೆಯಲು ನೀರು (ಜನರ ಪ್ರಯತ್ನ) ಅಗತ್ಯ. ಅವರು ಹೀಗೆ ವಿವರಿಸಿದಾಗ ಎಲ್ಲೆಡೆಗಳಲ್ಲೂ ಹಳ್ಳಿಯ ಹಿರಿಯರು 'ಹೌದು, ಹೌದು' ಎಂದು ತಲೆ ಅಲ್ಲಾಡಿಸುತ್ತಿದ್ದರು.

ಭಾರತದ ಪವಿತ್ರ ಗ್ರಂಥಗಳಿಗೆ ಸಂಬಂಧಿಸಿದಂತೆ ಅವರಿಗಿದ್ದ ಜ್ಞಾನವೂ, ಗ್ರಾಮದ ಜನರು ಅರ್ಥ ಮಾಡಿಕೊಳ್ಳಬಹುದಾದ ರೀತಿಯಲ್ಲಿ, ಭಾಷಣಗಳಲ್ಲಿ ಪ್ರಸಂಗಗಳನ್ನು ನಿದರ್ಶನಗಳನ್ನು ಎತ್ತಿ ಹೇಳಲು, ಅವರಿಗೆ ನೆರವಾಗುತ್ತಿತ್ತು. ಪುಟ್ಟ ಬಾಲಕನಾಗಿದ್ದಾಗ, ಅವರು ಸೇರಿದ ಮೊತ್ತ ಮೊದಲ ಶಾಲೆ ಕೂಲಿ ಮಠವೆಂಬ ಹೆಸರಿನ ಖಾಸಗಿ ಶಾಲೆಯಾಗಿತ್ತು (ಆಗ ಅವರ ಹಳ್ಳಿಯಲ್ಲಿ ಸರಕಾರಿ ಶಾಲೆಯಿದ್ದಿರಲಿಲ್ಲ) ಆ ಕೂಲಿ ಮಠದಲ್ಲಿ 'ರಾಮಾಯಣ' ಮತ್ತು 'ಮಹಾಭಾರತ' ಗಳನ್ನು ಬೋಧಿಸಲಾಗುತ್ತಿತ್ತು. ಕೂಲಿ ಮಠಕ್ಕೆ 'ಮರಳು ಶಾಲೆ' ಎಂಬ ಹೆಸರೂ ಇತ್ತು. ಏಕೆಂದರೆ ಆ ಶಾಲೆಗಳಲ್ಲಿ ಮಕ್ಕಳು ತಮ್ಮ ತರ್ಜನಿ ಬೆರಳಿನಿಂದ ಮರಳಿನ ಮೇಲೆ ಬರೆದೇ ಅಕ್ಷರಗಳನ್ನು ಕಲಿಯಬೇಕಾಗಿತ್ತು. ಅವರು ಆ ಮೊದಲು ತಾಯಿಯಿಂದ ಸಂಪಾದಿಸಿದ ಧರ್ಮಗ್ರಂಥಗಳ ಬಗೆಗಿನ ಜ್ಞಾನವನ್ನು ಈ ಶಾಲೆ ಹೆಚ್ಚಿಸಿತು. ಸ್ವಲ್ಪ ದೊಡ್ಡವರಾಗುವ ವೇಳೆಗೆ ಎಲ್ಲ ಮಹಾ ಗ್ರಂಥಗಳನ್ನು ಓದುವುದರಲ್ಲಿ ಅವರೆಂಥ ಆಸಕ್ತಿ ಹಾಗೂ ಸಹನೆಗಳನ್ನು ಬೆಳೆಸಿಕೊಂಡಿದ್ದರೆಂದರೆ, ಇನ್ನೊಂದು ಹಳ್ಳಿಯ ಹಿರಿಯರೊಬ್ಬರ ಮನೆಯಿಂದ, ಹಳೆಯ ಹಾಗೂ ಭಾರೀ ಗಾತ್ರದ ಸಂಪುಟಗಳನ್ನು ಅವರು "ಎರವಲು" ತಂದು ಓದಿದರು ; ಅವುಗಳನ್ನು ಗುಟ್ಟಾಗಿ ತಮ್ಮೊಡನೆ ಇರಿಸಿಕೊಂಡರು ಹಾಗೂ ಒಂದು ದಿನ ರಾತ್ರಿ ತುಂಬ ಹೊತ್ತಾದ ಅನಂತರ ಗುಟ್ಟಾಗಿಯೇ ಅವುಗಳನ್ನು ದುಃಖದಿಂದ ವಾಪಸ್ ಕೊಟ್ಟು ಬಂದರು.

'ರಾಮಾಯಣ', ಮಹಾಭಾರತ ಎರಡು ಮಹಾಗ್ರಂಥಗಳ ಬಗೆಗಿನ ಅವರ ಜ್ಞಾನ ಬದುಕಿನ ಆದ್ಯಂತ ಉಳಿಯಿತು. ಅವರಿಗೆ ಈ ಕೃತಿಗಳನ್ನು ಕುರಿತಂತೆ ಇರುವಷ್ಟು ತಿಳಿವಳಿಕೆ ಈಗ ನಮ್ಮ ಕಿರಿಯ ತಲೆಮಾರಿನಲ್ಲಿ ಕೆಲವರಿಗೆ ಮಾತ್ರ ಇರಬಹುದಷ್ಟೆ. ಈ ಮಹಾ ಕಾವ್ಯಗಳಲ್ಲಿ ಬರುವ ಪಾತ್ರಗಳನ್ನು ಭದ್ರಯ್ಯನವರು ತಮ್ಮ ಉಪನ್ಯಾಸಗಳಲ್ಲಿ ಯಾವಾಗ ಬೇಕಾದರೂ ಉಲ್ಲೇಖಿಸುತ್ತಿದ್ದರು. ಇಂಥ ಉಲ್ಲೇಖಗಳು, ಭಾರತದಲ್ಲಿ ಮಾತ್ರವಲ್ಲದೆ, ಜನಸಂಖ್ಯೆಯಲ್ಲಿ ಶೇಕಡ ೯೦ ರಷ್ಟು ಮಂದಿ ಮುಸ್ಲಿಮರಾಗಿದ್ದರೂ, ಸಂಸ್ಕೃತಿ ಹಾಗೂ ಜನರ, ಹಳ್ಳಿಗಳ ಮತ್ತು ಪಟ್ಟಣಗಳ ಹೆಸರುಗಳು ಹೆಚ್ಚಾಗಿ ಹಿಂದೂ ಹೆಸರುಗಳಾಗಿರುವಂತಹ, ಇಂಡೋನೇಷ್ಯದಲ್ಲಿ ಕೂಡ, ಯಾವಾಗಲೂ ಪರಿಣಾಮಕರವಾಗುತ್ತಿದ್ದುವು.

ತಾನು ಕೆಲಸ ಮಾಡುತ್ತಿದ್ದ ಇತರ ದೇಶಗಳ ಜನರ ಸಂಸ್ಕೃತಿ–ಸಂಪ್ರದಾಯ ಗಳನ್ನೂ ಅವರು ಕಲಿಯುತ್ತಿದ್ದರು; ಅವರ ಧಾರ್ಮಿಕ ಗುರುಗಳು ಹಾಗೂ ಮುಖಂಡರ ಬಗ್ಗೆ ಅಧ್ಯಯನ ಮಾಡುತ್ತಿದ್ದರು. ಅವರ ಈ ಗುಣದಿಂದಾಗಿ ಜನರ ಮೇಲೆ ವಿಶೇಷ ಪ್ರಭಾವ ಉಂಟಾಗುತ್ತಿತ್ತು. ಅವರ ವಿಚಾರಗಳೂ ಮಾತುಗಳು ಆ ಜನರಿಗೆ ಅರ್ಥ ವತ್ತಾಗಿ ಕಾಣುತ್ತಿದ್ದುದರಿಂದ ಅಭಿವೃದ್ಧಿ ಕಾರ್ಯಗಳಲ್ಲಿ ಅವರ ಸಹಕಾರ ಪಡೆಯು ವುದು ಸುಲಭ ಸಾಧ್ಯವಾಗುತ್ತಿತ್ತು.

ಅರಣ್ಯಗಳಲ್ಲಿ ಹಾಗೂ ಕ್ಯಾಮರೂನಿನ "ವ್ಯಾಧಿ–ವಲಯ"ದಲ್ಲಿ ಪ್ರಯಾಣ ಮಾಡುವುದು ನಿಜವಾಗಿಯೂ ಅಪಾಯಕರ. ಹೀಮೊಲಿಟಿಕ್ ಅನಿಮಿಯ ಹಾಗೂ ಲ್ಯುಕೇಮಿಯಗಳಿಂದ ನರಳುತ್ತಿದ್ದ, ಕಳೆದ ಮೂರು ವರ್ಷಗಳ ಅವಧಿಯಲ್ಲಿ, ತಾವು ಪ್ರಮುಖವೆಂದು ಪರಿಗಣಿಸಿದ ಕೆಲಸವನ್ನು ಮಾಡಿ ಮುಗಿಸಲೇ ಬೇಕೆಂಬ ಅವರ ಮನೋಭಾವ ಕೂಡ ಅವರ ಆರೋಗ್ಯಕ್ಕೆ ಹೆಚ್ಚು ಹಾನಿಯನ್ನುಂಟು ಮಾಡಿತ್ತು. ಆಸ್ಪತ್ರೆವಾಸ ಹಾಗೂ ರಕ್ತಪೂರಣಗಳ ಒಂದು ಸರಣಿಯ ಅನಂತರ, ಹಾಸಿಗೆಯಲ್ಲಿ ಸಂಪೂರ್ಣ ವಿಶ್ರಾಂತಿ ಪಡೆಯಬೇಕೆಂಬ ಸಲಹೆ ನೀಡಿದಾಗ ಕೂಡ ಅವರು ಕಛೇರಿಗೆ ಹೋಗುತ್ತಿದ್ದರು; ಸಭೆಗಳಲ್ಲಿ ಮೂರು ಗಂಟೆಗಳ ಕಾಲ ಕುಳಿತುಕೊಳ್ಳುತ್ತಿದ್ದರು; ಉಪನ್ಯಾಸ ನೀಡಲು ಬೇರಾವುದಾದರೂ ಸ್ಥಳಕ್ಕೆ ಹೋಗುತ್ತಿದ್ದರು ಅಥವಾ ಕೆಂಪು ಪಟ್ಟಿಯ ತೊಂದರೆಗೊಳಗಾದ ಇನ್ನಾವುದೋ ಒಬ್ಬ ನೌಕರನಿಗೆ ನ್ಯಾಯ ದೊರಕಿಸಿ ಕೊಡುವ ಉದ್ದೇಶದಿಂದ ಹೋರಾಡಲು ಸರಕಾರಿ ಕಛೇರಿಗಳ ಮೆಟ್ಟಲು ಹತ್ತಿ ಇಳಿಯುತ್ತಿದ್ದರು. ಇಂಥ ಅನಾರೋಗ್ಯದ ಸ್ಥಿತಿಯಲ್ಲಿಯೇ ತಾವು ಕೆಲಸ ಮಾಡುವುದ ರಿಂದ ಕೆಲಸದ ಫಲಿತಾಂಶ ಹೆಚ್ಚು ಪರಿಣಾಮಕರವಾಗುವುದೆಂದೂ ಅವರು ಕೆಲವು ಸಲ ವಾದಿಸುತ್ತಿದ್ದರು. ಅಂಥ ವಿಪರೀತ ಶ್ರಮದಿಂದ ಅವರನ್ನು ಪಾರು ಮಾಡಲು ಪ್ರಯತ್ನಿ ಸುತ್ತ ನಾನು "ಬಾಗಿಲಿನ ಬಳಿ ಡ್ರೇಗನ್ನಿ"ನಂತೆ ನಿಲ್ಲಬೇಕಾಗುತ್ತಿತ್ತು. ಇಂಥ ಕೆಲಸಗಳಿ ಗಾಗಿ ಭದ್ರಯ್ಯನವರು ಯಾವ ಬೆಲೆ ತೆರಬೇಕಾಗುತ್ತದೆಂದು ಇತರರಿಗೆ ತಿಳಿಯುತ್ತಿರ ಲಿಲ್ಲ. ಶ್ರಮದಾಯಕ ಕೆಲಸ ಮುಗಿದ ಅನಂತರ ಅನೇಕ ದಿನಗಳ ಕಾಲ, ಅವರು ತೀರ ಬಳಲಿದಂತೆ ಕಾಣುತ್ತಿದ್ದರು. ಈ ದಣಿವಿನಿಂದಾಗಿ, ಸಾಮಾನ್ಯವಾಗಿ ಆಗಾಗ ಅವರಲ್ಲಿ ಹೀಮೊಗ್ಲೊಬಿನ್‌ನ ಪ್ರಮಾಣ ಕಮ್ಮಿಯಾಗುತ್ತಿತ್ತು. ಅವರು ಸೇವಿಸಬೇಕಾದ ಔಷಧ ಗಳ ಪ್ರಮಾಣ ಕಮ್ಮಿಯಾಗುತ್ತಿತ್ತು. ಔಷಧಗಳ ಎಲ್ಲ ಕೆಟ್ಟ ಪಾರ್ಶ್ವ–ಪರಿಣಾಮಗಳಿಗೂ ಅವರು ಒಳಗಾಗಬೇಕಾಗುತ್ತಿತ್ತು ಅಥವಾ ಅಪಾಯಕರವಾದ ಇನ್ನೊಂದು ರಕ್ತಪೂರಣ ಸರಣಿಗೆ ದೇಹವನ್ನು ಒಡ್ಡಬೇಕಾಗಿ ಬರುತ್ತಿತ್ತು.

ಡಾಕ್ಟರರು ಮಾತ್ರ ಇವೆಲ್ಲವನ್ನೂ ತಿಳಿದಿದ್ದರು. ಈ ಕಾರಣವಾಗಿಯೇ ಕೆಲವು ಸಲ ಆಸ್ಪತ್ರೆ ವಾಸದ ಅವಧಿ ಸುದೀರ್ಘವಾಗುತ್ತಿತ್ತು.... ಅವರಿಗೆ ಕೆಲಸದಲ್ಲಿ ಹಾಗೂ ಪರರ ಸೇವೆ ಮಾಡುವುದರಲ್ಲಿ ಇರುವ ಉತ್ಸಾಹವನ್ನು ನಿಯಂತ್ರಿಸಲು ಆಸ್ಪತ್ರೆಯಲ್ಲಿ ಇರಿಸುವುದೊಂದೇ ಮಾರ್ಗವಾಗಿತ್ತು. ಆದರೆ "ಕೆಲಸಮಾಡಲು ಶಕ್ತಿಯಿಲ್ಲವಾದ ಪಕ್ಷದಲ್ಲಿ ಬದುಕಿ ಇದ್ದಾದರೂ ಏನು ಫಲ? ಎಂದು ಭದ್ರಯ್ಯನವರು ಆಗಾಗ ಕೇಳು ತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಮುಖ್ಯ ವೈದ್ಯಾಧಿಕಾರಿಗಳು ಹೀಗೆ ಹೇಳಿದ್ದೂ

ಉಂಟು. "ಶ್ರೀ ಭದ್ರಯ್ಯನವರಲ್ಲಿ ಇರುವಂಥ ಕಾರ್ಯೋತ್ಸಾಹ ಶೇಕಡ ಎರಡು ಅಥವಾ ಮೂರರಷ್ಟು ಜನರಲ್ಲಿದ್ದರೂ ಇಂದು ಭಾರತ ಬೇರೆಯೇ ಸ್ಥಾನಮಾನಗಳನ್ನು ಗಳಿಸಿರುತ್ತಿತ್ತು".

ಭದ್ರಯ್ಯನವರ ಅಗಾಧ ಧಾರ್ಮಿಕ ಶ್ರದ್ಧೆಯ ಬಗ್ಗೆ ಬಹುಶಃ ಅನೇಕರಿಗೆ ತಿಳಿದಿರಲಾರದು. ಪ್ರಾರಂಭದಲ್ಲಿ ನನ್ನ ಮೇಲೆ ವಿಶೇಷ ಪ್ರಭಾವ ಬೀರಿದುದೆಂದರೆ ಅವರಿಗೆ ಪರಮಾತ್ಮನಲ್ಲಿ ಇರುವ ಅನನ್ಯಭಕ್ತಿ. ದೈವಭಕ್ತರಾಗಿದ್ದರೂ ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟುಳಿದಂತೆ, ಅವರು ದೇವಾಲಯಗಳಿಗೆ ಹೋಗುತ್ತಿದ್ದಿಲ್ಲ. "ಪರಮಾತ್ಮ ಸರ್ವಾಂತರ್ಯಾಮಿಯಾಗಿರುವಾಗ ದೇವಾಲಯಗಳಿಗೆ ಹೋಗುವ ಅಗತ್ಯವಾದರೂ ಏನು?" ಎಂದು ಅವರು ಕೇಳುತ್ತಿದ್ದರು. ಪರಮಾತ್ಮನ ಸರ್ವವ್ಯಾಪಕತೆಯೆ ಎಲ್ಲ ಧರ್ಮಗಳ ಪ್ರಮುಖ ತತ್ತ್ವವಲ್ಲವೆ? "ಈ ವಿಶ್ವವೇ ನನ್ನ ದೇವಾಲಯ, ಕಾಯಕವೇ ಕೈಲಾಸ; ಜನಸೇವೆಯೇ ತೀರ್ಥಯಾತ್ರೆ" ಎಂದೂ ಅವರೆನ್ನುತ್ತಿದ್ದರು.

ದಾರಿದ್ರ್ಯ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು ಹಾಗೂ ಇನ್ನಿತರ ಕಾರಣಗಳಿಂದಾಗಿ ತುಂಬ ದುಃಖ ಸಂಕಟಗಳಿಗೆ ಒಳಗಾಗಬೇಕಾಗಿ ಬಂದಿದ್ದರೂ ಭದ್ರಯ್ಯನವರಿಗೆ "ಪಾಲಿಗೆ ಬಂದದ್ದು ಪಂಚಾಮೃತ" ಎಂಬ ಮಾತಿನಲ್ಲಿ ಅಚಲ ವಿಶ್ವಾಸವಿತ್ತು. ಅನ್ಯರ ಸೇವೆಗಾಗಿ ತಮ್ಮ ಇಡೀ ಜೀವಮಾನವನ್ನು ಕಳೆದ ಅವರ ಆಯುಸ್ಸಿನ ಈ ಕೊನೆಯ ವರ್ಷ, ನಾನೂ ಹಾಗೆ ಹೇಳಿಕೊಳ್ಳದೆ ಬೇರೆ ವಿಧಿಯಿಲ್ಲವಾಗಿದೆ. ಆದರೆ ಆತ್ಮ ಅಮರವೆಂಬ ದೃಷ್ಟಿಯಿಂದ, ಅವರ ನರಳಾಟದ ಕೆಲವು ತಿಂಗಳುಗಳ ಅವಧಿ ಅತ್ಯಲ್ಪವೆಂದೇ ಹೇಳಬಹುದು. ಜೀವನದ ಕೊನೆ ಕೊನೆಯ ತಿಂಗಳುಗಳಲ್ಲಿ, ಓದುವ ಸಂದರ್ಭ ಬಂದಾಗಲೆಲ್ಲ (ಪ್ರಪಂಚದ ಹಾಗೂ ಸ್ವದೇಶದ ಸುದ್ದಿಗಳಲ್ಲಿ ಆಸಕ್ತಿ ಇರುವುದರಿಂದ) ಅವರು ಸಮಾಚಾರ ಪತ್ರಿಕೆಗಳನ್ನು ಬಿಟ್ಟರೆ, ತಪ್ಪದೆ ಓದುತ್ತಿದ್ದದ್ದು ಮಹಾಕವಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನ'ವನ್ನು. ಅವರು ಆಗಾಗ ರಾಮನಾಮವನ್ನು ಜಪಿಸುತ್ತಿದ್ದರು. 'ರಾಮ, ರಾಮ'—ಇವೇ ಅವರು ಉಚ್ಚರಿಸಿದ ಕೊನೆಯ ಶಬ್ದಗಳಾಗಿವೆ.

ಅವರನ್ನು ಇನ್ನೆಂದಿಗೂ ಕಾಣಲಾರದ ನಾನು 'ಭಗವದ್ಗೀತೆಯ' ಈ ಶ್ಲೋಕವನ್ನು ಹೇಳಿಕೊಂಡು, ಈಗ ಸಮಾಧಾನ ತಾಳುತ್ತಿದ್ದೇನೆ:

'ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥'

(ಅಧ್ಯಾಯ ೮, ಶ್ಲೋಕ ೫)

ಕನ್ನಡಕ್ಕೆ : ಶಂಸ ಐತಾಳ

# ನಭ ಅವರ ವ್ಯಕ್ತಿತ್ವ ಮತ್ತು ಕೃತಿಗಳು

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಶ್ರೀ ನ. ಭದ್ರಯ್ಯನವರ ಕೃತಿಗಳನ್ನು ಕುರಿತು ಬರೆಯುವಾಗ ಒಂದು ಅಂಶವನ್ನು ಮುಖ್ಯವಾಗಿ ಗಮನಿಸಬೇಕು. ಅದೆಂದರೆ ಅವರು ತಮ್ಮ ಕೃತಿಗಳನ್ನೂ ಮೀರಿ ಬೆಳೆದಿದ್ದಾರೆಂಬುದು. ಕುವೆಂಪು ಅವರು ಈಚೆಗೆ, ಅವರ ಪ್ರವಾಸಕೃತಿಗಳ ಪರಿಚಯದ ಸಂದರ್ಭದಲ್ಲಿ ಹೇಳಿದ ಈ ಮಾತನ್ನು ಇಲ್ಲಿ ಉದಾಹರಿಸಬಹುದು : "ಅವರ ಮೂರೂ ಪ್ರವಾಸಕಥನಗಳನ್ನು ನಾನು, ಇತರ ಕೃತಿಗಳಂತಲ್ಲದೆ ಅವಧಾನಪೂರ್ವಕವಾಗಿ ಓದಿದ್ದೇನೆ. ಒಂದೊಂದು ಕೃತಿಯೂ ಅದ್ಭುತ ಎಂಬ ವಿಶೇಷಣಕ್ಕೆ ಯೋಗ್ಯವಾಗಬಲ್ಲುದು. ಆದರೆ ನೆನಪಿಡಬೇಕು, ನಭ ಅವರ ವ್ಯಕ್ತಿತ್ವ ಅವರ ಕೃತಿಗಳಿಗಿಂತ ಎಷ್ಟೋ ಮಡಿ ದೊಡ್ಡದು ಎಂಬುದನ್ನು. ಯಾವುದು ನನ್ನ ಜೀವನ ಧ್ಯೇಯವಾಗಿದೆಯೋ, ಯಾವುದನ್ನು ನನ್ನ ಅಂತಿಮ ಸಂದೇಶವೆಂದು ಸಾರುತ್ತಿದ್ದೇನೆಯೋ ಆ ವಿಶ್ವಮಾನವ ಪ್ರಜ್ಞೆಯನ್ನು ನಭ ಅವರು ತಮ್ಮ ಬದುಕಿನಲ್ಲಿ ಸಾಧಿಸಿ ಕೃತಕೃತ್ಯರಾಗಿದ್ದಾರೆ"—ಈ ಮಾತು ಶ್ರೀ ಭದ್ರಯ್ಯನವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಮಂಡ್ಯ ಜಿಲ್ಲೆಯ ಕಿರುಹಳ್ಳಿಯೊಂದರಲ್ಲಿ ಬಡ ರೈತ ಕುಟುಂಬದ ಹಿರಿಯ ಮಗನಾಗಿ ಹುಟ್ಟಿದ ಶ್ರೀ ಭದ್ರಯ್ಯನವರು ಬಡತನದ ಎಲ್ಲ ಕಷ್ಟಗಳ ಮಧ್ಯದಲ್ಲಿಯೂ ಎದೆಗುಂದದೆ ಕರ್ತವ್ಯನಿಷ್ಠೆಯಿಂದ ಮುಂದೆ ಬಂದವರು. ಮೈಸೂರಿನಲ್ಲಿ ಅವರು ವಿದ್ಯಾರ್ಥಿಯಾಗಿದ್ದಾಗ ವಾರಾನ್ನಕ್ಕಾಗಿ ಮನೆ ಮನೆಗಳನ್ನು ಸುತ್ತಬೇಕಾಗಿತ್ತು. ಆದರೂ ಅದನ್ನು ಲೆಕ್ಕಿಸದೆ ಶ್ರದ್ಧೆಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಅದು ದೇಶದಲ್ಲಿ ಗಾಂಧೀಜಿಯ ಯುಗ ಆರಂಭವಾಗಿದ್ದ ಕಾಲ. ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯದ ಹೋರಾಟದಲ್ಲಿ ಧುಮುಕಿದರು. ದೇಶದ ಕರೆ ಅವರನ್ನು ಸಂಪೂರ್ಣವಾಗಿ ಆವರಿಸಿತು. ಎರಡು ಮೂರು

ಸಾರಿ ಸೆರೆಮನೆಯನ್ನು ಸೇರಿದರು; ಅದರ ಎಲ್ಲ ಕಷ್ಟನಷ್ಟಗಳನ್ನೂ ಅನುಭವಿಸಿದರು. ಆದರೂ ಅದಕ್ಕೆ ಅಂಜದೆ ಅಳುಕದೆ ಮುನ್ನಡೆದು ಆ ಹೋರಾಟದ ಜೊತೆಯಲ್ಲಿಯೇ ಬೆಳೆದರು. ಗಾಂಧೀಜಿಯವರಿಂದ ಪ್ರಭಾವಿತರಾಗಿ ಆ ಉನ್ನತ ಧ್ಯೇಯಾದರ್ಶಗಳ ಹಿನ್ನೆಲೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ತಾವು ಧರಿಸಿದ ಶುಭ್ರ ಖಾದಿಯಷ್ಟೇ ಪರಿಶುಭ್ರವಾಗಿ ಅವರ ಜೀವನವೂ ರೂಪುಗೊಂಡಿತು.

ಗ್ರಾಮೀಣ ಪರಿಸರದಿಂದ ಬರುತ್ತಿರುವ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಪಡುತ್ತಿದ್ದ ಕಷ್ಟವನ್ನು ಸ್ವಾನುಭವದಿಂದ ಮನಗಂಡಿದ್ದ ನಭ ಅವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಾಮಸೇವಾ–ಉಚಿತ ವಿದ್ಯಾರ್ಥಿನಿಲಯವನ್ನು ಮೈಸೂರಿನಲ್ಲಿ ಪ್ರಾರಂಭಿಸಿದರು; ಅವರ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. "ಗ್ರಾಮಸೇವೆ" ಎಂಬ ಒಂದು ಪತ್ರಿಕೆಯನ್ನು ಪ್ರಾರಂಭಿಸಿ, ಆ ಮೂಲಕ ಹಳ್ಳಿಯ ಸಮಸ್ಯೆಗಳನ್ನು ಜನತೆಯ ಮುಂದಿಡುವ ಪ್ರಯತ್ನಗಳನ್ನು ಕೈಗೊಂಡರು. ಕೆಲವು ಕಾಲ ಆ ಪತ್ರಿಕೆ ಪ್ರಭಾವಶಾಲಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿತು. ಇದರ ಜೊತೆಗೆ ಗಾಂಧೀ ಸಾಹಿತ್ಯದ ಆಳವಾದ ಅಧ್ಯಯನದಲ್ಲಿ ತೊಡಗಿ ಆ ತತ್ತ್ವಗಳಿಗೆ ತಮ್ಮನ್ನು ಅರ್ಪಿಸಿಕೊಂಡರು. "ಭಾರತದ ಉದ್ಧಾರ ಅದರ ಗ್ರಾಮಗಳಲ್ಲಿ ಅಡಗಿದೆ" ಎಂಬ ಗಾಂಧೀಜಿಯವರ ಕರೆಗೆ ಓಗೊಟ್ಟು ಅಲ್ಲಿ ರಚನಾತ್ಮಕ ಕಾರ್ಯಗಳನ್ನು ಕೈಗೆತ್ತಿಕೊಂಡರು. ಆ ಕ್ಷೇತ್ರದಲ್ಲಿ ಅವರ ಕಾರ್ಯಚಟುವಟಿಕೆಗಳು ಬಹುಮುಖವಾಗಿ ಬೆಳೆದುವು. ಸುತ್ತಲ ಹಳ್ಳಿಗಳಲ್ಲಿ ಅನೇಕ ಸಮಾಜಸೇವಾ ಸಂಸ್ಥೆಗಳು ಪ್ರಾರಂಭವಾದುವು. ಅಂತೆಯೇ ಖಾದಿ ಸೊಸೈಟಿ, ಹರಿಜನ ಸೇವಾ ಕೇಂದ್ರ, ಗಾಂಧೀ ವಿಚಾರ ಪರಿಷತ್ತು, ಗಾಂಧೀ ಗ್ರಂಥ ಮಾಲೆ—ಮೊದಲಾದುವುಗಳ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಇದರ ಒಂದು ಪ್ರಮುಖ ಅಂಗವಾದ ವಯಸ್ಕರ ಶಿಕ್ಷಣ ವಿಶೇಷವಾಗಿ ಅವರ ಗಮನವನ್ನು ಸೆಳೆಯಿತು. ನಮ್ಮ ಜನ ವಿದ್ಯಾವಂತರಾಗುವುದು, ಸ್ವಾತಂತ್ರ್ಯ ಸಾಧನೆಯಷ್ಟೇ ಮುಖವಾದ ಅಂಶವೆಂಬುದನ್ನು ಮನಗಂಡ ಶ್ರೀ ಭದ್ರಯ್ಯನವರು, ವಯಸ್ಕರ ಶಿಕ್ಷಣ, ಸ್ವಾತಂತ್ರ್ಯದ ಹೋರಾಟಕ್ಕೆ ಅಗತ್ಯವಾದ ತಳಹದಿಯೆಂದು ಭಾವಿಸಿ, ತಮ್ಮನ್ನು ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಕೆಲ ಅಧ್ಯಾಪಕರಿಂದ ಪ್ರಾರಂಭವಾಗಿ ಕ್ರಮೇಣ ಬೆಳೆಯುತ್ತಿದ್ದ ವಯಸ್ಕರ ಶಿಕ್ಷಣ ಚಳುವಳಿಯಲ್ಲಿ ಶ್ರೀ ಭದ್ರಯ್ಯನವರು ಪ್ರಮುಖ ಪಾತ್ರವಹಿಸಿದರು. ಮುಂದೆ ರೂಪುಗೊಂಡ ವಯಸ್ಕರ ಶಿಕ್ಷಣ ಸಮಿತಿಗೆ ಪೂರ್ಣ ಸಮಯದ ಗೌರವ ಕಾರ್ಯದರ್ಶಿಗಳಾದರು; ಮತ್ತು ಅದರ ಚೇತನ ಶಕ್ತಿಯಾಗಿ ಬಹುಮುಖವಾಗಿ ಅದನ್ನು ಬೆಳೆಸಿದರು. ಅವರ ದೂರದೃಷ್ಟಿಯ ಫಲವಾಗಿ ಪುಸ್ತಕ ಮಾಲೆಗಳು, 'ಬೆಳಕು' ವಾರಪತ್ರಿಕೆ, ಪುಸ್ತಕ ಪ್ರಪಂಚ ಮಾಸಪತ್ರಿಕೆ, ಮೊದಲಾದುವು ಮೂಡಿಬಂದುವು. ಮುಂದೆ ಅವರು ಸಮಿತಿಯ ಅಧ್ಯಕ್ಷರೂ ಆದರು. ಆಗ ವಿದ್ಯಾಪೀಠಗಳನ್ನು ಸ್ಥಾಪಿಸಿ ಅವುಗಳನ್ನು ಯಶಸ್ವಿಯಾಗಿ ನಿರ್ವಹಿಸಿ ತೋರಿಸಿದರು; ಅಂತರರಾಷ್ಟ್ರೀಯ ತಜ್ಞರ ಗಮನ ಸೆಳೆಯುವಂತೆ ಅವುಗಳನ್ನು ಬೆಳೆಸಿದರು. ಇವರ ಈ ಅನುಭವವನ್ನು ಅಂತರರಾಷ್ಟ್ರೀಯ ಸಂಸ್ಥೆಯಾದ "ಯುನೆಸ್ಕೊ"

ಬಳಸಿಕೊಳ್ಳಲು ಮುಂದೆ ಬಂದಿತು. ಆಫ್ರಿಕಾದ ಕ್ಯಾಮರೂನ್ಸ್, ಕೇನ್ಯಾ, ಇಂಡೊನೇಷಿಯ, ಇರಾನ್ ಮುಂತಾದ ಅನೇಕ ದೇಶಗಳಿಗೆ ಹೋಗಿ ಅಲ್ಲಿನ ಪರಿಸರವನ್ನು ಅಧ್ಯಯನವಾಡಿ, ಪ್ರತ್ಯಕ್ಷವಾಗಿ ಕಂಡು ಅಲ್ಲಿಗೆ ಅಗತ್ಯವಾದ ರೀತಿಯಲ್ಲಿ ವಯಸ್ಕರ ಶಿಕ್ಷಣ ಯೋಜನೆಗಳನ್ನು ಸಿದ್ಧಮಾಡಿಕೊಟ್ಟರು. ಈ ಕಾರ್ಯದಲ್ಲಿ ಇವರು ತೊಡಗಿರುವಾಗ ಓರ್ವ ಅಮೆರಿಕನ್ ಮಹಿಳೆ, ವಯಸ್ಕರ ಶಿಕ್ಷಣದ ಸಂಶೋಧನಾ ವಿದ್ಯಾರ್ಥಿನಿಯಾಗಿ ಇವರ ಬಳಿಗೆ ಬಂದರು. ಮುಂದೆ ಇವರನ್ನೇ ಮದುವೆಯಾಗಿ ಶಾಂತಾಭದ್ರಯ್ಯ ಆದರು; ಭಾರತೀಯ ಪೌರತ್ವವನ್ನು ಪಡೆದು ಇಲ್ಲಿಯೇ ನೆಲಸಿದರು.

ಹೀಗೆ ವಿಶ್ವಪರ್ಯಟನೆಯಿಂದ ವಿಶಾಲದೃಷ್ಟಿಯನ್ನೂ ಉನ್ನತ ವ್ಯಕ್ತಿತ್ವವನ್ನು ಸಾಧಿಸಿದ ಅವರ ಜೀವನ, ಅವರನ್ನು ವಿಶ್ವಪ್ರಜೆಯನ್ನಾಗಿ ಮಾಡಿತು. ಅವರಿಗೆ ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಅನೇಕ ಪಾರಿತೋಷಕಗಳೂ ಪ್ರಶಸ್ತಿಗಳೂ ಲಭಿಸಿದುವು. ಆದರೆ ಅವುಗಳ ಪ್ರಲೋಭನೆಗಳಿಗಾಗಲೀ ಪ್ರಚಾರಕ್ಕಾಗಲೀ ಒಳಗಾಗದೆ ಅವುಗಳನ್ನು ಮೀರಿ ಬೆಳೆದರು. ಆಡಂಬರ ಪ್ರದರ್ಶನ ಅಬ್ಬರಗಳಿಂದ ದೂರವಾದ ಅವರ ಸರಳ ಸುಂದರ ಬದುಕು, ಸರ್ವೋದಯ ಸಾಧನೆಯ ಸಾಕಾರ ರೂಪವಾಗಿ ಪರಿಣಮಿಸಿತು. ಉನ್ನತವಾದ ಆದರ್ಶಗಳನ್ನು ದೊಡ್ಡದಾಗಿ ಮಾತನಾಡದೆ ಅವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಪರಿಶುದ್ಧ ಪವಿತ್ರ ಜೀವನದ ಸಂಕೇತವಾದರು. ಅವರನ್ನು ಹತ್ತಿರದಿಂದ ಬಲ್ಲವರು ಜೀವನದ ಮೌಲ್ಯಗಳ ಪ್ರಭೆಯನ್ನು ಅವರ ವ್ಯಕ್ತಿತ್ವದ ಸುತ್ತ ಕಾಣುತ್ತಿದ್ದರು, ಅವರ ಸ್ಮರಣೆಯೇ ಅಲ್ಪತೆಯನ್ನುಅಳಿಸಿಹಾಕುತ್ತಿತ್ತು. ಅವರ ನಿಕಟವರ್ತಿಗಳಾದ ಎಂಜಿನಿಯರ್ ಒಬ್ಬರು ಹೇಳುತ್ತಿದ್ದರಂತೆ: "ಭದ್ರಯ್ಯನವರ ಹೆಸರು ನೆನಪಿಗೆ ಬಂದರೆ ಸಾಕು. ಲಂಚಕ್ಕೆ ಮುಂದೊಡ್ಡಿದ ನನ್ನ ಕೈ ನಡುಗಿ ಹಿಂದೆ ಸರಿಯುತ್ತಿತ್ತು" ಎಂಬುದಾಗಿ. ಇದು ತಮ್ಮ ಬಳಿಗೆ ಬಂದವರ ಮೇಲೆ ಅವರು ಬೀರಿದ ಪರಿಶುದ್ಧ ವ್ಯಕ್ತಿತ್ವದ ಪ್ರಭಾವ. ಹೀಗೆ ನಡೆ ನುಡಿಗಳೊಂದಾಗಿ ಬಾಳಿದ ಶ್ರೀ ಭದ್ರಯ್ಯನವರ ಸಾತ್ವಿಕ ಜೀವನದ ಉನ್ನತ ವ್ಯಕ್ತಿತ್ವ, ಕುವೆಂಪು ಅವರು ಹೇಳಿದಂತೆ: "ಅವರ ಕೃತಿಗಳಿಗಿಂತ ಎಷ್ಟೋ ಮಡಿ ದೊಡ್ಡದು."

ಇದರಿಂದ ಅವರ ಕೃತಿಗಳ ಮಹತ್ವವನ್ನು ಕಡೆಗಣಿಸಿದಂತೇನೂ ಅಲ್ಲ. ಆ ಕೃತಿಗಳ ವೈಶಿಷ್ಟ್ಯವನ್ನು ಇಲ್ಲಿ ಗುರುತಿಸಬಹುದು. ಅವರ ಜೀವನದಂತೆಯೇ ಅವರ ಕೃತಿಗಳೂ ಸಹ ಉದಾತ್ತ ಆಶಯದಿಂದ ಕೂಡಿ ನೇರ ಸರಳ ಸಹಜ ಸುಂದರವಾಗಿ ಮೂಡಿ ಬಂದವುಗಳು. ಅವರು ಸುಮಾರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮಹಾತ್ಮಾ ಗಾಂಧಿ, ಗಾಂಧೀ ಪ್ರಮಾಣ ವಚನಗಳು, ಅರ್ಪಣೆ, ಕುಮಾರ ವ್ಯಾಸನ ಕರ್ಣ, ಅಶೋಕ ಚಕ್ರವರ್ತಿ, ಪ್ರಪಂಚದ ಕಥೆ, ಸಾಹಸ ಕಥೆಗಳು, ಯಕ್ಷ ನೌಕೆ, ನಿಮ್ಮ ದೇಹ, ಕ್ಯಾಮರೂನಿನ ಬಣಗಳೊಡನೆ, ಪ್ರಪಂಚ ಪರ್ಯಟನೆ, ಯುನೆಸ್ಕೊ ಸೇವೆಯಲ್ಲಿ—ಹೀಗೆ ಪುಸ್ತಕಗಳ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಈ ಪಟ್ಟಿಯೇ ಸಾಕು ಅವರ ಕೃತಿಗಳ ವಿಪುಲತೆಯನ್ನೂ ವೈವಿಧ್ಯವನ್ನೂ ಸೂಚಿಸುವುದಕ್ಕೆ. ಇವುಗಳ ವಿವರವಾದ ಅಧ್ಯಯನ ಅಥವಾ ವಿಮರ್ಶೆ ಇಲ್ಲಿನ ಉದ್ದೇಶವಲ್ಲ. ಮುಖ್ಯವಾದ ಕೆಲವು ಕೃತಿಗಳ ಸ್ಥೂಲ ಪರಿಚಯವನ್ನು ಮಾತ್ರ ಇಲ್ಲಿ ಉದ್ದೇಶಿಸಲಾಗಿದೆ.

ಗಾಂಧೀಜಿಯವರನ್ನು ಕುರಿತಂತೆ ಶ್ರೀ ಭದ್ರಯ್ಯನವರು ಮೂರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಗಾಂಧೀ ಪ್ರಮಾಣ ವಚನಗಳು' ಮತ್ತು 'ಅರ್ಪಣೆ' ಸಂಪಾದಿತ ಕೃತಿಗಳು. ಗಾಂಧೀ ವಿಚಾರಧಾರೆಯನ್ನು ಅವರ ಮಾತುಗಳಲ್ಲೇ ಕನ್ನಡ ಅನುವಾದದಲ್ಲಿ ಸಂಗ್ರಹಿಸಿರುವ ಕೃತಿ 'ಗಾಂಧೀ ಪ್ರಮಾಣ ವಚನಗಳು'. ವ್ಯಕ್ತಿ ಸಮಾಜ, ರಾಜಕೀಯ, ಅಧ್ಯಾತ್ಮ, ಶಿಕ್ಷಣ ಈ ಎಲ್ಲಾ ವಿಚಾರಗಳನ್ನು ಕುರಿತು ಗಾಂಧೀಜಿಯವರು ವ್ಯಕ್ತವಡಿಸಿದ ಅಭಿಪ್ರಾಯಗಳ ಸಂಗ್ರಹ ಇದು. ಗಾಂಧೀಜಿಯವರ ಸಮಗ್ರ ಚಿಂತನೆಯನ್ನು ಔಚಿತ್ಯಪೂರ್ಣವಾಗಿ ಹಿಡಿದಿಟ್ಟಿರುವ ಜಾಣ್ಮೆ ಇಲ್ಲಿದೆ. 'ಅರ್ಪಣೆ'— ಗಾಂಧೀಜಿಯ ಎಪ್ಪತ್ತೊಂದನೇ ಜನ್ಮದಿನೋತ್ಸವ ಸಂದರ್ಭದಲ್ಲಿ ಅರ್ಪಿಸಿದ ಸಂಪಾದಿತ ಕೃತಿ. ಇನ್ನೊಂದು ಕೃತಿ 'ಗಾಂಧೀಜಿ': ನಭ ಅವರ ಕೃತಿಗಳ ಸಾಲಿನಲ್ಲಿ ಬಹಳ ಮುಖ್ಯವಾದ ಸ್ಥಾನವನ್ನು ಪಡೆಯುವಂತಹುದು. ಗಾಂಧೀಜಿಯವರ ಸಮಗ್ರ ಜೀವನ ಕಥೆಯನ್ನು ಸರಳವಾಗಿ ಇಲ್ಲಿ ನಿರೂಪಿಸಲಾಗಿದೆ. ಲೇಖಕರೇ ಹೇಳುವಂತೆ ವಿದ್ಯಾರ್ಥಿಗಳನ್ನು ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದ್ದಾರೆ. ೧೯೩೯ ರಷ್ಟು ಹಿಂದೆಯೇ ರಚಿತವಾದ ಈ ಗ್ರಂಥ ಪರಿಷ್ಕರಗೊಂಡು ೧೯೬೭ ರಲ್ಲಿ ಪುನರ್ ಮುದ್ರಣವನ್ನು ಕಂಡಿದೆ. ಮಕ್ಕಳ ಮನಸ್ಸನ್ನು ಸೆರೆಹಿಡಿಯುವಂತೆ, ದೊಡ್ಡವರಿಗೂ ಉಪಯುಕ್ತವಾಗುವಂತೆ ಗಾಂಧೀಜಿಯ ಜೀವನದ ಘಟನೆಗಳನ್ನು ಕಾಲಾನುಕ್ರಮವಾಗಿ ಸರಳವಾದ ಶೈಲಿಯಲ್ಲಿ ನಿರೂಪಿಸುವ ಈ ಕೃತಿ, ಗಾಂಧೀಜಿಯವರ ಮಹೋನ್ನತ ಸಾಧನೆಯನ್ನೂ ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ಮನಗಾಣಿಸಿಕೊಡುತ್ತದೆ. ಇಂದಿಗೂ ಮಹತ್ವದ ಕೃತಿಯಾಗಿ ಉಳಿಯುವ ಸತ್ತ್ವವನ್ನು ಪಡೆದಿದೆ.

ಗಾಂಧೀಜಿಯ ಜೀವನ ಚರಿತ್ರೆಯನ್ನು ಬರೆದಿರುವಂತೆ ಅಶೋಕ ಚಕ್ರವರ್ತಿಯ ಮೇಲೆಯೂ ಒಂದು ಗ್ರಂಥವನ್ನು ಇವರು ರಚಿಸಿರುವುದು ಗಮನಾರ್ಹವಾಗಿದೆ. ಪ್ರಪಂಚದ ಕಥೆ ಇವರ ಇನ್ನೊಂದು ವಿಶಿಷ್ಟವಾದ ಗ್ರಂಥ. ಪ್ರಪಂಚದ ಸಂಕ್ಷಿಪ್ತ ಇತಿಹಾಸವನ್ನು ಅತಿ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತೆ ಇಲ್ಲಿ ನಿರೂಪಿಸಿದ್ದಾರೆ. ಇದೇ ಸ್ವರೂಪದ ಇವರ ಇನ್ನೊಂದು ಕೃತಿ "ಆಕಾಶಲೋಕ ಅಥವಾ ಬ್ರಹ್ಮಾಂಡ". ಮೊದಲು ಬರೆದುದನ್ನೇ ವಿಸ್ತರಿಸಿ ಬಹುಮಟ್ಟಿಗೆ ಜನಪ್ರಿಯವಾಗುವಂತೆ ಇದನ್ನು ಪುನರ್ ರಚಿಸಲಾಗಿದೆ. ನಮ್ಮ ಸುತ್ತಲೂ ಇರುವ ಬ್ರಹ್ಮಾಂಡದ ಸ್ವರೂಪವನ್ನು ಆಧುನಿಕ ವಿಜ್ಞಾನದ ಸಂಶೋಧನೆಗಳ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಭೂಮಿ, ಸೂರ್ಯ, ಅದರ ಸುತ್ತ ಇರುವ ಸೌರವ್ಯೂಹ ನಕ್ಷತ್ರ ಲೋಕ ಇವುಗಳ ಪರಿಚಯವನ್ನು ವೈಜ್ಞಾನಿಕವಾಗಿ ಮಾಡಿಕೊಡುವ ರೀತಿ ಅತ್ಯಂತ ಪರಿಣಾಮಕಾರಿಯಾಗಿದೆ. ಇಡೀ ನಿರೂಪಣೆ ಪ್ರಶ್ನೋತ್ತರಗಳ ರೂಪದಲ್ಲಿದ್ದು ಬ್ರಹ್ಮಾಂಡದ ಅನಂತತೆಯ ಅನುಭವವನ್ನು ಪ್ರಶ್ನೆಕಾರನ ಜೊತೆಯಲ್ಲಿ ಓದುಗನೂ ಪಡೆಯುವಂತೆ ಸ್ಪಷ್ಟವಾಗಿ ಮೂಡಿ ಬಂದಿದೆ. ಬ್ರಹ್ಮಾಂಡದ ಈ ಪರಿಭಾವನೆಯಿಂದ ಪಿಂಡಾಂಡದ ಕಡೆಗೂ ನಮ್ಮ ದೃಷ್ಟಿ ತಿರುಗುವಂತಾಗುತ್ತದೆ. ನಭ ಅವರು ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. "ಮಾನವ ತನ್ನ ದೃಷ್ಟಿಗೊಳಗಾದ ಆಕಾಶಲೋಕದ ಸಾಧಾರಣ ವಿಷಯವನ್ನಾದರೂ ಪಡೆಯುವುದು ಅನಿವಾರ್ಯವೋ ಏನೋ? ಆ ಜ್ಞಾನ

ಪಡೆಯುವುದರಿಂದ ಅದರ ಅಂಗವಾಗಿರುವ ನಾವು ನಮ್ಮನ್ನು ಹೆಚ್ಚು ತಿಳಿದುಕೊಳ್ಳುವಂತಾಗುತ್ತದೆ"—ಈ ಆಶಯ ಈ ಕೃತಿಯಲ್ಲಿ ಈಡೇರಿರುವುದನ್ನು ಕಾಣಬಹುದು.

ಅಂತರಂಗದ ಅರಿವನ್ನು ಕಾಣುವುದಕ್ಕೆ ಬಹಿರಂಗದ ವಿವರಗಳನ್ನು ತಿಳಿಯುವುದು ಸಹಾಯಕವೂ ಪೂರಕವೂ ಆಗುತ್ತದೆಂಬ ಈ ದೃಷ್ಟಿ 'ನಿಮ್ಮ ದೇಹ' ಎಂಬ ಅವರ ಕೃತಿಯಲ್ಲಿಯೂ ಗೋಚರವಾಗುತ್ತದೆ. "ದೇಹವಿದು ನೀನಿರುವ ಗುಡಿಯೆಂದು ತಿಳಿದು, ಗುಡಿಸುವೆನು ದಿನ ದಿನವು ದೇವ ದೇವ"–ಎಂಬ ಕುವೆಂಪು ಅವರ ಮಾತುಗಳನ್ನು ಪ್ರಾರಂಭದಲ್ಲಿಯೇ ಉದ್ಧರಿಸಿರುವುದು ಅರ್ಥವತ್ತಾಗಿದೆ. ಈ ದೇಹವನ್ನಾಡಿಸುತ್ತಿರುವ ಚೈತನ್ಯಾತ್ಮಕ ಶಕ್ತಿಯ ಅರಿವಿನಂತೆಯೇ, ಈ ಸ್ಥೂಲದೇಹ ಕೆಲಸ ಮಾಡುತ್ತಿರುವ ಯಾಂತ್ರಿಕ ವ್ಯವಸ್ಥೆಯ ತಂತ್ರಜ್ಞಾನವೂ ಇಲ್ಲಿ ಪರಿಭಾವನೆಯ ವಿಷಯವಾಗುತ್ತದೆ. ಆರೋಗ್ಯವೇ ಭಾಗ್ಯವೆಂಬ ಹಿನ್ನೆಲೆಯಲ್ಲಿ ನಮ್ಮ ದೇಹ ರಚನೆಯ ವಿನ್ಯಾಸಗಳನ್ನು ವಿವರಿಸಿದ್ದಾರೆ. ಮಾಂಸಖಂಡಗಳು, ಆಹಾರ ಪಚನಕ್ರಮ, ಮೆದುಳು, ಹೃದಯ, ಶುದ್ಧೀಕರಣಾಂಗಗಳು, ರಕ್ತ,–ಈ ಮೊದಲಾದುವುಗಳ ವೈಜ್ಞಾನಿಕ ವಿವರಣೆ ಸಾಕಷ್ಟು ದೀರ್ಘವಾಗಿಯೇ ಚಿತ್ರ ಸಹಿತವಾಗಿ ಮೂಡಿ ಬಂದಿದೆ; ತೀರಾ ತಾಂತ್ರಿಕ ವಿವರಗಳಿಗೆ ಹೋಗದಿದ್ದರೂ ಸಾಮಾನ್ಯವಾಗಿ ತಿಳಿಯಬೇಕಾದ ಯಾವ ಪ್ರಮುಖ ಅಂಶವನ್ನೂ ಬಿಡದೆ ತುಂಬಾ ಉಪಯುಕ್ತವಾಗಿದೆ. ಇದರ ಜೊತೆಗೆ ಆರೋಗ್ಯ ಪ್ರಕರಣ, ದೇಹರಕ್ಷಣೆ, ಪ್ರಥಮ ಚಿಕಿತ್ಸೆಗಳ ನಿರೂಪಣೆಯೂ ಸೇರಿ ಆರೋಗ್ಯ ರಕ್ಷಣೆಯ ಒಂದು ಕಿರು ಕೈಪಿಡಿಯಾಗಿ ಪರಿಣಮಿಸಿದೆ. ೧೯೪೪ರಷ್ಟು ಹಿಂದೆಯೇ ಇಂತಹ ಒಂದು ಗ್ರಂಥವನ್ನು ಭದ್ರಯ್ಯನವರು ಬರೆದಿರುವುದು ಗಮನಾರ್ಹವಾಗಿದೆ.

ಭದ್ರಯ್ಯನವರ ಕೃತಿಗಳಲ್ಲಿ ನಾವು ಕಾಣುವುದು ವಸ್ತುವೈವಿಧ್ಯ. ಗಾಂಧೀಜಿಯವರನ್ನು ಕುರಿತ ಕೃತಿಗಳನ್ನು ಕಾಣುವಂತೆಯೇ, ಅಶೋಕ ಚಕ್ರವರ್ತಿಯ ಚರಿತ್ರೆ, ಅಷ್ಟೇ ಇಡೀ ಪ್ರಪಂಚದ ಚರಿತ್ರೆಯೇ ಅವರ ಕೃತಿ ವಿಷಯವಾಗುತ್ತದೆ. ಗಾಂಧೀಜಿಯವರ ವಿಚಾರ ಧಾರೆಯನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವಂತೆಯೇ ಕುಮಾರವ್ಯಾಸನ ಕರ್ಣನನ್ನು ಕವಿಯ ಮಾತುಗಳಿಂದಲೇ ಹಿಡಿದಿಟ್ಟಿರುವ ಅವರ ಸಾಹಿತ್ಯ ಸಂಪಾದನಾ ಕೃತಿಯೂ ಓದುಗರ ಗಮನವನ್ನು ಸೆಳೆಯುತ್ತದೆ. 'ನಿಮ್ಮ ದೇಹ' ಆರೋಗ್ಯ ಬೋಧಿನಿಯಾದರೆ, 'ಯಕ್ಷನೌಕೆ' ಆಕಾಶದಲ್ಲಿ ಹಾರಾಡುವ ತಟ್ಟೆಗಳನ್ನು ಕುರಿತ ಕುತೂಹಲಕರ ವಿವೇಚನೆಯಾಗುತ್ತದೆ. ಈ ಭೂಮಿಯ ರಹಸ್ಯವನ್ನು ಕಂಡುಕೊಳ್ಳುವ ಮಾನವನ ಸಾಹಸವನ್ನು 'ಸಾಹಸ ಕಥೆಗಳು' ಕೃತಿ ರೋಮಾಂಚಕಾರಿಯಾಗಿ ನಿರೂಪಿಸುತ್ತದೆ. ಅದರಲ್ಲೂ ಎವರೆಸ್ಟ್ ಆವರೋಹಣ ಹಿಮಾಲಯದ ದಟ್ಟವಾದ ವಿವರಗಳನ್ನೂ, ಅದನ್ನು ಮೇಲೇರುವ ದಿಟ್ಟ ಸಾಹಸವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಧ್ರುವ ಸಂಶೋಧನೆ ಹೊಸ ಪ್ರಪಂಚದ ಪರಿಚಯವನ್ನು ನಮ್ಮ ಮುಂದೆ ಹರಡುತ್ತದೆ. ಇದರ ಜೊತೆ ಹೊಸದಾಗಿ ಅಕ್ಷರವನ್ನು ಕಲಿತ ವಯಸ್ಕರಿಗಾಗಿಯೂ ಅವರು ಕೆಲವು ಕೃತಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ "ನಡೆದು ನೋಡು ಕೊಡಗಿನ ಬೆಡಗ" ಮತ್ತು "ಧರಣಿ ಮಂಡಲ ಮಧ್ಯದೊಳಗೆ" ಇವುಗಳನ್ನು ಹೆಸರಿಸಬಹುದು. ಮೊದಲನೆಯದು ಕೊಡಗಿನ ಪ್ರಾಕೃತಿಕ ಸೌಂದರ್ಯದ ಜೊತೆಗೆ ಇಡೀ ಕೊಡಗಿನ ಇತಿಹಾಸವನ್ನು ಅತಿ

ಸರಳವಾಗಿ ಸಂಕ್ಷೇಪವಾಗಿ ಚಿತ್ರಿಸುತ್ತದೆ. ಕೊಡಗಿನ ಕೊನೆಯ ಅರಸು ಚಿಕ್ಕವೀರ ರಾಜೇಂದ್ರ ಮತ್ತು ಆತನ ಮಗಳ ಕೊನೆಯ ಕಥೆ ಕರುಣಾಜನಕವಾಗಿ ಮೂಡಿ ಬಂದಿದೆ. ಪ್ರಸಿದ್ಧವಾದ ಗೋವಿನಕಥೆಯ ಪರಿಣಾಮಕಾರಿಯಾದ ಗದ್ಯ ನಿರೂಪಣೆ "ಧರಣಿ ಮಂಡಲ ಮಧ್ಯದೊಳಗೆ" ಕಥೆ ಪರಿಚಿತವಾದರೂ ಅತಿ ಕುತೂಹಲದಿಂದ ಓದಿಸಿ ಕೊಳ್ಳುತ್ತದೆ.

ಇನ್ನು ಅವರ ಪ್ರವಾಸ ಸಾಹಿತ್ಯವನ್ನು ಕುರಿತು ಕೆಲವು ಮಾತುಗಳನ್ನು ಹೇಳ ಬಹುದು. "ಕ್ಯಾಮರೂನಿನ ಬಣಗಳೊಡನೆ ಮತ್ತು ಅರಬ್ ದೇಶಗಳಲ್ಲಿ", "ಪ್ರಪಂಚ ಪರ್ಯಟನೆ" ಮತ್ತು "ಯುನೆಸ್ಕೋ ಸೇವೆಯಲ್ಲಿ"—ಈ ಮೂರು ಇವರ ಪ್ರವಾಸ ಸಾಹಿತ್ಯ ಕೃತಿಗಳು. ನಮ್ಮಲ್ಲಿ ಪ್ರವಾಸ ಸಾಹಿತ್ಯ ಸಾಕಷ್ಟು ಬಂದಿದೆ. ಅದರಲ್ಲಿ ಪಾಶ್ಚಾತ್ಯ ದೇಶಗಳನ್ನು ಕಂಡ ಪ್ರವಾಸ ಕಥನವೂ ಕಡಮೆಯೇನಿಲ್ಲ. ಇಂತಹ ಕೃತಿಗಳ ಸಮುದಾಯದಲ್ಲಿ ಶ್ರೀ ಭದ್ರಯ್ಯನವರ ಈ ಕೃತಿಗಳು ವಿಶಿಷ್ಟ ಸ್ಥಾನವನ್ನು ಪಡೆಯು ತ್ತವೆ. ಕುವೆಂಪು ಅವರು ಹೇಳುವಂತೆ ಇವರ ಈ ಪ್ರವಾಸ ಕೃತಿಗಳಲ್ಲಿ ಒಂದೊಂದೂ "ಅದ್ಭುತ ಎಂಬ ವಿಶೇಷಣಕ್ಕೆ ಯೋಗ್ಯವಾಗಬಲ್ಲುದು." ಇದಕ್ಕೆ ಮುಖ್ಯ ಕಾರಣ ಇವರ ಜೀವನದೃಷ್ಟಿ ಮತ್ತು ಇವರು ಪ್ರವಾಸವನ್ನು ಕೈಕೊಂಡ ಉದ್ದೇಶ.

ಸಾಮಾನ್ಯವಾಗಿ ಇದುವರೆಗಿನ ನಮ್ಮ ಪ್ರವಾಸ ಸಾಹಿತ್ಯದಲ್ಲಿ ಬಹುಪಾಲು, ಅಳಿಯಂದಿರ ಅಥವಾ ಮಕ್ಕಳ ಮನೆಯಲ್ಲಿ ಕುಳಿತು, ಆಯಾ ದೇಶದ ಯಾವುದೋ ಒಂದು ಸ್ಥಳವನ್ನು ಕುತೂಹಲಕ್ಕಾಗಿ ದೂರ ನಿಂತು ನೋಡಿದುದರ ಒಂದು ವರದಿ. ಇದರ ಜೊತೆಯಲ್ಲಿ ಅಧ್ಯಯನಕ್ಕಾಗಿ ಹೋದವರ ಅಥವಾ ವಿಶೇಷ ಆಹ್ವಾನಿತರಾಗಿ ಪ್ರವಾಸವನ್ನು ಕೈಕೊಂಡವರ ಅನುಭವದ ನಿರೂಪಣೆಗಳೂ ಇವೆ. ಆದರೆ ಅವೆಲ್ಲಾ ಆ ಸಮಾಜದಿಂದ ಹೊರಗೆ ನಿಂತ ಪ್ರೇಕ್ಷಕರ ಅನಿಸಿಕೆಗಳು. ಶ್ರೀ ನಭ ಅವರ ಈ ಕೃತಿಗಳ ಸ್ವರೂಪವೇ ಬೇರೆ. ಇವರ ಪ್ರವಾಸ ಹೊರದೇಶಗಳನ್ನು ನೋಡುವುದಕ್ಕೆ ಹೋದ ವಿಹಾರವಲ್ಲ. ವಿಹಾರಕ್ಕೆ ಹೋಗುವ ಬಹಳಷ್ಟು ಜನ ಅಮೆರಿಕಾಕ್ಕೆ ಹೋಗು ತ್ತಾರೆ. ಅದನ್ನು ಸ್ವರ್ಗವೆಂದು ಹೊಗಳುತ್ತಾರೆ. ಕನ್ನಡದಲ್ಲಿ ಅಮೆರಿಕಾ ಕುರಿತ ಪ್ರವಾಸ ಕಥನಗಳೇ ಸಾಕಷ್ಟಿವೆ. ಉಳಿದ ದೇಶಗಳನ್ನು ಕುರಿತವು ಅಷ್ಟಿಲ್ಲ. ಅದರಲ್ಲೂ ಆಫ್ರಿಕಾ ಖಂಡದ ಕ್ಯಾಮರೂನಿನಂತಹ ದೇಶಗಳಲ್ಲಿ ಕಂಡ ಅನುಭವದ ಕಥನ ಇಲ್ಲವೇ ಇಲ್ಲವೆಂದು ಹೇಳಬಹುದು. ಆ ದೇಶಗಳಿಗೂ ಸಹ ಶ್ರೀ ಭದ್ರಯ್ಯನವರು ನೋಡುವುದಕ್ಕೆಂದು ಹೋದವರಲ್ಲ; ಗಂಭೀರವಾದ ಕಾರ್ಯವೊಂದನ್ನು ಮಾಡುವುದಕ್ಕಾಗಿ ಹೋದವರು; ವಯಸ್ಕರ ಶಿಕ್ಷಣದ ತಮ್ಮ ಪರಿಣತಿಯ ಫಲವನ್ನು ಆ ದೇಶಗಳಿಗೆ ನೀಡುವುದಕ್ಕಾಗಿ ಹೋದವರು. ಜನತಾ ಶಿಕ್ಷಣಕ್ಕಾಗಿ ಹೋದ ಅವರು ನೇರವಾಗಿ ಅಲ್ಲಿನ ಜನಸಾಮಾನ್ಯ ರೊಡನೆ ಬೆರೆತು, ಅವರ ಜೀವನಾಡಿಯ ಮಿಡಿತವನ್ನು ಕಂಡರು. ಆ ತಮ್ಮ ಅನುಭವ ವನ್ನು ಈ ಮೂರು ಕೃತಿಗಳಲ್ಲಿಯೂ ಪಡಿಮೂಡಿಸಿದ್ದಾರೆ. ಅಲ್ಲಿನ ಸಮಾಜದೊಡನೆ ಬೆರೆತು, ಅವರ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ, ಅಪಾಯಕ್ಕೆ ಎದೆಯೊಡ್ಡಿ ಆ ಕಾರ್ಯತತ್ಪರತೆಯ ಅಂಗವಾಗಿ ಪಡೆದ ಅನುಭವಗಳ ಕಥನವನ್ನು ಕನ್ನಡದಲ್ಲಿ ಬಹುಶಃ ಇನ್ನಾರೂ ಕೊಟ್ಟಿಲ್ಲ. ಆ ದೃಷ್ಟಿಯಿಂದ ಈ ಕೃತಿಗಳು ಅದ್ವಿತೀಯವಾದುವು.

ಈ ಮಾತು ಈ ಮೂರು ಕೃತಿಗಳಲ್ಲಿ ಮೊದಲನೆಯದಾದ "ಕ್ಯಾಮರೂನಿನ ಬಣಗಳೊಡನೆ ಮತ್ತು ಅರಬ್ ದೇಶಗಳಲ್ಲಿ"—ಇದಕ್ಕೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಅದರಲ್ಲೂ ಕ್ಯಾಮರೂನಿನ ಬಣಗಳೊಡನೆ ಕಳೆದ ಮೊದಲ ಭಾಗ ಅದ್ಭುತವಾಗಿದೆ. ಕ್ಯಾಮರೂನ್ಸ್—ಎಂಬುದು ಪಶ್ಚಿಮ ಆಫ್ರಿಕಾದ ಒಂದು ರಾಜ್ಯ. 'ಕ್ಯಾಮರೂನ್' ಎಂಬುದು ಒಂದು ಅಗ್ನಿ ಪರ್ವತದ ಹೆಸರು. ಅದರ ಹೆಸರೇ ಆ ದೇಶಕ್ಕೂ ಮತ್ತು ಜನಾಂಗಕ್ಕೂ ಬಂದಿದೆ. ಕತ್ತಲೆಯ ಖಂಡವೆಂದೇ ಕರೆಸಿಕೊಂಡ ಆಫ್ರಿಕಾದಲ್ಲಿ ಇದು ಇನ್ನೂ ಹಿಂದುಳಿದ ದೇಶ. ಇಲ್ಲಿ ವಯಸ್ಕರ ಶಿಕ್ಷಣದ ಸ್ವರೂಪವನ್ನರಿಯಲು ಆರು ವಾರಗಳ ಕಾಲುನಡಿಗೆಯ ಪ್ರವಾಸವನ್ನು ಶ್ರೀ ಭದ್ರಯ್ಯನವರು ಕೈಕೊಳ್ಳಬೇಕಾಗಿ ಬರುತ್ತದೆ. ಹದಿಮೂರು ಜನರ ತಂಡದೊಡನೆ ದಟ್ಟವಾದ ಆ ಕಾಡು ಪ್ರದೇಶದಲ್ಲಿ ನಡೆದ ಈ ಪಾದಯಾತ್ರೆಯನ್ನು "ವನವಾಸ" ಎಂದು ಅರ್ಥವತ್ತಾಗಿ ಕರೆದಿದ್ದಾರೆ. ಆಫ್ರಿಕಾದ ಯಾವುದೋ ಒಂದು ಮೂಲೆಗೆ ನಮ್ಮನ್ನವರು ಕರೆದೊಯ್ದು, ನಮಗೆ ಅಪರಿಚಿತವಾಗಿದ್ದ ಹೊಸ ಪ್ರಪಂಚವನ್ನು ಪರಿಚಯಿಸುತ್ತಾರೆ. ನಾವೂ ಅವರ ಜೊತೆಯಲ್ಲಿ ನಡೆಯುತ್ತಾ ಕುತೂಹಲದಿಂದ ಆ ಅನುಭವಗಳಲ್ಲಿ ಪಾಲ್ಗೊಳ್ಳುತ್ತೇವೆ. ಅಪಾಯಕಾರಿಯಾದ ಭಯಂಕರ ಅನುಭವಗಳ ಜೊತೆಗೆ, ಆ ನಾಡಿನ ಜನಜೀವನದ ವೈಚಿತ್ರ್ಯಗಳನ್ನು ಕಂಡು ಆ ಸ್ವಾರಸ್ಯವನ್ನು ಸವಿಯುತ್ತೇವೆ.

ಕ್ಯಾಮರೂನ್ಸ್‌ನಲ್ಲಿ ಹಳ್ಳಿಗಳಿಗೆ ಹೋಗಲು ದಾರಿಗಳೇ ಇರಲಿಲ್ಲ. ವಾಸ್ತವವಾಗಿ ನಭ ಅವರು ತಮ್ಮ ಸಂಗಡಿಗರೊಡನೆ ಕಾಡು ಕಡಿದು ದಾರಿ ಮಾಡಿಕೊಂಡು ಮುಂದೆ ನಡೆಯಬೇಕಾಗಿತ್ತು. ಆ ದುರ್ಗಮ ಪ್ರದೇಶದಲ್ಲಿ ಮುನ್ನಡೆಯುವಾಗ ಉಂಟಾದ ಕೆಲವು ಅನುಭವಗಳು ಎದೆ ನಡುಗಿಸುವಂತಹವು. ಒಂದೆರಡು ಸಲ ಅವರು ಪ್ರಾಣಾಪಾಯಕ್ಕೂ ಗುರಿಯಾಗುವ ಘಟನೆಗಳು ಸಂಭವಿಸಿದುವು. ಒಮ್ಮೆ ಅವರು ನದಿಯನ್ನು ದಾಟುವಾಗ ಕಾಲು ಜಾರಿ ಪ್ರವಾಹದಲ್ಲಿ ತೇಲಿಹೋಗುತ್ತಿದ್ದರು; ಸಂಗಡಿಗರು ಎಸೆದ ಹಂಬನ್ನು ಹಿಡಿದು ಪಾರಾದರು. ಇನ್ನೊಮ್ಮೆ ಅವರು ತಂಗಿದ್ದ ಮನೆಯ ಮೇಲೆ ಮರದ ಕೊಂಬೆಯೊಂದು ಮುರಿದು ಬಿತ್ತು; ಇವರು ಮಲಗಿದ್ದ ಕೋಣೆ ಮಾತ್ರ ಸುರಕ್ಷಿವಾಗಿದ್ದು ಮನೆಯ ಉಳಿದ ಭಾಗವೆಲ್ಲಾ ನಾಶವಾಯಿತು. ಕಾಡಿನಲ್ಲಿ ಇವರು ನಡೆಯುತ್ತಿರುವಾಗ ಮರದ ಮೇಲಿಂದ ಹೆಬ್ಬಾವೊಂದು ಇವರ ಮುಂದೆ ನಡೆಯುತ್ತಿದ್ದ ಸಂಗಾತಿಯೊಬ್ಬನ ಮೇಲೆ ಬಿದ್ದ ಭೀಕರ ಸನ್ನಿವೇಶವೂ ಬರುತ್ತದೆ—ಈ ಮೊದಲಾದ ಘಟನೆಗಳ ನಿರೂಪಣೆ ರೋಮಾಂಚನಕಾರಿಯಾದ ಅನುಭವಗಳನ್ನುಂಟು ಮಾಡುತ್ತದೆ.

ಈ ಅಪಾಯಗಳನ್ನೆಲ್ಲಾ ಎದುರಿಸಿ ಅಲ್ಲಿಯ ಜನರ ಮನವನ್ನು ಗೆದ್ದುದು, ಅವರ ಕಷ್ಟಸುಖಗಳೊಡನೆ ಬೆರೆತು ಅವರ ವಿಶ್ವಾಸವನ್ನು ಗಳಿಸಿದ್ದು, ಅವರ ತೋರಿಕೆಯ ಅನಾಗರಿಕತೆಯ ಹಿಂದೆ ಮಾನವೀಯತೆಯನ್ನು ಗುರುತಿಸಿದುದು ಬಹಳ ದೊಡ್ಡ ಸಾಧನೆ. ಆ ಜನರ ಬಗೆಗಿರುವ ಅನೇಕ ತಪ್ಪು ಕಲ್ಪನೆಗಳನ್ನು ನಭ ಅವರು ತೊಡೆದು ಹಾಕಿದ್ದಾರೆ. ಅವರ ಕೆಲವು ರೀತಿ ನೀತಿಗಳು, ನಡೆನುಡಿಗಳು ವಿಲಕ್ಷಣವಾಗಿರಬಹುದು. ಆದರೆ ಅವರ ಸರಳತೆ, ಪ್ರಾಮಾಣಿಕತೆ, ಅತಿಥಿಸತ್ಕಾರ—ಈ ಮೊದಲಾದ ಗುಣಗಳನ್ನು ನಭ ಅವರು ಗುರುತಿಸಿದ್ದಾರೆ. ತಮ್ಮ ಅನುಭವದಿಂದ ಅದನ್ನು ಬಿಡಿಸಿ ತೋರಿಸಿದ್ದಾರೆ.

ಅವರ ಎರಡನೆಯ ಪ್ರವಾಸ ಕೃತಿ "ಪ್ರಪಂಚ ಪರ್ಯಟನೆ." ಇದರಲ್ಲಿ ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಡೆನ್ಮಾರ್ಕ್, ಸ್ವೀಡನ್, ನಾರ್ವೆ, ಜರ್ಮನಿ, ಹಾಲೆಂಡ್, ಗ್ರೀಸ್, ರೋಂ, ಬ್ರಿಟನ್ ಮತ್ತು ಜಪಾನ್—ಈ ಹನ್ನೊಂದು ದೇಶಗಳ ಪ್ರವಾಸ ಕಥನ ಬಂದಿದೆ. ಈ ದೇಶಗಳ ಪ್ರವಾಸವನ್ನು ಕೈಕೊಳ್ಳುವ ಮೊದಲು ಶ್ರೀ ಭದ್ರಯ್ಯ ನವರು ಅದಕ್ಕೆ ಅಗತ್ಯವಾದ ಪೂರ್ವಸಿದ್ಧತೆಯನ್ನು ತಪ್ಪದೆ ಮಾಡಿಕೊಳ್ಳುತ್ತಾರೆ. ಆಯಾ ದೇಶದ ಭೌಗೋಳಿಕ ರಚನೆ, ಇತಿಹಾಸ, ಭಾಷೆ, ಸಾಮಾಜಿಕ ಮತ್ತು ರಾಜ ಕೀಯ ಪರಿಸ್ಥಿತಿ—ಇವುಗಳ ಅಧ್ಯಯನವನ್ನು ಮಾಡುತ್ತಾರೆ. ಪ್ರವಾಸ ಕಥನವನ್ನು ಪ್ರಾರಂಭಿಸುವುದಕ್ಕೆ ಮೊದಲು ಈ ಹಿನ್ನೆಲೆಯನ್ನು ಕೊಟ್ಟು ಅನಂತರ ತಮ್ಮ ಅನು ಭವದ ನಿರೂಪಣೆಗೆ ತೊಡಗುತ್ತಾರೆ. ಇದರಿಂದ ಈ ಪ್ರವಾಸ ಕಥನ, ಇತಿಹಾಸದ ಅನಾವರಣವನ್ನೂ ಮಾಡುತ್ತಾ ಆಯಾ ದೇಶದ ಇಂದಿನ ವಾಸ್ತವಿಕ ಚಿತ್ರ ಮೂಡಿ ಬರಲು ಸಹಾಯಕವಾಗುತ್ತದೆ. ನಿರೂಪಣೆಯಲ್ಲಿ ಅಲ್ಲಲ್ಲಿ ನವುರಾದ ಹಾಸ್ಯವೂ ಮಿಂಚುತ್ತಾ ಓದುಗನನ್ನು ತನ್ನೆಡೆ ಸೆಳೆದುಕೊಳ್ಳುತ್ತದೆ; ಆತ್ಮೀಯತೆಯ ಪರಿಸರವನ್ನು ನಿರ್ಮಿಸುತ್ತದೆ. ಗ್ರಂಥವನ್ನು ಓದಿ ಮುಗಿಸಿದಾಗ ನಾವೇ ಪ್ರಪಂಚ ಪರ್ಯಟನೆಯನ್ನು ಕೈಕೊಂಡ ಅನುಭವ ನಮಗಾಗುತ್ತದೆ.

ಇನ್ನು ಮೂರನೆಯ ಕೃತಿ "ಯುನೆಸ್ಕೋ ಸೇವೆಯಲ್ಲಿ". ಇಂಡೋನೇಷ್ಯ, ಇರಾನ್, ಕೇನ್ಯಾಗಳಲ್ಲಿ ಅವರು ಮಾಡಿದ ಕೆಲಸಗಳ ಮತ್ತು ಆ ನಿಮಿತ್ತ ಮಾಡಿದ ಪ್ರವಾಸಗಳ ಕಥನ ಇಲ್ಲಿ ಬರುತ್ತದೆ. ಹಿಂದೆ ಹೇಳಿದಂತೆ ಇದೂ ಸಹ ಬರಿಯ ಪ್ರವಾಸದ ವರದಿಯಾಗುವುದಿಲ್ಲ. ಆ ದೇಶಗಳ ಇತಿಹಾಸ, ಸಂಸ್ಕೃತಿ, ಭೌಗೋಳಿಕ ಪರಿಸರ, ಜನ ಜೀವನದ ಸಮಸ್ಯೆಗಳು, ರಾಜಕೀಯ ಪ್ರಗತಿ ಈ ಮೊದಲಾದುವುಗಳ ಸ್ವಾರಸ್ಯಕರ ನಿರೂಪಣೆಯೂ ಆಗಿ ಪ್ರವಾಸ ಕಥನಕ್ಕೆ ಒಂದು ಪೂರ್ಣತೆಯನ್ನು ತಂದುಕೊಡುತ್ತದೆ. ಈ ದೇಶಗಳಲ್ಲಿ ಅವರು ಪಡೆದ ವೈವಿಧ್ಯಮಯವಾದ ಅನುಭವಗಳ ರಸವತ್ತಾದ ಅಭಿ ವ್ಯಕ್ತಿ ಕಾವ್ಯಾತ್ಮಕ ಗುಣವನ್ನು ಪಡೆದು ಇಲ್ಲಿ ಹೊರಹೊಮ್ಮಿದೆ. ಘಟನೆಗಳೂ ಪಾತ್ರ ಗಳೂ ಕಾದಂಬರಿಯಂತೆ ಮಿಂಚುತ್ತವೆ. ವರ್ಣನೆ, ಅದು ತಾವಿಳಿದುಕೊಂಡ ಮನೆಯ ಸುತ್ತಣ ಪರಿಸರವೇ ಆಗಲಿ, ಇಂಡೊನೇಷ್ಯಾದ ಅಗ್ನಿಪರ್ವತಗಳೇ ಆಗಲಿ, ಕಣ್ಣಿಗೆ ಕಟ್ಟುವಂತೆ ಸಹಜವಾಗಿ ಚಿತ್ರವನ್ನಾಗಿ ರೂಪು ತಳೆಯುತ್ತದೆ. ನೇರವಾದ ಸರಳವಾದ ಮಾತುಗಳಲ್ಲಿ ಎಂತಹ ಗಾಢವಾದ ಸೂಕ್ಷ್ಮವಾದ ಅನುಭವಗಳನ್ನಾದರೂ ಅಭಿವ್ಯಕ್ತ ಗೊಳಿಸುವ ಇವರ ಶೈಲಿ ಪರಿಣಾಮಕಾರಿಯಾದದ್ದು.

ಇವರ ಪ್ರವಾಸ ಕಥನದ ಈ ಮೂರು ಕೃತಿಗಳಿಗೂ ಈ ಮಾತು ಅನ್ವಯಿಸುತ್ತದೆ. ಅವರ ವ್ಯಕ್ತಿತ್ವದಂತೆ ಅವರ ಶೈಲಿಯೂ ನಿರಾಡಂಬರವಾದುದು. ದಟ್ಟವಾದ ಅನುಭವದ ಪ್ರಾಮಾಣಿಕ ನಿರೂಪಣೆಯಿಂದ ಅದಕ್ಕೊಂದು ಸಹಜವಾದ ಸೌಂದರ್ಯ ಲಭಿಸುತ್ತದೆ. ಬೇರೆಬೇರೆ ದೇಶಗಳ ವಿವಿಧ ಸಾಂಸ್ಕೃತಿಕ ಮೌಲ್ಯಗಳ ಸಂಕೀರ್ಣ ಚಿತ್ರವನ್ನು ಸಹ ಅತಿ ಸರಳವಾದ ನೈಜವಾದ ನಿರೂಪಣೆ ಅತ್ಯಂತ ಸಮರ್ಥವಾಗಿ ಸಾಧಿಸುತ್ತದೆ. ಅದರ ಹಿಂದೆ ಅವರ ಆಳವಾದ ಅಧ್ಯಯನ ಎದ್ದು ಕಾಣುತ್ತದೆ. ಆಯಾ ದೇಶಗಳ ವಿಶಿಷ್ಟ ಅನುಭವದ ಸ್ಪಷ್ಟ ಚಿತ್ರ ಓದುಗರ ಮನಸ್ಸಿನ ಮುಂದೆ ಮೂಡುವಂತೆ ಕೆಲವೇ ಮಾತುಗಳಲ್ಲಿ ಅದು

ಹೊರಹೊಮ್ಮುತ್ತದೆ. ಆ ಸಾಂಸ್ಕೃತಿಕ ಪರಿಸರದಲ್ಲಿ ನಾವೂ ಬೆರತು ಹೋಗುತ್ತೇವೆ. ಆದುದರಿಂದ ಇದು ಕೇವಲ ವರದಿಯಾಗದೆ ಆಯಾ ದೇಶಗಳ ಸಾಂಸ್ಕೃತಿಕ ಅಧ್ಯಯನವಾಗುತ್ತದೆ. ಆಫ್ರಿಕಾದ ಕ್ಯಾಮರೂನ್, ಕೇನ್ಯಾ ದೇಶಗಳಲ್ಲದೆ, ಅರಬ್ ದೇಶಗಳು ಫ್ರಾನ್ಸ್, ಸ್ವಿಡ್ಜರ್ಲೆಂಡ್, ಜರ್ಮನಿ, ಗ್ರೀಸ್ ಮೊದಲಾದ ಅನೇಕ ಐರೋಪ್ಯ ದೇಶಗಳು, ಇಂಡೊನೇಷ್ಯ, ಇರಾನ್—ಈ ಎಲ್ಲ ರಾಷ್ಟ್ರಗಳನ್ನೂ ಒಳಗೊಂಡ ಒಂದು ಪ್ರಪಂಚ ಪರ್ಯಟನೆ ಈ ಮೂರು ಕೃತಿಗಳಿಂದ ನಮಗೆ ಲಭ್ಯವಾಗುತ್ತದೆ.

ಇದು ಕೇವಲ ಪ್ರಪಂಚ ಪರ್ಯಟನೆಯೂ ಅಲ್ಲ. ಇಲ್ಲಿ ಉದ್ದಕ್ಕೂ ಎದ್ದು ಕಾಣುವ ಗುಣ ವಿಶ್ವಮಾನವತಾ ಪ್ರಜ್ಞೆ. ದೇಶ ಅಪರಿಚಿತವಾದರೂ ಅದರ ಹಿಂದೆ ಮಾನವೀಯ ಭಾವನೆಗಳು ಮಿಡಿಯುವುದನ್ನು ಕಾಣುತ್ತಾರೆ, ಅವರೊಡನೆ ಬೆರೆತು ಒಂದಾಗುತ್ತಾರೆ; ಅವರಿಗೆ ಮಾರ್ಗದರ್ಶಕರಾಗುತ್ತಾರೆ. ಯಾವುದೋ ಹೆಂಗಸಿನ ವ್ಯಾಜ್ಯ, ಗಂಡ ಹೆಂಡಿರ ಜಗಳ, ತಂದೆ ಮಗಳ ಮನಸ್ತಾಪ—ಇವೆಲ್ಲಾ ಇವರ ಮುಂದೆ ತೀರ್ಮಾನವಾಗುತ್ತವೆ. ಇಂತಹ ಘಟನೆಗಳಿಂದ ಮಾನವೀಯತೆಯ ಮಾಂತ್ರಿಕ ಸ್ಪರ್ಶವಾಗುತ್ತದೆ, ಅದು ಯಾಂತ್ರಿಕವಾಗದೆ ಅಲ್ಲಿನ ಜನರೊಡನೆ ನಮ್ಮನ್ನು ಬೆಸೆಯುತ್ತದೆ. ಅದರಿಂದ ಅವರ ಜೀವನವನ್ನು ಹೊರಗಡೆ ನಿಂತು ನೋಡದೆ ಒಳಹೊಕ್ಕು ಅವರೊಡನೆ ಬೆರೆಯುವುದು ಸಾಧ್ಯವಾಗುತ್ತದೆ. ಅಂತಹ ಅನುಭವದ ನಿರೂಪಣೆ ಈ ಕೃತಿಗಳಲ್ಲಿರುವುದರಿಂದ ಇವುಗಳ ಸ್ವರೂಪವೇ ಬೇರೆಯಾಗಿದೆ.

ಇನ್ನೊಂದು ಬಹಳ ಮುಖ್ಯವಾದ ಮಾತನ್ನು ಇಲ್ಲಿ ನಾವು ಗಮನಿಸಬೇಕು. ಸಾಮಾನ್ಯವಾಗಿ ನಮ್ಮ ಪ್ರವಾಸ ಸಾಹಿತ್ಯದ ಒಂದು ಸ್ಥಾಯಿಯಾದ ಧ್ವನಿಯೆಂದರೆ ತಾವು ಹೋದ ದೇಶಗಳನ್ನು ಹೊಗಳಿ, ನಮ್ಮ ದೇಶವನ್ನು ತೆಗಳಿ, ಕೀಳುಗಳೆದುಕೊಳ್ಳುವಿಕೆ. ಆ ದೇಶ ಅಮೆರಿಕಾ ಆದರಂತೂ ತೀರಿಯೇ ಹೋಯಿತು, ಸ್ವರ್ಗವೇ ಅಲ್ಲಿ ಕಾಣುತ್ತದೆ. ಆದರೆ ನಭ ಅವರ ಬರಹಗಳಲ್ಲಿ ಎಲ್ಲಿಯೂ ಆ ಕೀಳರಿಮೆ ಅಪ್ಪಿತಪ್ಪಿ ಕೂಡಾ ಕಾಣಸಿಗುವುದಿಲ್ಲ. ಮಾನವಸ್ವಭಾವದ ಒಳಿತು ಕೆಡುಕುಗಳು ಎಲ್ಲ ಕಡೆಗಳಲ್ಲಿಯೂ ಇವೆ. ಇದನ್ನು ಕಾಣಬಲ್ಲ ಶ್ರೀ ಭದ್ರಯ್ಯನವರು ಇಲ್ಲಿ ನೂರು ದೌರ್ಬಲ್ಯಗಳ ನಡುವೆಯೂ ಅದನ್ನು ಮೀರಿದ ಮೌಲಗಳನ್ನು ಕಾಣುವ ಆತ್ಮವಿಶ್ವಾಸವನ್ನು ಪ್ರಕಟಿಸಿದ್ದಾರೆ. ಹೊರದೇಶಗಳವರು ಭಾರತದ ಬಗೆಗೆ ಅಜ್ಞಾನವನ್ನು ವ್ಯಕ್ತಪಡಿಸಿದಾಗಲೆಲ್ಲಾ ಅದನ್ನು ತಿದ್ದಿದ್ದಾರೆ, ನಾಡು ನುಡಿಗಳ ಬಗೆಗೆ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಪ್ರಪಂಚ ಪ್ರವಾಸವನ್ನು ಕೈಗೊಂಡ ಅರಬ್ ಸಮಿತಿಯ ಸದಸ್ಯರೊಡನೆ ತಾವೂ ಇಲ್ಲಿಗೆ ಬಂದಾಗ, ವಯಸ್ಕರ ಶಿಕ್ಷಣ ರಂಗದಲ್ಲಿ ಕರ್ನಾಟಕದ ಸಾಧನೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು "ಭದ್ರಯ್ಯನವರು ನಮ್ಮೊಡನಿರುವುದು ನಮ್ಮ ಭಾಗ್ಯ!" ಎಂಬ ಉದ್ಗಾರ ಅವರಿಂದ ಬರುವಂತೆ ಮಾಡಿದ್ದಾರೆ. ಇಲ್ಲಿ ನಾವು ಕಾಣುವುದು ಪ್ರಬುದ್ಧ ಮನಸ್ಸಿನ ಸ್ವಾಭಿಮಾನ ಮತ್ತು ಸ್ವವಿಮರ್ಶೆಯ ಸಮತೋಲನದ ಚಿಂತನ ಶೀಲತೆಯನ್ನು.

ಒಟ್ಟಿನಲ್ಲಿ ಈ ಮೂರು ಪ್ರವಾಸ ಕೃತಿಗಳು ಶ್ರೀ ನ. ಭದ್ರಯ್ಯನವರ ಉದಾತ್ತ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಗಳಾಗಿವೆ. ಅವರ ಸರಳವಾದ ನಡೆ ನುಡಿಗಳು, ಉದಾತ್ತವಾದ ಆಚಾರ ವಿಚಾರಗಳು ಜನ ಜೀವನವನ್ನು ಕಾಣುವ ಸಮಗ್ರ ದೃಷ್ಟಿ ಧೋರಣೆಗಳು,

ಇಲ್ಲಿನ ಪುಟಪುಟಗಳಲ್ಲಿಯೂ ಪ್ರತಿಬಿಂಬಿಸಿವೆ. ಮಾನವ ಸ್ವಭಾವದಲ್ಲಿ ಒಳಿತು ಕೆಡುಕು ಗಳೆರಡೂ ಇವೆ. ಕೆಡುಕನ್ನು ಕೆದುಕುವುದೇ ಕೆಲವರ ಸ್ವಭಾವವಾದರೆ ಒಳಿತನ್ನು ಗುರುತಿಸಿ ಅದನ್ನು ಪುರಸ್ಕರಿಸುವುದು ರಚನಾತ್ಮಕ ಕಾರ್ಯಕರ್ತರ ಬಗೆ. ಶ್ರೀ ಭದ್ರಯ್ಯನವರಿಗೆ ಎಲ್ಲರೂ ಒಳ್ಳೆಯವರಾಗಿಯೇ ಕಾಣುತ್ತಾರೆ. ಅದರ ಅರ್ಥ ಅವರು ಕೆಟ್ಟುದನ್ನೂ ಒಪ್ಪಿಕೊಳ್ಳುವ ಅಥವಾ ಅದನ್ನು ಮರೆಮಾಚುವ ಪಲಾಯನ ದೃಷ್ಟಿ ಯವರು ಎಂದಲ್ಲ. ಕೆಟ್ಟುದರೊಡನೆ ಹೊಂದಾಣಿಕೆಯಿಲ್ಲದ ನೈತಿಕ ನಿಷ್ಠೆ ಅವರಿಗಿದೆ. ಇಲ್ಲಿನ ಅನೇಕ ಸನ್ನಿವೇಶಗಳಲ್ಲಿ ಅದನ್ನು ಕಾಣುತ್ತೇವೆ. ಆದರೆ ಅವನ್ನೆ ದೊಡ್ಡದು ಮಾಡದೆ, ಒಳಿತನ್ನು ಪುರಸ್ಕರಿಸಿ, ಕೆಡುಕನ್ನು ಆ ಮೂಲಕ ಪರಿವರ್ತಿಸುವ ಸತ್ತ್ವಶಕ್ತಿ ಇಲ್ಲಿದೆ. ಆದ್ದರಿಂದಲೇ ಅನೇಕ ದೌರ್ಬಲ್ಯಗಳನ್ನು ವಿರಸ ವಿಕೃತಿಗಳನ್ನೂ ಸರಸವಾಗಿಯೇ ತಿದ್ದಿ ನೇರಗೊಳಿಸಿದ ಸನ್ನಿವೇಶಗಳು ಇಲ್ಲಿ ಸ್ಮರಣೀಯವಾಗಿವೆ.

ಕೊನೆಯದಾಗಿ ಒಂದು ಮಾತಿನಲ್ಲಿ ಹೇಳಬಹುದಾದರೆ: ಇಲ್ಲಿ ಆಳವಾದ ಅಧ್ಯಯನವಿದೆ, ಸಮತೋಲನದ ಚಿಂತನಶೀಲತೆಯಿದೆ; ಮಾನವ ಪ್ರಕೃತಿಯ ವೈವಿಧ್ಯವನ್ನು ಗುರುತಿಸುವ ಸೂಕ್ಷ್ಮದೃಷ್ಟಿಯಿದೆ; ಅದನ್ನು ಅರ್ಥಮಾಡಿಕೊಳ್ಳುವ ಮಾನವೀಯ ಅನುಕಂಪೆಯಿದೆ; ಬಾಹ್ಯ ಪ್ರಕೃತಿ ಸೌಂದರ್ಯವನ್ನು ಗುರುತಿಸುವ ಕಲಾತ್ಮಕತೆಯಿದೆ; ಜೀವನದಲ್ಲಿ ಬೆರೆತರೂ ದೂರ ನಿಂತು ನೋಡುವ ಸಾಕ್ಷೀಪ್ರಜ್ಞೆ ಯಿದೆ; ಗಂಭೀರ ದೃಷ್ಟಿಯಿದೆ, ಅಂತೆಯೇ ನವುರಾದ ಹಾಸ್ಯವಿದೆ; ಇವೆಲ್ಲವನ್ನು ಆಸ್ವಾದ್ಯವಾಗುವಂತೆ ಹೇಳಬಲ್ಲ ನೇರ ಸರಳ ಸಹಜ ಸುಂದರ ಶೈಲಿಯಿದೆ. ಇವೆಲ್ಲವುಗಳಿಂದ ಕೂಡಿದ ಇವರ ಪ್ರವಾಸ ಕಥನದ ಈ ಮೂರು ಕೃತಿಗಳು ಕನ್ನಡ ಪ್ರವಾಸ ಸಾಹಿತ್ಯಕ್ಕೆ ಕೊಟ್ಟ ಒಂದು ವಿಶಿಷ್ಟವಾದ ಅದ್ವಿತೀಯ ಕೊಡುಗೆ. ಇದರ ಜೊತೆಗೆ ಮೇಲೆ ನೋಡಿದ ಅವರ ಇತರ ಕೃತಿಗಳನ್ನು ಪರಿಗಣಿಸಿದಾಗ ಪ್ರವಾಸ ಸಾಹಿತ್ಯವಲ್ಲದೆ ವಿಚಾರ ಸಾಹಿತ್ಯಕ್ಕೂ ಅವರ ಕಾಣಿಕೆ ಗಮನಾರ್ಹವಾಗಿದೆಯೆಂಬುದನ್ನು ಮನಗಾಣುತ್ತೇವೆ. ಹೀಗೆ ಶ್ರೀ ನ. ಭದ್ರಯ್ಯನವರು ತಮ್ಮ ಕೃತಿಗಳಿಂದ ಮತ್ತು ಅವುಗಳಿಗೆ ಕಾರಣವಾದ ಉನ್ನತ ವ್ಯಕ್ತಿತ್ವದಿಂದ ಅಚ್ಚಳಿಯದ ಪ್ರಭಾವವನ್ನು ಬೀರುವ ಮಹಾ ವ್ಯಕ್ತಿಗಳಾಗಿ ಪರಿಣಮಿಸಿ ದ್ದಾರೆ.

---

ಸೇವೆಯೇ ಜೀವನ.

ಗಾಂಧೀಜಿ

# ನಾ ಕಂಡ ನಭ

ಕೆ. ಎಸ್. ನಾರಾಯಣಸ್ವಾಮಿ

"In the Case of the Indian villager, an age old culture is hidden under an encrustment of crudeness. Take away the encrustation, remove his Chronic poverty and his illiteracy and you will find the finest specimen of what a cultured, Cultivated, free Citizen should be."

*('Mahatma Gandhi in Harijan' 28-1-39)*

ಗಾಂಧೀಜಿಯ ಈ ಮಾತುಗಳು ಶ್ರೀ ನಭ ಅವರನ್ನು ನೆನೆದಾಗಲೆಲ್ಲ ನನ್ನ ಮನಸ್ಸಿನಲ್ಲಿ ಚಿಮ್ಮಿ ಬರುತ್ತದೆ. ಅವರ ಶ್ರದ್ಧೆ ಮೂಲತಃ ಮಾನವೀಯತೆಯಲ್ಲಿ; ಭಾರತದ ಗ್ರಾಮೀಣ ಜನತೆಯ ಬದುಕಿನಲ್ಲಿ; ಅಲ್ಲೇ ಅವರು ಹುಟ್ಟಿ ಬೆಳೆದವರು; ಮಣ್ಣಿನ ಮಕ್ಕಳ ಹೃದಯ ಸ್ಪಂದನಗಳಿಗೆ ಮಿಡಿದವರು. ಆ ಸಂಸ್ಕೃತಿಯ ಗಂಭೀರ ಶಾಶ್ವತ ಮೌಲ್ಯಗಳನ್ನು ಮೈಗೂಡಿಸಿಕೊಂಡವರು. ಹಳೆ ಬೇರಿನಿಂದಲೇ ಹೊಸಚಿಗುರನ್ನು ಚಿಮ್ಮಿಸಿ ತಮ್ಮ ಜೀವನವನ್ನು ಹಸನುಗೊಳಿಸಿಕೊಂಡು ಸಾರ್ಥಕವಾಗಿ ಬಾಳಿದವರು. ಅವರ ಸಹವಾಸವೇ ಒಂದು ವಿಶಿಷ್ಟ ಆನಂದಾನುಭವವಾಗಿರುತ್ತಿತ್ತು.

ನಲವತ್ತೈದು ವರ್ಷಗಳಿಗೂ ಮೀರಿ ನನ್ನ ಅವರ ಮಧುರ ಬಾಂಧವ್ಯ ಬೆಳೆದುಬಂದಿತ್ತು. ಈ ಶತಮಾನದ ಪೂರ್ವಾರ್ಧದಲ್ಲಿ ಭಾರತದ ಆತ್ಮ ಶ್ರೀ ತನ್ನ ದಾಸ್ಯಶೃಂಖಲೆಗಳನ್ನು ತೊರೆದು ಹೊಸ ಬಾಳಿನತ್ತ ಮುಖಮಾಡಿ ಹೆಜ್ಜೆಯಿಡುತ್ತಿತ್ತು. ಒಂದು ದಿವ್ಯ ಸ್ಫೂರ್ತಿಯ ಚಿಲುಮೆ ಭಾರತೀಯ ದೇಶಭಕ್ತರ ಹೃದಯಗಳಲ್ಲಿ ಚಿಮ್ಮುತ್ತಿತ್ತು. ಗಾಂಧೀಜಿ ಆ ಪಾವನಗಂಗೆಯನ್ನು ಭಗೀರಥನಂತೆ

ಈ ನಾಡಿನ ಕಣಕಣಗಳಲ್ಲಿ ಹರಿಸಿ ಜೀವ ತುಂಬಿದ ಕಾಲ ಅದು. ಮೈಸೂರಿನಲ್ಲಿ ರಾಷ್ಟ್ರೀಯತೆಯ ಹೊನಲು ಹರಿಯುತ್ತಿತ್ತು. ದೇಶೀಯ ಸಂಸ್ಥಾನವಾಗಿದ್ದ ಹಳೆಯ ಮೈಸೂರು ರಾಜ್ಯದಲ್ಲಿ ನೇರವಾದ ಸತ್ಯಾಗ್ರಹ ಚಳುವಳಿಗಳಿಗೆ ಗಾಂಧೀಜಿ ಅನುಮತಿ ಕೊಟ್ಟಿರಲಿಲ್ಲ. ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಖೆಗಳು ಈ ಸಂಸ್ಥಾನಗಳಲ್ಲಿರಲಿಲ್ಲ. ನಲವತ್ತರ ದಶಕದಲ್ಲಿ ರಾಷ್ಟ್ರೀಯ ಆಂದೋಳನ ತನ್ನ ಶಿಖರಕ್ಕೇರುತ್ತಿತ್ತು. ಮೈಸೂರು ರಾಜ್ಯ ಕಾಂಗ್ರೆಸ್ ಹುಟ್ಟಿಕೊಂಡಿತು. ಮೈಸೂರು ನಗರದಲ್ಲಿ ಹಿರಿಯ ಮುಖಂಡರಾಗಿದ್ದ ಶ್ರೀ ದಾಸಪ್ಪ ದಂಪತಿಗಳು, ರಂಗರಾಮಯ್ಯ, ಎಂ.ಎಸ್. ಜೋಯಿಸ್ ಸಾಹುಕಾರ್ ಚನ್ನಯ್ಯ ಮುಂತಾದವರು ಜನಜಾಗೃತಿಯ ತೀವ್ರ ಚಳುವಳಿಗಳಲ್ಲಿ ತೊಡಗಿದ್ದರು. ಭದ್ರಯ್ಯನವರು ಈ ಮುಂಚೂಣಿಯ ಪಂಕ್ತಿಯಲ್ಲಿ ಕಟ್ಟಾ ಗಾಂಧೀವಾದಿಯಾಗಿ ನಿಂತರು. ಗಾಂಧೀಜಿ ಹಾಕಿಕೊಟ್ಟ ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಿಶೇಷ ಉತ್ಸಾಹ ಯುವಜನರಲ್ಲಿ ತುಂಬಿತ್ತು. ಖಾದಿಕೆಲಸ, ವಯಸ್ಕರ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ದೇಶಭಾಷಾ ಪ್ರಚಾರ, ಗ್ರಾಮಜೀವನ ಪುನರ್ರಚನೆ, ಮಹಿಳೆಯರ ಉನ್ನತಿ ಮುಂತಾದ ಗಾಂಧೀ ಪ್ರಣೀತ ರಾಷ್ಟ್ರೀಯ ಚಟುವಟಿಕೆಗಳಿಗೆ ಮೈಸೂರಿನ ಮಹಾರಾಜರ ಸರ್ಕಾರವೂ ಬೆಂಬಲ ನೀಡುತ್ತಿತ್ತು. ಆ ಸಮಯಕ್ಕೆ ಭದ್ರಯ್ಯನವರು 'ಗ್ರಾಮಸೇವಾ ನಿಲಯ'ವನ್ನು ಪ್ರಾರಂಭಿಸಿದ್ದರು. 'ಗ್ರಾಮಸೇವೆ' ಎಂಬ ಪತ್ರಿಕೆ ನಡೆಸುತ್ತಿದ್ದರು. ಒಂದು ವಿದ್ಯಾವಂತ ಗೆಳೆಯರ ಗುಂಪು ಅವರೊಡನೆ ಸದಾ ಕ್ರಿಯಾತ್ಮಕ ಸೇವೆಯಲ್ಲಿ ತೊಡಗಿರುತ್ತಿತ್ತು. ಗ್ರಾಮೀಣ ಪ್ರದೇಶಗಳಿಂದ ಬಂದು ಉನ್ನತ ವ್ಯಾಸಂಗ ಮಾಡುತ್ತಿದ್ದ ಯುವಕರನೇಕರು ಗ್ರಾಮಸೇವಾನಿಲಯದ ವಿದ್ಯಾರ್ಥಿ ಗೃಹದ ಸದಸ್ಯರಾಗಿದ್ದರು. ಮುಂದೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉನ್ನತಿಗೇರಿದರು. ಶಾಂತಿನಿಕೇತನದಲ್ಲಿ ಪ್ರಾಧ್ಯಾಪಕರಾದ ವೆಂಕಟರಮಣನ್, ವಿದ್ಯಾಧಿಕಾರಿಗಳಾದ ಶ್ರೀ ರಂಗರಾಜು, ಪ್ರಾಧ್ಯಾಪಕರುಗಳಾದ ಎಸ್. ಎ. ತೀರ್ಥ, ಸಂಪತ್, ನಾಡಿಗ ಕೃಷ್ಣಮೂರ್ತಿ, ಮೈಸೂರು ಪುರಸಭಾ ಅಧ್ಯಕ್ಷರಾದ ಟಿ. ವೆಂಕಟರಮಣಯ್ಯ, ಮಾಜಿ ಮಂತ್ರಿ ಕೆ. ಪುಟ್ಟಸ್ವಾಮಿ ಮುಂತಾದವರೆಲ್ಲ ಭದ್ರಯ್ಯನವರ ನಿಕಟಾನುವರ್ತಿಗಳಾಗಿ ಕೆಲಸ ಮಾಡಿದವರು.

ಆ ಸಮಯಕ್ಕೆ ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಗಾಂಧೀಜಿಯ ಮೊಮ್ಮಗ ಕಾಂತಿಲಾಲ್‌ಗಾಂಧಿ, ಅವರ ಪತ್ನಿ ಸರಸ್ವತಿಗಾಂಧಿ ಅಧ್ಯಾಪಕ ಟಿ. ಎನ್. ಶಾಮರಾವ್, ಇಂಜಿನಿಯರ್ ರಾಮಸ್ವಾಮಿ, ಟಿ. ವೆಂಕಟರಮಣಯ್ಯ, ವ್ಯಾಸತೀರ್ಥ ಮುಂತಾದವರೊಡನೆ ಭದ್ರಯ್ಯನವರು ಗಾಂಧೀ ಸೇವಾ ಸಂಘ ಸ್ಥಾಪಿಸಿ ನಡೆಸುತ್ತಿದ್ದರು. ರಾಷ್ಟ್ರೀಯ ಜಾಗೃತಿಯ ಪ್ರಮುಖ ಕಾರ್ಯಕರ್ತರಾಗಿದ್ದ ನಭ ತಮ್ಮ ಗ್ರಾಮಸೇವಾ ಪತ್ರಿಕೆಯನ್ನು ಗಾಂಧೀ ವಿಚಾರ ಪ್ರಚಾರಕ್ಕೆ ಮೀಸಲಾಗಿಟ್ಟಿರು. ಒಂದು ಸಣ್ಣ ಮುದ್ರಣಾಲಯ ಸ್ಥಾಪಿಸಿದರು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಪ್ರೇರಣೆಯಿಂದ ಕನ್ನಡದಲ್ಲಿ ಗಾಂಧಿ ಸಾಹಿತ್ಯ ಗ್ರಂಥಗಳ ಪ್ರಕಟಣೆ ಕೈಗೊಂಡರು. ಅವರು ಚಳವಳಿಗಳಲ್ಲಿ ಜೈಲಿಗೆ ಹೋದಾಗಲೆಲ್ಲ ಮುದ್ರಣಾಲಯ ಮುಟ್ಟುಗೋಲಾಗುತ್ತಿತ್ತು. ಅತ್ಯಂತ ಸರಳತೆಯ ಗಾಂಧೀ ಜೀವನ ಮೌಲ್ಯಗಳನ್ನು ಅಂಗೀಕರಿಸಿದ್ದ ನಭ ತಮ್ಮ ಸರ್ವಸ್ವವನ್ನೂ ರಾಷ್ಟ್ರಸೇವೆಗೆ ಸಮರ್ಪಿಸಿಬಿಟ್ಟಿದ್ದರು. ಚಿಕ್ಕಂದಿನಲ್ಲಿ ಮೈಸೂರಿನ

ವ್ಯಾಪಾರೀ ಸೇಠರೊಬ್ಬರ ಆಶ್ರಯದಲ್ಲಿ ಬೆಳೆದರು. ಅವರ ಕುಟುಂಬಕ್ಕೆ ಸೇರಿದ ವೃದ್ಧೆಯೊಬ್ಬರು ಸೇಠರ ನಿಧನದ ನಂತರ ಭದ್ರಯ್ಯನವರನ್ನೇ ಮಗನಂತೆ ಸ್ವೀಕರಿಸಿ ಆಶ್ರಯವಿತ್ತರು. ತಮ್ಮ ಸಮಸ್ತ ವ್ಯವಹಾರಗಳನ್ನೂ ಈ ಸಾಕುಮಗನಿಗೆ ವಹಿಸಿಕೊಟ್ಟಿದ್ದರು. ಆಕೆಯ ಕಿರಿಯ ಮಗನನ್ನು ನಭ ತನ್ನ ತಮ್ಮನಂತೆ ಪ್ರೀತಿಯಿಂದ ಸಾಕಿ ಬೆಳೆಸಿದರು. ನಿರ್ವ್ಯಾಜ ಪ್ರೇಮದಿಂದ ವಸುಧೈವ ಕುಟುಂಬಕರಾಗಿ ಬಾಳಿದ ಉದಾರಚರಿತ ನಭ. ನಾನು ಕಂಡ ಅಪೂರ್ವ ನಿರಾಡಂಬರ ಸುಸಂಸ್ಕೃತ ಸಮಾಜ ಕಾರ್ಯಕರ್ತ. ೧೯೪೬ರಲ್ಲಿ ನಾನು ಮೈಸೂರಿಗೆ ಬಂದು ನೆಲೆಸಿದಾಗ ನನ್ನ ಬಗ್ಗೆ ವಿಶ್ವಾಸಪೂರ್ಣ ಅಣ್ಣನಂತೆ ನಡೆದುಕೊಂಡ ಭದ್ರಯ್ಯ ಅಲ್ಲಿಂದಾಚೆ ನನ್ನ ಬಾಳಿನ ಒಂದು ಚಿರಸ್ಥಾಯೀ ಮಧುರ ಶೃತಿಯಂತೆ ಕೊನೆಯವರೆಗೂ ತುಂಬಿನಿಂತಿದ್ದರು. ನಮ್ಮ ಕುಟುಂಬ ವರ್ಗದ ಒಬ್ಬ ಬಂಧುವಾಗಿ ಸದಾ ವಿಶ್ವಾಸದಿಂದ ನಡೆದುಕೊಂಡರು.

ನಭ ಅವರ ನೆರವಿನಿಂದಲೇ ನಾನು ಮೈಸೂರಿನಲ್ಲಿ ಚೇತನ ಪ್ರಕಟನಾಲಯ ಪ್ರಾರಂಭಿಸಿದೆ. ನಮ್ಮ ಮೊದಲ ಪ್ರಕಟಣೆ ದೇಜಗೌ ಅವರ ಮೊದಲ ಕೃತಿ 'ನೆನಪು ಕಹಿಯಲ್ಲಿ' ಎಂಬ ಕೃಷ್ಣಹಥೀಸಿಂಗರ ಇಂಗ್ಲಿಷ್ ಗ್ರಂಥದ ಅನುವಾದ. ನೆಹರು ಮನೆತನದ ಕಥೆ. ದೇಜಗೌ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರಾಗಿ ಬಂದಿದ್ದರು. ಪಡುವಾರಹಳ್ಳಿಯ ಅವರ ಮನೆಯಲ್ಲಿ ಆಗಾಗ್ಗೆ ಸೇರುತ್ತಿದ್ದೆವು. ಹಳ್ಳಿಯ ಪರಿಸರದಲ್ಲಿ ನಭ ಸಂತೋಷವಾಗಿ ಮಿಲನವಾಗಿ ಬಿಡುತ್ತಿದ್ದರು. ರಾಷ್ಟ್ರೀಯ ಚಳವಳಿಗೆ ಪೋಷಕವಾದ ಸಾಹಿತ್ಯ ಪ್ರಕಾಶನಕ್ಕಾಗಿಯೇ 'ಚೇತನ' ಪ್ರಾರಂಭಿಸಿದ್ದೆವು. ಗಾಂಧೀ ಜೀವನ ಚರಿತ್ರೆ, ಗಾಂಧಿ ಪ್ರಮಾಣ ವಚನಗಳು, ಅರ್ಪಣೆ, ಗಾಂಧೀ ವಿಚಾರ ವರ್ಧಾಯಾತ್ರೆ, ಸರ್ವೋದಯ ಹೀಗೆ ಅನೇಕ ಗ್ರಂಥಗಳು ಪ್ರಕಟವಾದವು. ಎಲ್ಲ ಕಡೆಯಿಂದ ಗಾಂಧೀ ಸಾಹಿತ್ಯ ತರಿಸಿ ಮಾರಾಟ ಮಾಡುತ್ತಿದ್ದೆವು. ವಿಚಾರ ಪ್ರಚಾರದ ಕಾರ್ಯದಲ್ಲಿ ತೊಡಗಿ ಅಂದಿನ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ನಮ್ಮ ಪ್ರಧಾನ ಉದ್ದೇಶ. ಸ್ವತಂತ್ರವಾಗಿ ಉದ್ಯಮ ನಡೆಸಿ ಸರಳ ಜೀವನಕ್ಕಾಗುವ ಕನಿಷ್ಟ ಸಂಪಾದನೆ ಗಳಿಸಿ ಆದಷ್ಟು ಹೆಚ್ಚು ಸಮಯ ರಾಷ್ಟ್ರೀಯ ರಚನಾತ್ಮಕ ಚಟುವಟಿಕೆಗಳಲ್ಲಿ ಸ್ವಯಂ ಸೇವಕರಾಗಿ ದುಡಿಯುವ ಸಂಕಲ್ಪ ನಮ್ಮದು. ಇದಕ್ಕೆ ಮೂಲ ಸ್ಫೂರ್ತಿಯ ಚಿಲುಮೆಯಂತಿದ್ದರು ನಭ. ಅವರ ವಿಶಿಷ್ಟ ಅಭಿರುಚಿ ವಯಸ್ಕರ ಶಿಕ್ಷಣ ಕಾರ್ಯದಲ್ಲಿ. ಆದರೆ ಮಿಕ್ಕ ಗಾಂಧೀ ಪ್ರಣೀತ ಕಾರ್ಯಕ್ರಮಗಳಿಗಾಗಿ ಮೈಸೂರಿನಲ್ಲಿ ಆಗ ಪ್ರಾರಂಭವಾದ ಎಲ್ಲ ಸ್ವಯಂಸೇವಾ ಸಂಸ್ಥೆಗಳಲ್ಲಿ ನಭ ಪಾಲ್ಗೊಳ್ಳುತ್ತಿದ್ದರು. ಆ ಗಾಂಧೀಯುಗದಲ್ಲಿ ಮೈಸೂರಿನ ಪ್ರಥಮ ಮಹಿಳಾ ಸೇವಾಸಂಸ್ಥೆಗಳಾದ ಮಹಿಳಾ ಸದನ, ವನಿತಾ ಸದನ, ಭಗಿನಿ ಸೇವಾಸಮಾಜ, ಅಕ್ಕನಬಳಗ ಮುಂತಾದುವು ಜೀವಂತ ರಾಷ್ಟ್ರೀಯತೆಯ ಕೇಂದ್ರಗಳಾದವು. ಮಹಾಜನ ಪ್ರೌಢಶಾಲೆಯನ್ನು ಪ್ರಾರಂಭಿಸಿದ ವಿದ್ಯಾವಂತ ಯುವಕರು ಗಾಂಧೀ ಸ್ಫೂರ್ತಿಯಿಂದ ಸೇವಾದೀಕ್ಷೆ ಕೈಗೊಂಡವರು. ಬೆಂಗಳೂರಿನಿಂದ ಬಂದ ಹೆಡ್‌ಮಾಸ್ಟರ್ ಹೆಚ್. ಅನಂತರಾಯರು ಸಂಪದ್ಗಿರಿರಾಯರ ಪರಮ ಶಿಷ್ಯರು. ಯಾದವಗಿರಿಯಲ್ಲಿನ ಅವರ ವ್ಯಾಯಾಮಶಾಲೆ ಹಲವು ಕಾರ್ಯಚಟುವಟಿಕೆಗಳ ಕೇಂದ್ರವಾಗಿತ್ತು. ಖಾದಿ ಪರಸ್ಪರ ಸಹಾಯ ಸಂಘ, ಹಿಂದಿ ಪ್ರಚಾರ ಸಭೆ, ಗಾಂಧೀ

ವಿಚಾರ ಪರಿಷತ್ತು, ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆ ಮುಂತಾದ ಹಲವು ಸಂಸ್ಥೆಗಳೊಡನೆ ನಭ ಅವರು ನಿಕಟವಾಗಿ ಕೆಲಸ ಮಾಡಿದರು. ಅವರ ಸಾತತ್ಯ ಯೋಗ ನಮ್ಮನ್ನೆಲ್ಲ ಚುರುಕುಗೊಳಿಸುತ್ತಿತ್ತು. ನಿಶ್ಶಬ್ದ ಸೇವೆ, ನಿರಾಡಂಬರ ವ್ಯವಹಾರ, ಗಾಂಧೀ ಜೀವನ ಮೌಲ್ಯಗಳ ಪ್ರಸಾರ ನಭ ಅವರ ಜೀವನ ಸೂತ್ರಗಳು. ಸೂಜಿಗಲ್ಲಿ ನಂತೆ ಆಕರ್ಷಿಸಿ ನಮ್ಮನ್ನೆಲ್ಲ ಸಂಕಲ್ಪಬದ್ಧರಾಗಿ ದುಡಿಯುವ ಉತ್ಸಾಹ ತುಂಬಿದ ಶ್ರೇಯಸ್ಸು ಭದ್ರಯ್ಯನವರಿಗೆ ಸೇರಬೇಕು.

ನಂಜನಗೂಡಿನ ವಿದ್ಯಾಪೀಠ ಭದ್ರಯ್ಯನವರ ಅತ್ಯಂತ ವಿಶಿಷ್ಟ ಕೊಡುಗೆ ಯಾಗಿತ್ತು. ವಯಸ್ಕರ ಶಿಕ್ಷಣ ಚಳವಳಿಯಲ್ಲಿ ಅದೊಂದು ಮೈಲಿಗಲ್ಲು. ನಂಜನ ಗೂಡಿನ ವಿಶ್ವೇಶ್ವರಗೌಡರು ಭದ್ರಯ್ಯನವರಿಗೆ ಬೆಂಬಲವಿತ್ತರು. ಎಸ್. ವಿ. ಶ್ರೀನಿವಾಸ ರಾಯರು, ಟಿ. ಕೃಷ್ಣಮೂರ್ತಿಗಳು ಮತ್ತು ನಭ ಅನೇಕ ಕಾರ್ಯಕರ್ತರನ್ನು ಸಿದ್ಧ ಮಾಡಿದ್ದರು. ದಿವಂಗತ ಗೋವಿಂದರಾಯರು, ವರಾಹಮೂರ್ತಿ, ರಾಜಗೋಪಾಲ್, ಎಸ್. ರಜತಾದ್ರಿ, ಮುನಿಸ್ವಾಮಿ ಮುಂತಾದವರು ದೀಕ್ಷಾಬದ್ಧರಾಗಿ ಸೇವೆ ಸಲ್ಲಿಸುವ ಪ್ರೇರಣೆ ನೀಡಿದವರು ನಭ. ವಿದ್ಯಾಪೀಠದಲ್ಲಿ ಮೊದಲ ಜಾನಪದ ಜಾತ್ರೆ ನಡೆಸಿದವರು ಪ್ರಸಿದ್ಧ ಗಾಂಧೀವಾದಿ ಅರ್ಥಶಾಸ್ತ್ರಜ್ಞ ಡಾ|| ಜೆ. ಸಿ. ಕುಮಾರಪ್ಪ ಅವರನ್ನು ಮುಖ್ಯ ಅತಿಥಿಗಳಾಗಿ ಬರಮಾಡಿಕೊಂಡಿದ್ದೆವು. ಗ್ರಾಮರಾಜ್ಯದ ಕನಸಿಗೆ ಒಂದು ಮೂರ್ತಸ್ವರೂಪ ಕೊಡಲು ಆ ವಿದ್ಯಾಪೀಠ ಪ್ರಭಾವಶಾಲಿ ಸಂಸ್ಥೆಯಾಗಿತ್ತು. ಅನೇಕ ಪ್ರಯೋಗಗಳನ್ನು ನಭ ಅಲ್ಲಿ ಕೈಕೊಂಡರು. ಗಾಂಧೀಜಿಯ ಮೂಲ ಶಿಕ್ಷಣದ ರೀತಿ ನೀತಿಗಳನ್ನು ಅಳವಡಿಸಿ ದರು. ಮುಂದೆ ಹತ್ತು ಜಿಲ್ಲೆಗಳಲ್ಲೂ ವಿದ್ಯಾಪೀಠ ಪ್ರಾರಂಭಿಸಿ ಅಂತರರಾಷ್ಟ್ರೀಯ ಸ್ವಯಂಸೇವಕರನ್ನು ಆಕರ್ಷಿಸಿ ಡೆನ್ಮಾರ್ಕಿನ ಜಾನಪದ ಶಾಲೆಗಳಿಗೆ ಸಂಪರ್ಕ ಕಲ್ಪಿಸಿದರು. ರಾಷ್ಟ್ರೀಯ ಚಳುವಳಿಗಳಲ್ಲಿ ಗ್ರಾಮ ಪುನರ್ರಚನಾ ಪ್ರಚಾರದಲ್ಲಿ ವಿದ್ಯಾಪೀಠಗಳು ಸಹಕಾರ ನೀಡಿದುವು.

ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿ ನಭ ನಮ್ಮೊಡನೆ ನಿಕಟವಾಗಿ ಬೆರೆತು ಸಕ್ರಿಯ ಭಾಗವಹಿಸಿದ್ದರು. ಪ್ರೊ|| ಯಮುನಾಚಾರ್ಯ, ಶ್ರೀ ಕುವೆಂಪು, ಶ್ರೀ ಸಿದ್ದವನ ಹಳ್ಳಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿಐಯ್ಯಂಗಾರ್, ಸಂಪದ್ಗಿರಿರಾಯರು ಖಾದ್ರಿ ಶಾಮಣ್ಣ, ಜಿ. ವಿ. ನಾರಾಯಣಮೂರ್ತಿ, ಭದ್ರಯ್ಯ ಮುಂತಾದ ಸುಪ್ರಸಿದ್ಧ ಗಾಂಧೀ ಸಾಹಿತ್ಯ ನಿರ್ಮಾತೃಗಳು ಕನ್ನಡದಲ್ಲಿ ಗಾಂಧೀಜಿಯ ವಿಪುಲ ಬರಹಗಳನ್ನೆಲ್ಲ ಸಂಪಾದಿಸಿ ಸಂಗ್ರಹಿಸಿ, ಸಂಕಲನ ಮಾಡಿ, ಭಾಷಾಂತರಿಸಿ ಇಪ್ಪತ್ತು ಸಂಪುಟಗಳಲ್ಲಿ 'ಗಾಂಧೀ ಗ್ರಂಥಮಾಲೆ' ಪ್ರಕಟಿಸಿದರು. ದೇಶದಲ್ಲೇ ಅತ್ಯಂತ ಸಮರ್ಪ ರೀತಿಯ ಸಂಕಲನ ಎಂದು ಖ್ಯಾತಿ ಕನ್ನಡ ಸಂಪುಟಗಳು ಗಳಿಸಿದವು. ಗಾಂಧೀ ಸ್ಮಾರಕ ನಿಧಿಯ ರಾಜ್ಯ ಸಮಿತಿಯ ಪ್ರಮುಖ ಸದಸ್ಯರಾಗಿ ಭದ್ರಯ್ಯ ಅನೇಕ ವರ್ಷಗಳು ಕಾರ್ಯ ನಡೆಸಿ ಕೊಟ್ಟರು. ಕರ್ನಾಟಕದ ರಚನಾತ್ಮಕ ಕಾರ್ಯಕರ್ತರ ಅಗ್ರಪಂಕ್ತಿಯಲ್ಲಿ ಭದ್ರಯ್ಯ ಹಿರಿಯ ಸ್ಥಾನಕ್ಕೆ ಸೇರಿದವರಾಗಿದ್ದರು.

ಇಷ್ಟು ವ್ಯಾಪಕ ಸಾರ್ವಜನಿಕ ಕೇಂದ್ರಗಳಲ್ಲಿ ಕೆಲಸ ಮಾಡಿ, ಪ್ರಭಾವಶಾಲಿ ಜನನಾಯಕರಾಗಿದ್ದರೂ ಭದ್ರಯ್ಯನವರು ಒಂದು ಸಣ್ಣ ಪುರಸಭೆಯ ಚುನಾವಣೆಗೂ

ಕೂಡ ಅಭ್ಯರ್ಥಿಯಾಗಲು ನಿರಾಕರಿಸಿದರು. ಇದು ಅವರ ಅತ್ಯಂತ ಮಹತ್ವದ ಸಂಕಲ್ಪ. ಸಂಸದೀಯ ರಾಜಕಾರಣದಿಂದ ದೂರವೇ ಇದ್ದು ಸದ್ದಿಲ್ಲದ ರಾಷ್ಟ್ರ ಪುನರ್ರಚನಾ ಕಾರ್ಯಗಳಲ್ಲಿ ತಲ್ಲೀನರಾಗಿಬಿಟ್ಟರು. ಎಂದೂ ಪ್ರಚಾರ ಪ್ರಿಯರಾಗಲಿಲ್ಲ. ಅಧಿಕಾರ ಸ್ಥಾನಗಳಿಗಾಗಿ ಹಾತೊರೆಯಲಿಲ್ಲ. ಆದರೆ ಯುನೆಸ್ಕೋ ಸಂಸ್ಥೆ ಇವರನ್ನೇ ಅರಸಿ ಬಂದು ವಿಶ್ವರಂಗಕ್ಕೆ ಸೆಳೆದು ಬಿಟ್ಟಿತು. ನಭ ಅವರ ಕಾರ್ಯ ದಕ್ಷತೆಯನ್ನೂ ಪ್ರಾಮಾಣಿಕ ಮನೋವೃತ್ತಿಯನ್ನೂ ಬಲ್ಲವರಾಗಿದ್ದ ಪ್ರೊ॥ ಈಗಲ್‌ಟನ್ ಭದ್ರಯ್ಯನವರನ್ನು ವಿಶ್ವದ ಅನೇಕ ಹಿಂದುಳಿದ ರಾಷ್ಟ್ರಗಳಿಗೆ ತಜ್ಞ ಸಲಹೆಗಾರರನ್ನಾಗಿ ನೇಮಿಸಿಕೊಂಡರು. ಈ ಅನುಭವ ನಭ ಅವರ ಮನೋಕ್ಷಿತಿಜವನ್ನು ಮತ್ತಷ್ಟು ಅರಳಿಸಿತು. ಅವರ ಸಾಹಿತಿ ಮನಸ್ಸು ಅದನ್ನು ಕನ್ನಡಿ ಹಿಡಿಯಿತು. ಫಲವಾಗಿ ಬಂದ ಆರು ಪ್ರವಾಸಕಥನ ಗ್ರಂಥಗಳು ಕನ್ನಡಕ್ಕೆ ಒಂದು ಅಪೂರ್ವ ಕೊಡುಗೆ.

ಭದ್ರಯ್ಯನವರು ಸಾಂಸಾರಿಕ ಜೀವನದಲ್ಲೂ ಅಂತರರಾಷ್ಟ್ರೀಯ ಬಾಂಧವ್ಯ ಬೆಳೆಸಿದವರು. ಅವರ ಅಮೆರಿಕನ್ ಭಾರ್ಯೆ ಶ್ರೀಮತಿ ಶಾಂತಿಭದ್ರಯ್ಯ ಇವರಂತೆಯೇ ಖ್ಯಾತಿವೆತ್ತ ಶಿಕ್ಷಣ ತಜ್ಞೆ. ಸಂಶೋಧನಾ ವಿದ್ಯಾರ್ಥಿನಿಯಾಗಿ ಭಾರತಕ್ಕೆ ಬಂದವರು. ಮೈಸೂರಿನ ವಯಸ್ಕರ ಶಿಕ್ಷಣ ಸಂಸ್ಥೆ ಸಹಜವಾಗಿಯೇ ಅವರನ್ನು ಆಕರ್ಷಿಸಿತು. ನಭ ಅವರ ಸೌಜನ್ಯಪೂರ್ಣ ಮಾರ್ಗದರ್ಶನ, ವಿಶ್ವಾಸ, ಅವರ ವಿಶಾಲ ಮನೋವೃತ್ತಿ, ಸರಳ ಸುಂದರ ಜೀವನ ಶೈಲಿಗಳೂ ಆಕೆಯ ಗಮನ ಸೆಳೆದವು. ವೃತ್ತಿಬಾಂಧವ್ಯ ಸಂಸಾರ ಬಾಂಧವ್ಯವಾಗಿ ಪರಿಣಮಿಸಿತು. ಮಧ್ಯ ಮಯಸ್ಸಿನವರೆಗೂ ಏಕಾಕಿಯಾಗಿ ವಿರಾಗಿಯಂತೆ ಸರ್ವಸಮಯವನ್ನು ಸಾರ್ವಜನಿಕ ಸೇವೆಗೇ ಸಮರ್ಪಿಸಿದ್ದ ನಭ ಈಕೆಯನ್ನು ಅಂಗೀಕರಿಸಿದರು. ಅವರ ದಾಂಪತ್ಯ ಸುಲಲಿತವಾದ ಕಲಾಮಯವಾದ ಪ್ರೀತಿಪೂರ್ಣವಾದ ಆತ್ಮಶ್ರೀ ನಿಲಯವೊಂದನ್ನು ನಿರ್ಮಿಸಿಕೊಂಡಿತು. ಫಲವಾಗಿ ಹುಟ್ಟಿದ 'ಶುಭ' ಪ್ರತಿಭಾವಂತೆ. ಎಳೆಯ ವಯಸ್ಸಿನಲ್ಲೇ ಇಂಗ್ಲಿಷ್ ಕವನಗಳನ್ನು ರಚಿಸಿದಳು. ಅವು ಪ್ರಕಟವಾದವು. ಕನ್ನಡದ ಗೋವಿನಕಥೆಯನ್ನು ಇಂಗ್ಲೀಷಿಗೆ ಭಾಷಾಂತರಿಸಿ ಚಿತ್ರಗಳನ್ನು ತಾನೇ ಬರೆದು ಪ್ರಕಟಿಸಿದ್ದಾಳೆ. ಈಗ ಇಂಜನಿಯರಿಂಗ್ ಪದವೀಧರೆ. ಕೊನೆಯುಸಿರಿನವರೆಗೆ ನಭ ಅವರ ಚೇತನವನ್ನು ಹರ್ಷದಿಂದ ಹಸಿರಾಗಿಟ್ಟದ್ದ ಶ್ರೇಯಸ್ಸು ಶ್ರೀಮತಿ ಶಾಂತಿ ಅವರದು. ಅಮೆರಿಕದಲ್ಲಿನ ತಮ್ಮ ಸರ್ವಸ್ವವನ್ನೂ ವಿತರಿಸಿಬಿಟ್ಟು ಭಾರತೀಯಳಾದ ಈಕೆ ಇಲ್ಲಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಅವರ ಪ್ರೀತಿಪೂರ್ವಕ ಆತಿಥ್ಯದ ಸವಿಯ ಅನುಭವ ನನಗೆ ಅವಿಸ್ಮರಣೀಯ. ಜಯಲಕ್ಷ್ಮೀಪುರದ ಅವರ ಮನೆ 'ಶ್ರೀ' ಹೊರಗೂ ಒಳಗೂ ಪ್ರಶಾಂತ ಸುಂದರ ಪರಿಸರದಿಂದ ತುಂಬಿರುತ್ತಿತ್ತು.

ಭದ್ರಯ್ಯನವರು ತುಂಬು ಬಾಳನ್ನು ವನಸುಮದಂತೆ ಎಲೆಯ ಮರೆಯಲ್ಲಿ ಬಾಳಿ ಅದರ ಸುಗಂಧವನ್ನು ಲೋಕಕ್ಕೆ ಬೀರಿ ಹೋಗಿದ್ದಾರೆ. ಅವರ ನೆನಪು ಅವರ ಸ್ನೇಹ ವೃಂದಕ್ಕೆ ಸೇರಿದ ಸರ್ವರಲ್ಲೂ ಚಿರಕಾಲ ಸುಮಧುರ ಮಂದಮಾರುತದಂತೆ ಬೀಸುತ್ತಿರುತ್ತದೆ.

# ಗ್ರಾಮಸೇವೆ—'ನಭ'

ರಾ. ವೆಂ. ಶ್ರೀನಿವಾಸಮೂರ್ತಿ

ಶುಭ್ರವಾದ ಖಾದಿ ಬಿಳಿ ಲುಂಗಿ, ಬಿಳಿ ಜುಬ್ಬ 'ನಭ' ಅವರ ಉಡುಗೆ. ಅದು ಎಷ್ಟು ಸರಳವೊ ಅವರ ಮನಸ್ಸೂ ಅಷ್ಟೆ. ಅವರ ನಡೆ, ನುಡಿ, ಜೀವನ ಎಲ್ಲವೂ ಅಷ್ಟೆ.

ಅವರನ್ನು ನೋಡಿದಾಗ ಗಾಂಧೀಜಿಯ ನೆನಪಾಗುತ್ತಿತ್ತು. ಬರಿಯ ಹೊರರೂಪ ಮಾತ್ರವಲ್ಲ, ಒಳರೂಪವೂ. ಅವರ ಮನಸ್ಸು ಹೃದಯ ಸದಾ ದೇಶದ ಏಳಿಗೆಯನ್ನೇ ಚಿಂತಿಸುತ್ತಿತ್ತು.

ಒಂದು ಹಂತದವರೆಗೆ ವಿದ್ಯಾಭ್ಯಾಸವನ್ನು ಮುಗಿಸಿ ಸ್ವರಾಜ್ಯ ಚಳುವಳಿಯಲ್ಲಿ ಕಾಲಿಟ್ಟರು. ಭಾಷಣ ಬಿಗಿಯುವುದಕ್ಕಿಂತ ಕೆಲಸ ಮಾಡಬೇಕು. ಹಳ್ಳಿಗಳ ಏಳಿಗೆ ಅದನ್ನು ಕುರಿತು ಆಡುವ ಭಾಷಣದಿಂದಲ್ಲ, ಬರೆದ ಲೇಖನದಿಂದಲ್ಲ. ಅವೂ ಬೇಕು. ಆದರೆ ಅವಕ್ಕಿಂತ ಹೆಚ್ಚಾಗಿ ಹಳ್ಳಿಗರೊಡನೆ ಸೇರಿ ಗ್ರಾಮಸೇವೆ ಮಾಡಬೇಕು. ಗಾಂಧೀಜಿ ಹೇಳುತ್ತಿದ್ದುದೂ ಅದನ್ನೇ. ಶ್ರೀ ಭದ್ರಯ್ಯನವರು ಅಕ್ಷರಶಃ ಅವರ ಆದೇಶವನ್ನು ಪಾಲಿಸಿದರು. ಗಾಂಧೀಜಿಯವರು ಹಾಕಿಕೊಟ್ಟ ರಚನಾತ್ಮಕ ಕಾರ್ಯಕ್ರಮ ಸಂದೇಶವನ್ನು ಹಳ್ಳಿಗಳಿಗೊಯ್ಯಲು 'ಗ್ರಾಮ ಸೇವೆ' ಎಂಬ ಒಂದು ಪತ್ರಿಕೆಯನ್ನು ಪ್ರಾರಂಭಿಸಿದರು. ಅದಕ್ಕಾಗಿ ಗೆಳೆಯರ ನೆರವಿನಿಂದ ಗ್ರಾಮ ಸೇವಾ ಮುದ್ರಣಾಲಯವನ್ನು ಸ್ಥಾಪಿಸಿದರು.

ಆ ಒಲವೇ ಅವರನ್ನು ಅಕ್ಷರ ಪ್ರಚಾರದ ಕಡೆಗೆ ಸೆಳೆಯಿತು.

ಅವರು ಹೆಚ್ಚು ಮಾತಾಡುತ್ತಿರಲಿಲ್ಲ. ಆಡುವ ಸ್ವಲ್ಪ ಮಾತನ್ನೂ ಯೋಚನೆ ಮಾಡಿ, ತೂಕ ಮಾಡಿ ಆಡುತ್ತಿದ್ದರು. ಆದ್ದರಿಂದಲೇ ಅವರ ಸಲಹೆಗಳು, ಸೂಚನೆಗಳು ತುಂಬ ಉಪಯುಕ್ತವಾಗಿರುತ್ತಿದ್ದುವು.

ಶಾಲೆಯಲ್ಲಿ ನಮ್ಮ ಮಕ್ಕಳು ಒಳ್ಳೆಯ ಪುಸ್ತಕಗಳನ್ನು ಓದಬೇಕು; ಅವರಿಗೆ ಸುಲಭವಾಗಿ ಅರ್ಥವಾಗುವಂತೆ ವಿಜ್ಞಾನದ ವಿಷಯಗಳನ್ನು ಹೇಳಬೇಕು; ಆ ದೆಸೆಯಲ್ಲಿ ಒಳ್ಳೊಳ್ಳೆ ಪುಸ್ತಕ

ಗಳು ಪ್ರಕಟವಾಗಬೇಕು, ಎಂದು ಸದಾ ಅವರು ಹಂಬಲಿಸುತ್ತಿದ್ದರು. ತಾವೇ ಸಾಹಿತ್ಯವನ್ನು ರಚಿಸುವ ಪ್ರಯತ್ನವನ್ನೂ ಮಾಡಿದರು. 'ಗಾಂಧೀಜಿ', 'ನಿಮ್ಮ ದೇಹ', 'ಪ್ರಪಂಚದ ಕಥೆ' ಮುಂತಾದ ಉತ್ತಮ ಪುಸ್ತಕಗಳನ್ನು ಬರೆದರು.

ಹಳ್ಳಿಗಳಲ್ಲೇ ನೆಲಸಿ, ವ್ಯವಸಾಯದಲ್ಲಿ ನಿರತರಾಗಿರುವ ಯುವಕರಿಗೆ, ಆಧುನಿಕ ಪ್ರಪಂಚದ ಆಗುಹೋಗುಗಳು, ವಿಜ್ಞಾನರಂಗದಲ್ಲಿ ಆಗುತ್ತಿರುವ ಪ್ರಗತಿ, ವ್ಯವಸಾಯ, ತೋಟಗಾರಿಕೆ, ಹೈನುಗಾರಿಕೆಗಳಲ್ಲಿ ಆಗುತ್ತಿರುವ ಪ್ರಗತಿ ಮುಂತಾದುವೆಲ್ಲವೂ ತಿಳಿಯಬೇಕು. ಅವರ ಜೀವನ ಉತ್ತಮವಾಗಬೇಕು. 'ಹಳ್ಳಿಯ ಯುವಕ ಸುಧಾರಿಸಿದರೆ ಹಳ್ಳಿ ಸುಧಾರಿಸಿದಂತೆ, ಹಳ್ಳಿ ಸುಧಾರಿಸಿದರೆ ದೇಶ ಸುಧಾರಿಸಿದಂತೆ' ಎಂದು ಹೇಳುತ್ತಿದ್ದರು.

'ನೋಡಿ ಕಲಿ' ಎಂಬುದರಲ್ಲಿ ಅವರಿಗೆ ಬಹಳ ನಂಬಿಕೆ. ವಿದೇಶಗಳ ಬಗ್ಗೆ ಎಷ್ಟೇ ಪುಸ್ತಕ ಓದುವುದಕ್ಕಿಂತ ಒಮ್ಮೆ ಆ ದೇಶಗಳಿಗೆ ಹೋಗಿ ಬಂದರೆ ಹೆಚ್ಚು ಉಪಯೋಗ ಎನ್ನುತ್ತಿದ್ದರು.

ಅವರು ಬರೆದ ಪುಸ್ತಕಗಳಿಂದ ಬಂದ ಗೌರವಧನವನ್ನು ವಿದೇಶಯಾತ್ರೆಗೆ ಬಳಸಿದರು. ನಮ್ಮ ಹಳ್ಳಿಗಳ ಏಳಿಗೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು, ಮುಂದುವರಿದ ರಾಷ್ಟ್ರಗಳಲ್ಲಿ ರೈತರ ಜೀವನ ಹೇಗಿದೆ, ಹಳ್ಳಿಗಳ ಸ್ಥಿತಿ ಹೇಗಿದೆ ಎಂಬುದನ್ನು ತಿಳಿಯುವುದು ಆ ಯಾತ್ರೆಯ ಉದ್ದೇಶ. ಡೆನ್ಮಾರ್ಕಿಗೆ ಹೋದಾಗ 'ಫೋಕ್ ಸ್ಕೂಲ್' ನೋಡಿದ್ದು ವಿದ್ಯಾಪೀಠ ಯೋಜನೆಗೆ ಪ್ರೇರಣೆಯಾಯಿತು.

ಅವರ ಪ್ರಯತ್ನದಿಂದಲೇ 'ವಿದ್ಯಾಪೀಠ' ಯೋಜನೆ ಕಾರ್ಯರೂಪಕ್ಕೆ ಬಂದು ಲೋಕ ಪ್ರಸಿದ್ಧವಾಗಿ, ಡೆನ್ಮಾರ್ಕ್ ಸರಕಾರ, ಯುನೆಸ್ಕೊ ಮತ್ತು ಫೋರ್ಡ್ ಫೌಂಡೇಷನ್ ಸಂಸ್ಥೆಗಳಿಂದ ನೆರವು ಪಡೆಯಿತು.' ಅನೇಕ ಶಿಕ್ಷಣ ತಜ್ಞರ ಗಮನವನ್ನು ಸೆಳೆಯಿತು.

ವಿದ್ಯಾಪೀಠ ಸೃಜನಶೀಲ—ಸುಜನಶೀಲ ಗ್ರಾಮನಾಯಕರನ್ನು ರೂಪಿಸಬೇಕು. ಅದಕ್ಕೆ ತಕ್ಕ ಶಿಕ್ಷಣ ಅಲ್ಲಿ ದೊರೆಯಬೇಕು. ಈ ಶಿಕ್ಷಣ ಗಂಡಸರಿಗೆ ಮಾತ್ರ ದೊರೆತರೆ ಸಾಲದು. ಹೆಂಗಸರಿಗೂ ದೊರೆಯುವಂತಾಗಬೇಕು. ಹೆಂಗಸರು ಕಲಿತರೆ ಮನೆಯೇ ಕಲಿತಂತೆ, ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು.

ಯೋಗ್ಯ ಶಿಕ್ಷಣ ಪಡೆದ ಸಮಾಜ ಸೇವಕರು ಸದಾ ಊರೊಟ್ಟಿನ ಹಿತಚಿಂತನೆಯನ್ನೇ ಮಾಡುತ್ತಿರಬೇಕು; ಊರಿಗಾಗಿ ದುಡಿಯಬೇಕು. ತೋಟ ಕಾಪಾಡಿದರೆ ತೋಟದೊಳಗಿನ ಪ್ರತಿ ಮರವನ್ನೂ ಕಾಪಾಡಿದಂತೆ—ಊರು ಏಳಿಗೆಯಾದರೆ, ತಾನೂ ಸೇರಿಕೊಂಡು ಊರಿನ ಎಲ್ಲ ಜನರ ಏಳಿಗೆಯನ್ನೂ ಸಾಧಿಸಿದಂತೆ, ಎನ್ನುತ್ತಿದ್ದರು.

ದುಡಿಯುವವರನ್ನು ಕಂಡಾಗ ಅವರು ಒಂದು ಮಾತು ಹೇಳುತ್ತಿದ್ದರು. ಸೇವೆ ಮಾಡುವುದರಿಂದ ಸೇವೆ ಮಾಡಿಸಿಕೊಳ್ಳುವವರಿಗೆ ಮಾತ್ರ ಲಾಭವಿಲ್ಲ. ಸೇವೆ ಮಾಡುವವರಿಗೂ ಲಾಭ—ಗಾರೆಯುವರು ನೆಲ ನುಣುಪು ಮಾಡಲು ಬಳಸುವ ಕಲ್ಲಿದ್ದಂತೆ, ಎನ್ನುತ್ತಿದ್ದರು. ಆ ಕಲ್ಲು ನೆಲವನ್ನು ನುಣುಪು ಮಾಡುತ್ತ ಮಾಡುತ್ತ ತಾನೂ ನುಣುಪಾಗುತ್ತಿರುತ್ತದೆ.

# ನ. ಭದ್ರಯ್ಯ ಅವರಿಗೆ ಒಂದು ನೆನಪಿನಮಾಲೆ

ಎಸ್. ರಜಶಾದ್ರಿ

ಭದ್ರಯ್ಯನವರ ಬಗ್ಗೆ ಬರೆಯುವುದೆಂದರೆ ನನ್ನ ಹೃದಯ ಮಿಡಿಯುತ್ತದೆ; ಮನಸ್ಸು ತುಂಬಿಬರುತ್ತದೆ; ಲೇಖನಿ ಕೊಡರುತ್ತದೆ. ವಿಷಯಗಳು ನಾನು ತಾನು ಎಂದು ಧಾವಿಸುತ್ತವೆ. ಅವರ ಮತ್ತು ನನ್ನ ನಾಲ್ಕು ದಶಕಗಳ ಸಂಪರ್ಕ ಮತ್ತು ಅನುಭವವನ್ನು ಬರೆಯಲು ಆರಂಭಿಸಿದರೆ ಒಂದು ದೊಡ್ಡ ಗ್ರಂಥವೇ ಆದೀತು. ಆದರೆ ಪ್ರಸಕ್ತ ಲೇಖನದಲ್ಲಿ ನನ್ನ ನೆನಪಿನ ಆಳದಲ್ಲಿ ಮಿಂಚುವ, ಮಿನುಗುತ್ತಿರುವ ಕೆಲವು ಸಂದರ್ಭಗಳನ್ನು ಆಯ್ದು, ಸಂಗ್ರಹಿಸಿ ಇಲ್ಲಿ ಇಡಲು ಪ್ರಯತ್ನಿಸುತ್ತೇನೆ.

ನಭ ಅವರ ವ್ಯಕ್ತಿತ್ವದ ಆಕರ್ಷಕ ಪ್ರಭಾವಲಯಕ್ಕೆ ಸೆಳೆಯಲ್ಪಟ್ಟು ಉಪಗ್ರಹದಂತೆ ಸುತ್ತುತ್ತಾ ಅವರ ಬಹು ಮುಖ ಪ್ರತಿಭೆಯನ್ನು ಸಂದರ್ಶಿಸುವ ಸುಯೋಗ ದೊರೆತ ಕೆಲವೇ ವ್ಯಕ್ತಿಗಳಲ್ಲಿ ನಾನೂ ಒಬ್ಬ. ಸ್ವಾತಂತ್ರ್ಯದ ಅರುಣೋದಯದ ಕಾಲದಲ್ಲಿ ಸ್ವಯಂ ಪ್ರೇರಿತನಾಗಿ ವಯಸ್ಕ ಶಿಕ್ಷಣ ಕ್ಷೇತ್ರಕ್ಕೆ ಬಂದ ನನ್ನನ್ನು ತಮ್ಮ ಆತ್ಮೀಯ ವೃತ್ತಕ್ಕೆ ಸೇರಿಸಿಕೊಂಡು ಮುನ್ನಡಸಿದರು. ತಿರುಗುವ ಚಕ್ರದ ಮೇಲೆ ಮಣ್ಣಿನ ಮುದ್ದೆಯಿಟ್ಟು ತನ್ನ ಕೈಗಳಿಂದ ಅದಕ್ಕೆ ಒಂದು ಕಲಾತ್ಮಕ ರೂಪು ಕೊಡುವ ಕುಶಲಕರ್ಮಿಯಂತೆ ಅವರು ನನ್ನ ವ್ಯಕ್ತಿತ್ವಕ್ಕೆ ಸ್ಪಷ್ಟ ರೂಪು ಕೊಟ್ಟರು. ಕೆಲಸ ಮಾಡಲು ನನಗೆ ಪ್ರೋತ್ಸಾಹಿಸಿ, ನನ್ನ ಉತ್ಸಾಹ ಬತ್ತಿಹೋಗದಂತೆ ನೋಡಿಕೊಂಡರು. ಮತ್ಸರ, ಕೆಡಕುಗಳಿಂದ ರಕ್ಷಣೆ ನೀಡಿದರು. ನನ್ನಲ್ಲಿದ್ದ ಒಳ್ಳೆಯದನ್ನು ಮೆಚ್ಚಿಕೊಂಡರು. ತಪ್ಪನ್ನು ತಿದ್ದಿದರು. ನಮ್ಮ ಸಾಮಾನ್ಯ ಜನರ ಬದುಕು, ಕಷ್ಟ ಕಾರ್ಪಣ್ಯಗಳ ಬಗ್ಗೆ ಚಿಂತಿಸಲು ದೇಶವಿದೇಶಗಳಲ್ಲಿ ಅಧ್ಯಯನ ಮಾಡಲು ನೆರವಾದರು. ವಿದ್ಯಾಪೀಠಗಳಲ್ಲಿಯೇ ನನ್ನನ್ನು ಉಳಿಸಿ ಅವುಗಳ ವಿಕಾಸಕ್ಕೆ ಮತ್ತು ಗ್ರಾಮೀಣ ಯುವಜನತೆಯ ಶಿಕ್ಷಣಕ್ಕೆ ನನ್ನನ್ನು ನಾನೇ ಅರ್ಪಿಸಿಕೊಳ್ಳಲು ಕಾರಣರಾದರು.

ಅವರ ವೇಷ ಸರಳ, ಮಾತು ಹಿತ ಮತ್ತು ಮಿತ; ಆದರೆ ಅಷ್ಟೇ ಹರಿತ; ಮಾತಿನ ಸಾಲಿನಲ್ಲಿ ತಿಳಿಹಾಸ್ಯ; ಮೆಚ್ಚು ನುಡಿ. ಚುಚ್ಚು ನುಡಿಗಳಿಗೆ ಕಡಿಮೆಯಿಲ್ಲ. ಅವುಗಳು ಕೇಳುವವರ ಮನಸ್ಸನ್ನು ಎಚ್ಚರಗೊಳಿಸುತ್ತಿದ್ದುವೇ ವಿನಹ ನೋಯಿಸುತ್ತಿರಲಿಲ್ಲ. ಸಂಭಾಷಣೆಗೆ ಇಳಿದವರು ಅವರ ವಾದ ಸರಣಿಯ ಹಿನ್ನೆಲೆಯಲ್ಲಿ ಅಡಗಿದ್ದ ಸತ್ಯ, ಪ್ರಮಾಣಿಕತೆಗಳನ್ನು ಸಹಜತೆಯನ್ನು ಮೆಚ್ಚುಕೊಳ್ಳದೆ ಇರುತ್ತಿರಲಿಲ್ಲ.

ಸಾಮಾನ್ಯ ಮನುಷ್ಯರ ಬದುಕಿನಲ್ಲಿ ಅದರಲ್ಲೂ ಹಳ್ಳಿಯ ಜನರಲ್ಲಿ ಅವರಿಗೆ ತುಂಬಾ ಕಳಕಳಿ. ಗ್ರಾಮ ಜೀವನದಲ್ಲಿ ಮೂಲಭೂತ ಬದಲಾವಣೆಯಾಗದ ಹೊರತು ದೇಶದ ಉದ್ಧಾರ ಸಾಧ್ಯವಾಗದು ಎಂಬುದು ಅವರ ಅಭಿಪ್ರಾಯ. ಅವರ ಯೋಜನೆಗಳೆಲ್ಲಾ ಜನಜೀವನ ಆಧಾರಿತವಾದವು. ಅಷ್ಟಿಲ್ಲದ ಯೋಜನೆಗಳನ್ನು–ಅವೆಷ್ಟೇ ವಿಸ್ತಾರವಾಗಿರಲಿ—ತಿರಸ್ಕರಿಸುತ್ತಿದ್ದರು.

ಕರ್ನಾಟಕ ವಿದ್ಯಾಪೀಠಗಳು ವಿಶಿಷ್ಟ ಸ್ವರೂಪವುಳ್ಳವು. ಆ ಮಾದರಿಯ ಸಂಸ್ಥೆಗಳು ಭಾರತದ ಬೇರಾವ ಕಡೆಯೂ ಕಾಣಸಿಗುವುದಿಲ್ಲ. ನಲವತ್ತರ ದಶಕದಲ್ಲಿ ಬೇರೆಬೇರೆ ಪ್ರಾಂತ್ಯಗಳಲ್ಲಿ 'ಜನತಾ ಕಾಲೇಜು' ಎಂಬ ಹೆಸರಿನಿಂದ ಆರಂಭಿಸಲ್ಪಟ್ಟ ಸಂಸ್ಥೆಗಳು ಸ್ವಲ್ಪ ಕಾಲಾನಂತರ ಮುಚ್ಚಲ್ಪಟ್ಟವು. ಏಕೆಂದರೆ ಅಲ್ಲಿ ನಭ ಅವರನ್ನು ಹೋಲುವ ಮಾರ್ಗದರ್ಶಕರು ಇರಲಿಲ್ಲ. ಆದ್ದರಿಂದ ವಿದ್ಯಾಪೀಠಗಳ ಯೋಜನೆ ಕರ್ನಾಟಕಕ್ಕೆ ಮಾತ್ರವೇ ಮೀಸಲಾಯಿತು. ಅವು ಹೊರನೋಟಕ್ಕೆ ನಮ್ಮ ಪ್ರಾಚೀನ ಗುರುಕುಲಗಳನ್ನು ಹೋಲಿದರೂ ಕಾರ್ಯ ವಿಧಾನದಲ್ಲಿ ಫೋಕ್ ಹೈಸ್ಕೂಲುಗಳನ್ನು ಪ್ರತಿಧ್ವನಿಸುತ್ತವೆ. ವಿದ್ಯಾಪೀಠಗಳು ಡೆನ್ಮಾರ್ಕಿನ ಫೋಕ್ ಹೈಸ್ಕೂಲುಗಳ ಇತಿಹಾಸದಿಂದ ಸ್ಫೂರ್ತಿ ಪಡೆದವೇ ವಿನಹ ಅವುಗಳ ಅಂಧಾನುಕರಣೆಯಲ್ಲ. ವಿದ್ಯಾಪೀಠಗಳಲ್ಲಿ ಗ್ರಾಮೀಣ ಜಾನಪದ ಸಂಸ್ಕೃತಿಯ ಹಿನ್ನೆಲೆಯಿದೆ. ಶ್ರಮಜೀವನ ಮತ್ತು ಶಿಸ್ತು ಜತೆಗೂಡಿವೆ. ಅಧ್ಯಯನ ಮತ್ತು ಚಿಂತನೆಗೆ ಹಿತವಾದ ವಾತಾವರಣವಿದೆ. ಮಾರ್ಗದರ್ಶನವಿದೆ. ಹಿನ್ನೆಲೆಯಲ್ಲಿ ಚೇತೋಹಾರಿಯಾದ ಸಮೃದ್ಧವಾಗಿ ಬೆಳೆದ ತೋಟ ತುಟಿಕೆಗಳ ವನ ಸಿರಿಯಿದೆ.

ಗ್ರಾಮಗಳ ಮಧ್ಯೆ ಸ್ಥಾಪಿಸಲ್ಪಟ್ಟ ವಿದ್ಯಾಪೀಠಗಳು ಹಳ್ಳಿಗರಿಗೆ ಕಾಲೇಜುಗಳು ಇದ್ದಂತೆ. ಜನಸಾಮಾನ್ಯರ ಸಾಂಸ್ಕೃತಿಕ ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳೇ ಅವು. ಯುವಕರು ಅಲ್ಲಿಗೆ ಬಂದು ನಾಡಿನ ಸಮಸ್ಯೆಗಳನ್ನು ಕುರಿತು ಚರ್ಚಿಸಿ, ಚಿಂತಿಸಿ, ಪರಿಹಾರವನ್ನು ಕಂಡುಕೊಳ್ಳುವ ವಿಚಾರ ಕೇಂದ್ರಗಳು.

ನಭ ವಿದ್ಯಾಪೀಠಗಳ ಶಿಲ್ಪಿ. ಮೇಲ್ಕಂಡ ವಿಚಾರಗಳು ಅವರ ಮನಸ್ಸಿನ ಆಳದಿಂದ ಬಂದವು. ವಿದ್ಯಾಪೀಠಗಳ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆಯಿತ್ತು. ಗ್ರಾಮ ಜೀವನದಲ್ಲಿ ಬೆಳಕು ಹರಿಸುವ ನಂದಾದೀಪಗಳಾಗಬೇಕೆಂಬುದು ಅವರ ಆಶಯವಾಗಿತ್ತು. ಅವುಗಳು ಸರ್ಕಾರ ಅಥವಾ ಯಾವುದೇ ಸಂಸ್ಥೆಯ ಆಡಳಿತ ಮತ್ತು ಹಣಕಾಸಿನ ಹಿಡಿತದಿಂದ ಬಿಡುಗಡೆಯಾಗಿ ಆರ್ಥಿಕವಾಗಿ ಸ್ವತಂತ್ರವಾಗಬೇಕೆಂಬುದು ಅವರ ಮಹದಾಶಯವಾಗಿತ್ತು. ಆ ದಿಸೆಯಲ್ಲಿ ಅವರು ಕೈಗೊಂಡ ಪ್ರಯತ್ನಗಳು ಮಹತ್ತರವಾದವು. ದೇಶ ವಿದೇಶಗಳಿಂದ ಅವುಗಳ ವಿಸ್ತರಣೆಗಾಗಿ ಸಹಾಯ, ಸಂಪನ್ಮೂಲಗಳನ್ನು ಹುಡುಕಿ ತಂದರು.

ಮೊದಲ ವಿದ್ಯಾಪೀಠ ನಂಜನಗೂಡಿನಲ್ಲಿ ೧೯೪೭ನೇ ಮೇ ತಿಂಗಳು ಆರಂಭಿಸಲ್ಪಟ್ಟಿತು. ನಭ ಅವರೇ ಕಟ್ಟಡದ ನಿರ್ಮಾಣ ಮತ್ತು ಹೊಲ ಗದ್ದೆಗಳನ್ನು ರೂಪಿಸುವಿಕೆ ಇತ್ಯಾದಿ ಕೆಲಸಗಳ ಮೇಲ್ವಿಚಾರಣೆ ವಹಿಸಿಕೊಂಡರು. ಅಲ್ಲಿಯೇ ಮೊದಲ ಆಚಾರ್ಯರೂ ಆದರು. ಅನಂತರ ದಾನಿಗಳೊಬ್ಬರು ನೀಡಿದ ಜಮೀನಿನಲ್ಲಿ ಹಾಸನ ವಿದ್ಯಾಪೀಠ ಆರಂಭವಾಯಿತು. ಶಿವಾರಗುಡ್ಡ ಅನಂತರ ಕೆಂಗೇರಿ ವಿದ್ಯಾಪೀಠ, ತುಂಗಾ, ಏನಿಗದೆಲೆ, ಪಂಪಾ ವಿದ್ಯಾಪೀಠಗಳು ರೂಪುಗೊಂಡುವು. ಯೋಜನೆಯ ಮಹೋದ್ದೇಶಗಳನ್ನು ಅರ್ಥ ಮಾಡಿಕೊಂಡು ನಿಷ್ಠೆಯಿಂದ ದುಡಿಯುವ ಯುವಕರ ತಂಡಗಳನ್ನೇ ಕಟ್ಟಿದರು. ಹೆಚ್ಚು ವರ್ಗಾವಣೆಯಿಲ್ಲದೆ ಅವರನ್ನು ದೀರ್ಘಕಾಲ ಅವರವರ ಸ್ಥಳದಲ್ಲಿಯೇ ಉಳಿಸಿದ್ದರಿಂದ ವಿದ್ಯಾಪೀಠಗಳು ಶೀಘ್ರವಾಗಿ ಬೆಳೆಯಲು ಸಹಾಯಕವಾಯಿತು. ಇಂದು ಅವುಗಳ ಸಂಖ್ಯೆ ೧೪ಕ್ಕೆ ಏರಿದೆ.

ವಿದ್ಯಾಪೀಠಗಳ ಪ್ರಗತಿಯನ್ನು ಕಂಡಾಗ ಅವರ ಮನಸ್ಸು ಹಿಗ್ಗುತ್ತಿತ್ತು; ವೈಫಲ್ಯವನ್ನು ಕಂಡಾಗ ಮನಸ್ಸು ಮುದುಡಿಕೊಳ್ಳುತ್ತಿತ್ತು. ಅವರು ಹೊಸ ಹೊಸ ಪ್ರಯೋಗಗಳನ್ನು ನಡೆಸಿದರು. ಇಂದು ಕೇಂದ್ರ ಸರ್ಕಾರದಿಂದ ಬರುತ್ತಿರುವ ಹೊಸ ಹೊಸ ಯೋಜನೆಯ ಸಾಲುಗಳು ನಭ ಅವರ ಕಾಲದಲ್ಲಿಯೇ ಒಂದಲ್ಲ ಒಂದು ರೂಪದಲ್ಲಿ ಪ್ರಯೋಗಿಸಲ್ಪಟ್ಟು ಅನಂತರ ಕೈಬಿಟ್ಟವು ಎಂಬುದನ್ನು ಅಲ್ಲಲ್ಲಿ ಸಿಗುವ ನಿಷ್ಕ್ರಿಯವಾಗಿರುವ ಕೆಲವು ಪಳೆಯುಳಿಕೆಗಳಲ್ಲಿ ಕಾಣಬಹುದು.

ನಂಜನಗೂಡು ವಿದ್ಯಾಪೀಠದಲ್ಲಿ ದಿವಾನರ ತೋಟದಲ್ಲಿದ್ದ ಉಪಯೋಗವಿಲ್ಲದ ಹಳೆ ಮಾವಿನ ತೋಪನ್ನು ಕಡಿದುಹಾಕಿ ಗದ್ದೆಯನ್ನಾಗಿ ಮಾಡಿ ಅದರಲ್ಲಿ ಬೆಳೆದ ಭತ್ತದ ರಾಶಿಯನ್ನು ಕಣದಲ್ಲಿ ಕಂಡಾಗ ನಭ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಆಗ ವಿದ್ಯಾಪೀಠದಲ್ಲಿ ವಿ. ವೈ. ವೆಂಕಟರಾಯಪ್ಪ ಎಂಬ ದಕ್ಷ ಬೇಸಾಯ ಶಿಕ್ಷಕರಿದ್ದರು.

ನನ್ನನ್ನು ಬೆಂಗಳೂರು ಹತ್ತಿರ ಇರುವ ಉಪಾಧ್ಯಾಯರ ಮೂಲ ಶಿಕ್ಷಣ ಕೇಂದ್ರದ ಆವರಣದಲ್ಲಿ (ಜನತಾ ಕಾಲೇಜು–ಕೇಂದ್ರ ಸರ್ಕಾರದ ಯೋಜನೆ) ಜನತಾ ಕಾಲೇಜನ್ನು ತೆರೆಯಲು ವರ್ಗಾಯಿಸಿದರು. ಒಳ್ಳೆಯ ಕೆಲಸ ಮಾಡುತ್ತಿದ್ದ ಕಾರ್ಯಕರ್ತನನ್ನೇಕೆ ವರ್ಗಾಯಿಸಿದಿರಿ ? ಎಂದು ಒಬ್ಬರು ಪ್ರಶ್ನಿಸಿದರೆ, ಅದಕ್ಕೆ 'ಮತ್ತೊಂದು ಒಳ್ಳೆಯ ಕೆಲಸ ಮಾಡುವುದಕ್ಕೆ' ಎಂದು ನಭ ಉತ್ತರಿಸಿದರಂತೆ.

ಆರಂಭದಲ್ಲಿ ಹಲವಾರು ಕಷ್ಟಗಳನ್ನು ಹೊಸ ಸ್ಥಳದಲ್ಲಿ ಎದುರಾಗಬೇಕಾಯಿತು. ಆದರೂ ಮೊದಲ ತಂಡದ ಯುವಕರಿಗೆ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸಿದೆ. ನಭ (ಆಗ ಸಮಿತಿಯ ಗೌರವಾಧ್ಯಕ್ಷರು) ಬಂದರು. ಸಂಸ್ಥೆಯಲ್ಲಿ ಮಾಡಿದ್ದ ವ್ಯವಸ್ಥೆ ಮತ್ತು ಕೆಲಸ ಕಾರ್ಯಗಳನ್ನು ವೀಕ್ಷಿಸಿ ಹೋದರು. ಒಂದು ವಾರದ ನಂತರ ಅವರಿಂದ ಒಂದು ಪತ್ರ ಬಂದಿತು. ಅದರಲ್ಲಿ 'ಹಲವು ಅಡೆತಡೆಗಳಿದ್ದರೂ ಯಶಸ್ವಿಯಾಗಿ ಕೆಲಸ ನಿರ್ವಹಿಸಿದ್ದೀರಿ. ನನಗೆ ತುಂಬಾ ಸಂತೋಷವಾಗಿದೆ. ಅದಕ್ಕಾಗಿ ಅಭಿನಂದನೆಗಳು' ಎಂದು ಬರೆದರು.

ಕಾರ್ಯಕರ್ತರನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವರಲ್ಲಿರುವ ಕಾರ್ಯದಕ್ಷತೆ ಮತ್ತು ಪ್ರತಿಭೆಯನ್ನು ಗುರುತಿಸುವ ಹಿರಿಯತನ ಅವರಿಗಿತ್ತು. ಒಮ್ಮೆ ಮೆಚ್ಚುಗೆಯಾದರೆ

ಅದು ಬದಲಾಗುತ್ತಿರಲಿಲ್ಲ. ಯಾರು ಏನೇ ಹೇಳಿದರೂ ಹೇಳದೆ, ಕೇಳದೆ, ಪ್ರತ್ಯಕ್ಷ ಪರಿಶೀಲಿಸದೆ ಅಭಿಪ್ರಾಯ ಬದಲಾವಣೆ ಆಗುತ್ತಿರಲಿಲ್ಲ.

ಮತ್ತೊಮ್ಮೆ ವಿದ್ಯಾನಗರಕ್ಕೆ ಬಂದರು. ಹೊರಡುವಾಗ ವಾಹನದಲ್ಲಿ ನನ್ನನ್ನು ಕರೆದುಕೊಂಡು ಹೊರಟರು. ಬೆಂಗಳೂರು ತಲುಪಿದಾಗ 'ಮೈಸೂರಿಗೆ ಬನ್ನಿ' ಎಂದರು. ನನ್ನನ್ನು ಮೈಸೂರಿಗೆ ಏಕೆ ಕರೆದೊಯ್ಯುತ್ತಿದ್ದಾರೆ ಎಂಬುದು ನನಗೆ ತಿಳಿಯದಾಯಿತು. ವಾಹನ ಮದ್ದೂರು ದಾಟುತ್ತಿದ್ದಾಗ ವಿಷಯ ಹೊರಬಂತು. ಶಿವಾರಗುಡ್ಡದಲ್ಲಿ ಫೋರ್ಡ್ ಫೌಂಡೇಷನ್ ಸಹಾಯದಿಂದ ವಿದ್ಯಾಪೀಠವೊಂದಕ್ಕೆ ಅಸ್ತಿಭಾರ ಹಾಕಿದ್ದರು. ಅಲ್ಲಿ ಕೆಲಸ ಆರಂಭಿಸಲು ಕಾರ್ಯಕರ್ತರು ಬೇಕಿತ್ತು, ನಿವೇಶನ ಬೆಟ್ಟದ ಬುಡದಲ್ಲಿದ್ದು ಕೊಣಚಗಿಡದ ಕಾಡಾಗಿತ್ತು. "ನೀವು ಶಿವಾರಗುಡ್ಡಕ್ಕೆ ಹೋಗಬೇಕೆಂಬುದು ನನ್ನ ಅಪೇಕ್ಷೆ, ಅಲ್ಲಿ ಮಾಡಬೇಕಾದ ಕೆಲಸ ತುಂಬಾ ಇದೆ. ನೀವು ಹೊರಡಲು ಸಿದ್ಧರಿರಿ" ಎಂದರು. ನಾನು ಗೊಂದಲಕ್ಕೊಳಗಾದೆ. "ನಾನು ಜನತಾ ಕಾಲೇಜಿಗೆ ಬಂದು ಕೇವಲ ಎರಡು ವರ್ಷ. ಸುತ್ತಣ ಗ್ರಾಮಗಳ ಜನರನ್ನು ಪರಿಚಯ ಮಾಡಿಕೊಂಡಿದ್ದೇನೆ. ತರಬೇತಿ ಕಾರ್ಯಕ್ರಮ ಮುಂದುವರಿಯುತ್ತಿದೆ. ಇನ್ನೂ ಸ್ವಲ್ಪ ಕಾಲ ಅಲ್ಲಿರಬೇಕಾಗುತ್ತದೆ" ಎಂದೆ. "ನೀವು ಆರಂಭಿಸಿರುವ ಕೆಲಸವನ್ನು ಬೇರೆಯವರು ಮುಂದುವರಿಸುತ್ತಾರೆ. ನೀವು ಶಿವಾರಗುಡ್ಡದಲ್ಲಿ ಮಾಡಬೇಕಾದ ಕೆಲಸ ಬಹಳವಿದೆ. ನೀವು ಬರಲೇಬೇಕು" ಎಂದರು. ನಾನು ನಿರುತ್ತರನಾದೆ.

ಶಿವಾರಗುಡ್ಡದ ಕೆಲಸ ಆರಂಭಿಸಿದೆ; ಸುತ್ತಣ ಜನರ ಸಹಕಾರ ಕ್ರಮೇಣ ಗಳಿಸಿಕೊಂಡೆ. ನಭ ಅವರು ಆಗಾಗ್ಗೆ ಬಂದು ಕೆಲಸಗಳನ್ನು ನೋಡಿ ಸಲಹೆ ನೀಡುತ್ತಿದ್ದರು. ಕಾಡಿನ ನಡುವೆ ಒಂದು ವಿದ್ಯಾ ಸಂಸ್ಥೆ ರೂಪುಗೊಳ್ಳುತ್ತಿತ್ತೆಂದು ಅವರಿಗೆ ಅಪಾರ ಸಂತೋಷವಾಗುತ್ತಿತ್ತು.

ಫೋರ್ಡ್ ಫೌಂಡೇಷನ್ ಸಹಾಯ ನಿಧಿಯಿಂದ ಡೆನ್ಮಾರ್ಕ್ ದೇಶಕ್ಕೆ ವಿದ್ಯಾಪೀಠದ ಆಚಾರ್ಯರನ್ನು ಕಳುಹಿಸಿ ಫೋಕ್ ಹೈಸ್ಕೂಲುಗಳ ವ್ಯವಸ್ಥೆಯನ್ನು ಅಭ್ಯಾಸಿಸಿ ಬರಲು ಕಾರ್ಯಕ್ರಮ ರೂಪುಗೊಳ್ಳುತ್ತಿತ್ತು.

ನನ್ನ ಗೆಳೆಯರೊಬ್ಬರು ನಭ ಅವರಿಗೆ ಪದೇ ಪದೇ ಪತ್ರ ಬರೆದು "ನಾನು ಪದವೀಧರನಲ್ಲ. ನನ್ನನ್ನು ವಿದೇಶಕ್ಕೆ ಆಯ್ಕೆಮಾಡುತ್ತೀರಾ ? ಇಲ್ಲವೊ ?" ಎಂದು ಕೇಳಹತ್ತಿದರು. ಉತ್ತರವಾಗಿ ಅವರು 'ಯಾರು ಅರ್ಹರೋ ಅವರನ್ನು ಆಯ್ಕೆ ಮಾಡುತ್ತೇನೆ' ಎಂದು ಬರೆದು ಮುಂದಿನ ಪತ್ರವ್ಯವಹಾರವನ್ನು ನಿಲ್ಲಿಸಬೇಕೆಂದು ತಿಳಿಸಿದರು.

ನಾನೆಂದೂ ಆ ವಿಷಯ ಪ್ರಸ್ತಾಪ ಮಾಡಿದವನಲ್ಲ. ಒಂದು ದಿನ ಬೆಳಿಗ್ಗೆ ಬಂದ ಪತ್ರದಲ್ಲಿ ಆಶ್ಚರ್ಯ ಕಾದಿತ್ತು. "ನಿಮ್ಮನ್ನು ಡೆನ್ಮಾರ್ಕ್ ದೇಶಕ್ಕೆ ಕಳುಹಿಸಲು ಸಮಿತಿ ತೀರ್ಮಾನಿಸಿದೆ. ನೀವು ಸಿದ್ಧತೆ ಮಾಡಿಕೊಳ್ಳಿ" ಎಂದಿತ್ತು.

ಅದಕ್ಕೆ ಮುಂಚೆ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆ ನಡೆದಾಗ ಅವರು ಆಯ್ಕೆಯ ಬಗ್ಗೆ ಕೊಟ್ಟ ನಿರೂಪಣೆ ಹೀಗಿತ್ತು. "ನಮ್ಮಲ್ಲಿ ಮೂರು ಬಗೆಯ ಆಚಾರ್ಯರುಗಳಿದ್ದಾರೆ. ಕೆಲವರು ಸ್ಥಿರವಾಗಿ ನಿಂತು ಬಿಡುತ್ತಾರೆ. ಅವರನ್ನು ಸುಲಭವಾಗಿ ಕದಲಿಸಲು

ಆಗುವುದಿಲ್ಲ. ಅವರಿಂದ ಹೇಗೆ ಕೆಲಸ ಮಾಡಿಸಬೇಕೆಂಬುದೇ ತಿಳಿಯದು. ಅದು ಮೊದಲ ಗುಂಪು. ಮತ್ತೆ ಕೆಲವರನ್ನು ನಾವು ತಳ್ಳುತ್ತಲೇ ಇರಬೇಕು. ನಾವು ನಿಲ್ಲಿಸಿದರೆ ಅವರೂ ನಿಂತು ಬಿಡುತ್ತಾರೆ. ಅವರದು ಎರಡನೆಯ ಗುಂಪು. ಮತ್ತೆ ಕೆಲವು ವ್ಯಕ್ತಿಗಳಿದ್ದಾರೆ. ಅವರನ್ನು ಹೇಗೆ ಹಿಡಿದು ನಿಲ್ಲಿಸಬೇಕು ಎಂಬುದೇ ತಿಳಿಯದಾಗಿದೆ. ಅವರ ವೇಗಕ್ಕೆ ನಾವು ಹೊಂದಿಕೊಳ್ಳುವುದೇ ಕಷ್ಟವಾಗಿದೆ. ಅದು ಮೂರನೆಯ ಗುಂಪು. ಈ ವರ್ಗಕ್ಕೆ "ರಜತಾದ್ರಿ ಸೇರಿದ್ದಾನೆ." ಮಾತಿನಲ್ಲಿ ವ್ಯಂಗ್ಯ ತೀವ್ರತೆಯಿದ್ದರೂ ಯಥಾರ್ಥತೆಯಿತ್ತು. ಇದಕ್ಕಿಂತಲೂ ಉತ್ತಮವಾಗಿ ಒಬ್ಬ ಕಾರ್ಯಕರ್ತನ ಯೋಗ್ಯತೆಯನ್ನು ಅಭಿವ್ಯಕ್ತಿಸಲು ಸಾಧ್ಯವೆ?

ಒಮ್ಮೆ ಹಾಸನ ವಿದ್ಯಾಪೀಠಕ್ಕೆ ಹೋದರು. ಅಲ್ಲಿನ ಆಚಾರ್ಯ ಮತ್ತು ಸಿಬ್ಬಂದಿ ವರ್ಗದವರೊಡನೆ ಹೊಲಗದ್ದೆ ಸುತ್ತಾಡಿ ಬಂದರು. ದನದ ಕೊಟ್ಟಿಗೆಗೆ ಹೋದರು. ಅಲ್ಲಿದ್ದ ಹಾಲು ಕರೆಯುವ ಹಸು ಹೊರಗಿತ್ತು. ಕರು ಮಾತ್ರ ಕೊಟ್ಟಿಗೆಯಲ್ಲಿತ್ತು. ಅವರ ಜತೆಯಲ್ಲಿ ಬಂದಿದ್ದ ಸ್ನೇಹಿತರೊಬ್ಬರು 'ಈ ಕರು ಏಕೆ ಇಷ್ಟು ಕೆಟ್ಟಿದೆ?' ಎಂದರು. ನಭ ನಗುತ್ತಾ "ಜಾತಕ ಕಥೆಗಳಲ್ಲಿ ಒಂದು ಪ್ರಸಂಗವಿದೆ. ನಿಮಗೆ ಗೊತ್ತಿರಬಹುದು" ಎಂದು ಹೇಳಲು ಆರಂಭಿಸಿದರು. 'ಒಂದೆಡೆ ಮೂರು ಕರುಗಳು ಒಟ್ಟಿಗೆ ಮೇಯುತ್ತಿದ್ದುವಂತೆ. ಮೊದಲನೆಯ ಕರು ದಷ್ಟಪುಷ್ಟವಾಗಿತ್ತು. 'ನಮ್ಮಮ್ಮನಿಗೆ ಮೂರು ಮೊಲೆಗಳು ಇವೆ. ಅವುಗಳಲ್ಲಿ ಹಾಲು ಕುಡಿಯುತ್ತೇನೆ' ಎಂದಿತು. ಎರಡನೆ ಕರು 'ಛೇ ಛೆ, ಅದು ಸರಿಯಲ್ಲ. ನಮ್ಮಮ್ಮನಿಗೆ ಇರುವುದು ಎರಡೇ ಮೊಲೆಗಳು' ಎಂದಿತು. ಮೂರನೆಯ ಕರು 'ನೀವು ಹೇಳುವುದೆಲ್ಲಾ ಸುಳ್ಳು! ನಮ್ಮಮ್ಮನಿಗೆ ಮೊಲೆಯೂ ಇಲ್ಲ. ಹಾಲೂ ಇಲ್ಲ' ಎಂದು ಪ್ರತಿಭಟಿಸಿತು. ಮೊದಲ ಕರು ರೈತನ ಮನೆಯಿಂದಲೂ, ಎರಡನೆಯ ಕರು ವರ್ತಕನ ಮನೆಯಿಂದಲೂ, ಮೂರನೆಯ ಕರು ಬ್ರಾಹ್ಮಣನ ಮನೆಯಿಂದಲೂ ಬಂದಿದ್ದವು." ಎಲ್ಲರೂ ಗೊಳ್ಳೆಂದು ನಕ್ಕರು. ಮೊದಲೇ ಕೆಂಪಗಿದ್ದ ಆಚಾರ್ಯರ ಮುಖ ಮತ್ತಷ್ಟು ಕೆಂಪಾಯಿತು.

ನನ್ನ ಪ್ರಾಮಾಣಿಕತೆ ಮತ್ತು ನಿಷ್ಠೆಯಲ್ಲಿ ಅವರಿಗೆ ಅಪಾರ ನಂಬಿಕೆ. ಅವರ ನಿರೀಕ್ಷೆಯ ಮಟ್ಟಕ್ಕೆ ಏರಿ ನಿಲ್ಲಲು ನನ್ನ ಸೇವಾವಧಿಯ ಉದ್ದಕ್ಕೂ ಶ್ರಮಿಸಿದ್ದೇನೆ. ಆದರಿಂದ ನನ್ನ ಮನಸ್ಸಿಗೆ ಸಂತೋಷವೂ ಆತ್ಮಕ್ಕೆ ತೃಪ್ತಿಯೂ ಉಂಟಾಗಿದೆ.

ಕಛೇರಿಯಲ್ಲಿ ಒಮ್ಮೆ ಶಿವಾರಗುಡ್ಡಕ್ಕೆ ೨೦ ಸಾವಿರ ರೂ.ಗಳನ್ನು ವರ್ಗಾಯಿಸಬೇಕೆಂದು ನಭ ಆಜ್ಞೆಮಾಡಿದರು. ನಾನು ಕಳುಹಿಸಿದ ಬೇಡಿಕೆ ಕೇವಲ ೮ ಸಾವಿರ ರೂ.ಗಳಿಗೆ. ಸಂಬಂಧ ಪಟ್ಟ ಗುಮಾಸ್ತರು 'ಸಾರ್, ಅವರು ಕೇಳಿರುವುದು ೮ ಸಾವಿರ....' ಎನ್ನುತ್ತಿದ್ದಂತೆಯೆ ಅವರು ಹಣ ಇಲ್ಲಿರುವ ಬದಲು ವಿದ್ಯಾಪೀಠದ ಲೆಕ್ಕದಲ್ಲಿ ಇರುತ್ತದೆ. ಅಲ್ಲಿ ಒಂದು ಕಾಸೂ ಪೋಲಾಗುವುದಿಲ್ಲ ಕಳುಹಿಸಿಬಿಡಿ' ಎಂದು ಬಿಟ್ಟರು. ಕೆಲವು ಖರ್ಚುಬಾಬುಗಳಿಗೆ ಅವರೇ ಮಧ್ಯೆ ಪ್ರವೇಶಿಸಿ ಅಂಗೀಕಾರವನ್ನು ನೀಡಲು ನಿರ್ದೇಶಿಸುತ್ತಿದ್ದರು.

ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಸುಮಾರು ೧೧ ವರ್ಷಗಳ ಕಾಲ ಸಮಿತಿಯ ಗೌರವಾಧ್ಯಕ್ಷರಾಗಿ ಸೇವೆಸಲ್ಲಿಸಿದರು. ಕಛೇರಿಯ ದ್ವಾರದಲ್ಲಿಯೇ ಕುರ್ಚಿ ಮೇಜು

ಹಾಕಿಸಿ ಕುಳಿತುಕೊಳ್ಳುತ್ತಿದ್ದರು. ನೌಕರರೆಲ್ಲಾ ೧೧ ಘಂಟೆಗೆ ಕಛೇರಿಗೆ ಬಂದರೆ ಅವರು ೧೦-೩೦ಕ್ಕೆ ಬಂದು ಕುಳಿತುಬಿಡುತ್ತಿದ್ದರು. ಎಲ್ಲಾ ಪತ್ರಗಳನ್ನು ತಾವೇ ಖುದ್ದಾಗಿ ನೋಡುತ್ತಿದ್ದರು. ಅದರಲ್ಲೂ ವಿದ್ಯಾಪೀಠದ ಯಾವ ಕಾಗದವೂ ಅವರ ಗಮನಕ್ಕೆ ಬಾರದೆ ಹೋಗುತ್ತಿರಲಿಲ್ಲ.

ವಿದ್ಯಾ ಇಲಾಖೆಯ ನಿರ್ದೇಶಕರಿಂದ ವರ್ಷಕ್ಕೊಮ್ಮೆ ನಮ್ಮ ಕಛೇರಿಯ ತನಿಖೆ ನಡೆಸಲಾಗುತ್ತಿತ್ತು. ಒಂದು ಸಾರಿ ಅಧಿಕಾರಿಗಳು ಶಿವಾರಗುಡ್ಡಕ್ಕೆ ಬಂದರು. ಜತೆಯಲ್ಲಿ ನಭ ಕೂಡ ಇದ್ದರು. ಎಂದಿನಂತೆ ಸಂಸ್ಥೆಯನ್ನು ಸುತ್ತಾಡಿ ಬಂದರು. ಅಧಿಕಾರಿಗಳು 'ಇಂದು ಈ ಆಫೀಸಿನ ತನಿಖೆ ಮುಗಿಸಿ ಬರುತ್ತೇನೆ ಎಂದರು. ನಭ 'ಬನ್ನಿ ಬನ್ನಿ, ರಜತಾದ್ರಿ ಇರುವ ಕಡೆ ತನಿಖೆ ಮಾಡುವುದೇನೂ ಇರುವುದಿಲ್ಲ,' ಎಂದರು. ಅಧಿಕಾರಿಗಳು ಪುಸ್ತಕದಲ್ಲಿ 'ನೋಡಿದ್ದೇನೆ' ಎಂದು ರುಜು ಹಾಕಿ ಜೀಪ್ ಹತ್ತಿ ಹೊರಟು ಹೋದರು.

ಮಹಿಳೆಯರಿಗಾಗಿ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂಬುದು ಅವರ ಆಶಯವಾಗಿತ್ತು. ಶಿವಾರಗುಡ್ಡಕ್ಕೆ ಬಂದಾಗ "ಹಿಂದೆ ವಿದ್ಯಾಪೀಠದಲ್ಲಿ ಗ್ರಾಮ ಮಹಿಳೆಯರಿಗೆ ಮೂರು ನಾಲ್ಕು ದಿವಸಗಳ ಅಲ್ಪಾವಧಿ ತರಗತಿಯನ್ನು ಏರ್ಪಡಿಸಬೇಕೆಂದು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ಹೆಂಗಸರು ಹಳ್ಳಿಗಳಿಂದ ಬರಲಿಲ್ಲ. ಕೇವಲ ೧೦-೧೫ ಮಂದಿಯಾದರೂ ಸರಿ. ಒಂದು ಕಾರ್ಯಕ್ರಮ ಮಾಡುವಿರಾ?' ಎಂದರು.

ನಾನು ಕೆಲವು ವಿಷಯಗಳನ್ನು ಅಕ್ಷರಶಃ ಅರ್ಥಮಾಡಿಕೊಂಡು ಕೆಲಸಕ್ಕೆ ತೊಡಗುವುದು ನನ್ನ ಸ್ವಭಾವ. ಅದು ನನಗಿದ್ದ ಹುಚ್ಚು. ಕೂಡಲೇ ಡೇನಿಷ್ ತಜ್ಞರೊಡನೆ ಮಾತನಾಡಿ ಅವರ ನೆರವಿನಿಂದ ಒಂದು ವಾರದ ಅವಧಿಯಲ್ಲಿಯೇ ಶಿಕ್ಷಣ ಶಿಬಿರ ಏರ್ಪಡಿಸಲು ಸಿದ್ಧತೆ ಮಾಡಿದೆ. ಡೇನಿಷ್ ಮಿತ್ರರು ನನ್ನೊಡನೆ ಸುತ್ತಣ ಗ್ರಾಮಗಳಿಗೆ ಭೇಟಿಮಾಡಿದರು. ಪಟೇಲರು, ಯಜಮಾನರು, ಪ್ರಭಾವ ಶಾಲಿಗಳು—ಇವರನ್ನೇ ನಾವು ಮೊದಲು ಕಂಡು ಅವರ ಮನೆಯ ಹೆಂಗಸರನ್ನು ಐದು ದಿವಸಗಳ ತರಬೇತಿಗಾಗಿ ವಿದ್ಯಾಪೀಠಕ್ಕೆ ಕಳುಹಿಸಬೇಕೆಂದು ಮನವಿ ಮಾಡಿಕೊಂಡೆವು. ನಿಗಧಿಮಾಡಿದ ದಿವಸ ೧೧ ಘಂಟೆಗೆ ಸರಿಯಾಗಿ ಶಿಕ್ಷಣಾರ್ಥಿಗಳನ್ನು ನಿರೀಕ್ಷಿಸುತ್ತಾ ಕುಳಿತೆವು. ಕಾಲಕ್ಕೆ ಸರಿಯಾಗಿ ಯಾರು ಬರಲಿಲ್ಲ. ಡೇನಿಷ್ ಮುಖಂಡರು ನನ್ನೆಡೆಗೆ ನೋಡಿ ಮುಗುಳ್ನಕ್ಕರು. 'ನಮ್ಮ ದೇಶದಲ್ಲಿ ೧೧ ಘಂಟೆಗೆ ಎಂದರೆ ಸರಿಯಾಗಿ ಜನ ಬಂದು ಸೇರುತ್ತಾರೆ' ಎಂದರು. 'ಇದು ಭಾರತ. ಇಲ್ಲಿ ಹಾಗಿಲ್ಲ. ನಾವು ನಿರಾಸೆಗೂ ಸಿದ್ಧರಿರಬೇಕು' ಎಂದು ಉತ್ತರಿಸದೆ ಬೇರೆದಾರಿ ಇರಲಿಲ್ಲ. ಅಂತೂ ೧ ಘಂಟೆಯ ವೇಳೆಗೆ ಹಳ್ಳಿಗಳಿಂದ ಹೆಂಗಸರು ತಂಡಗಳಲ್ಲಿ ಬರಲಾರಂಭಿಸಿದರು. ೨ ಘಂಟೆಯ ವೇಳೆಗೆ ೪೦ ಮಂದಿ ಜಮಾಯಿಸಿದರು. ನಮಗೆ ಹಿಡಿಸಲಾರದಷ್ಟು ಸಂತೋಷ. ವಿಷಯವನ್ನು ನಭ ಅವರಿಗೆ ತಿಳಿಸಿದೆವು. ಆ ಯಶಸ್ಸಿನಲ್ಲಿ ಭಾಗಿಯಾಗಲು ಶಿವಾರಗುಡ್ಡಕ್ಕೆ ಅವರು ಧಾವಿಸಿ ಬಂದರು.

'ನಾನು ಲೋಕಾಭಿರಾಮವಾಗಿ ವಿಷಯವನ್ನು ಪ್ರಸ್ತಾಪಿಸಿದ್ದೆ. ನೀವು ಇಷ್ಟು ಬೇಗ ಕೆಲಸಮಾಡುತ್ತೀರೆಂದು ನಾನು ನಂಬಿರಲಿಲ್ಲ' ಎಂಬ ಮೆಚ್ಚುಗೆಯ ನುಡಿ ಯಾಡಿದರು. ಕೊನೆಯ ದಿವಸ ಅವರು ಶಿಬಿರಾರ್ಥಿಗಳನ್ನು ಕುರಿತು ಮಾತನಾಡಿದರು.

ಆ ಸಂದರ್ಭದಲ್ಲಿ ಮಹಿಳೆಯರು ತಮಗೆ ಐದು ದಿವಸಗಳ ತರಬೇತಿಯಿಂದ ತುಂಬಾ ಪ್ರಯೋಜನವಾಯಿತು ಎಂದು ತಿಳಿಸಿದರು. ವಯಸ್ಸಾದ ಒಬ್ಬ ಮಹಿಳೆ ಎದ್ದುನಿಂತು "ಆಗಾಗ್ಗೆ ಈ ರೀತಿ ಕರೆಸಿ ನಮಗೆ ಬುದ್ಧಿ ಹೇಳಿ ನಾವು ಬರುತ್ತೇವೆ. ಖರ್ಚುಬಾಬಿಗೆ ದುಡ್ಡು ಸಾಲದಿದ್ದರೆ, ಹೇಳಿ ನಾವೇ ನಮ್ಮ ಭತ್ಯ ಜತೆಯಲ್ಲಿ ತರುತ್ತೇವೆ; ಎಂದಳು. ನಭ ಅವರಿಗೆ ಆ ಮಾತುಗಳಿಂದ ಭಾವೋನ್ಮಾದವುಂಟಾಯಿತು. ಗ್ರಾಮಗಳ ಬಗ್ಗೆ ಅವರ ಕನಸುಗಳಲ್ಲಿ ಒಂದು ನೆನಸಾಯಿತೆಂಬ ಉತ್ಕರ್ಷ !

ಅವರು ಕಾರ್ಯ ನಿರ್ವಹಣೆಯಲ್ಲಿ ತೋರುತ್ತಿದ್ದ ಚಾಕಚಕ್ಯತೆ ಜಾಣ್ಮೆಯ ಬಗ್ಗೆ ಒಂದೆರಡು ದುಷ್ಟಾಂತಗಳನ್ನು ಹೇಳದಿದ್ದರೆ ನನಗೆ ಸಮಾಧಾನವಾಗದು.

ಡೇನಿಷ್ ಯೋಜನೆಗೆ ಮೊದಲು ಸಮಿತಿಯವರೇ ಹಣ ಒದಗಿಸಬೇಕೆಂಬ ನಿಯಮವಿತ್ತು. ಅವರ ಯೋಜನೆಗಳು ಬೆಳೆಯುತ್ತಾ ಹೋದವು. ಅವುಗಳಿಗೆ ಹಣ ಕೊಡಲು ಸಮಿತಿಗೆ ಸಾಧ್ಯವಾಗಲಿಲ್ಲ. ನಭ ಅವರು ಡೆನ್ಮಾರ್ಕಿನ ಮರಿಷ್ಠರನ್ನು ಆಹ್ವಾನಿಸಿದರು. ಕೃಷ್ಣರಾಜ ಸಾಗರದ ಬೃಂದಾವನ ವಿಹಾರದಲ್ಲಿ ಒಂದು ಸತ್ಕಾರ ಕೂಟ ಏರ್ಪಡಿಸಿ ಡೇನಿಷ್ ಸಹಯೋಗವನ್ನು ಪ್ರಶಂಸಿಸಿದರು. ಸಮಿತಿಯಿಂದ ನಿರೀಕ್ಷಿಸಲಾಗಿದ್ದ ಹಣವನ್ನು ತಾವೇ ವಹಿಸಿಕೊಳ್ಳಬೇಕೆಂದು ವಿವರಿಸಿದರು. ಅಂದು ಅವರಾಡಿದ ಮಾತುಗಳು ನವುರಾಗಿ ಪ್ರಿಯವಾಗಿ ಅತಿಥಿಗಳ ಮನವೊಲಿಸುವಂತಿದ್ದವು. ಡೇನಿಷ್ ಯೋಜನೆ ಅವರ ಮನವಿಯನ್ನು ಒಪ್ಪಿಕೊಂಡಿತು. ಹೊಸ ಯೋಜನೆಯೊಂದು ಸಿದ್ಧವಾಗಿ ಡೆನ್ಮಾರ್ಕಿನಿಂದ ಹಣ ಸರಕು ಸರಂಜಾಮುಗಳು ಬರತೊಡಗಿದವು.

ಜನಸಂಪರ್ಕ ಬೆಳೆಸಲು ನಾವು ಕೈಗೊಂಡ ಎಲ್ಲ ಕೆಲಸ ಕಾರ್ಯಗಳಿಗೂ ಅವರು ಬೆಂಬಲವಿತ್ತರು. ವರ್ಷಕ್ಕೊಮ್ಮೆ ಜಾತ್ರೆ ನಡೆಸಿ ಉತ್ತಮರಾಸುಗಳಿಗೆ ಬಹುಮಾನ ಕೊಡುವುದು. ಸಹಕಾರ ಸಂಘ ತೆರೆಯುವುದು, ಗ್ರಾಮ ಯುವಕ 'ಕಲಾಮೇಳ' ಏರ್ಪಡಿಸುವುದು. ಕಬ್ಬಿನಗಾಣ ನಡೆಸುವುದು, ಹಳ್ಳಿಗರು ಮದುವೆ ಸಮಾರಂಭಗಳನ್ನು ನಡೆಸಲು ಕಲ್ಯಾಣ ಮಂಟಪವನ್ನು ನಿರ್ಮಿಸುವುದು ಮುಂತಾದ ಚಟುವಟಿಕೆಗಳು ಒಂದಾದ ಮೇಲೊಂದು ಕಾರ್ಯಗತವಾದವು. ಸುತ್ತಣ ಜನರು ವಿದ್ಯಾಪೀಠಕ್ಕೆ ಬಂದು ಹೋಗುವುದು ಹೆಚ್ಚಾಯಿತು. ಆ ಸಂಸ್ಥೆ ನಮ್ಮದು ; ನಮಗಾಗಿ ಇದೆ ಎಂಬ ಭಾವನೆ ಮೂಡಿ ಬಂದಿತು. ನಭ ಅವರು ಪ್ರವಾಸ ಕಾಲದಲ್ಲಿ ಜನರಿಗೆ 'ವಿದ್ಯಾಪೀಠಗಳು ಇರುವುದು ನಿಮಗಾಗಿ ಅವುಗಳನ್ನು ಬೆಳೆಸಬೇಕು' ಎಂದು ಹೇಳುತ್ತಿದ್ದರು.

ಅಂತೆಯೇ ವಿದ್ಯಾಪೀಠ ಒಂದು ಜನತಾ ಚಳುವಳಿಯಾಗಿ ಮಾರ್ಪಟ್ಟುದುದಲ್ಲದೆ, ಗ್ರಾಮಾಂತರ ಶಿಕ್ಷಣದಲ್ಲಿ ಒಂದು ನೂತನ ಪ್ರಯೋಗವಾಗಿ ದೇಶವಿದೇಶಗಳಿಂದ ವಿದ್ವಾಂಸರನ್ನೂ ಸಂಶೋಧಕರನ್ನೂ ಆಕರ್ಷಿಸತೊಡಗಿತು.

ಸಂಸ್ಥೆಯ ಕೆಲಸಗಾರರು ಒಂದು ಕುಟುಂಬದಂತೆಯೂ ನಭ ಅವರು ಒಬ್ಬ ಹಿರಿಯಣ್ಣನಂತೆಯೂ ಭಾವನೆಗಳು ಬೆಳೆದಿದ್ದವು. ಅವರು ವಿದ್ಯಾಪೀಠಗಳಿಗೆ ಬಂದಾಗ ನೌಕರರ ಮನೆಗಳಿಗೆ ಹೋಗಿ ಹೆಂಗಸರು ಮಕ್ಕಳನ್ನು ಮಾತನಾಡಿಸಿ, ಯೋಗಕ್ಷೇಮ ವಿಚಾರಿಸಿ ಅವರು ನೀಡುತ್ತಿದ್ದ ಸತ್ಕಾರವನ್ನು ಸ್ವೀಕರಿಸಿ ಬರುತ್ತಿದ್ದರು. ಅದರಿಂದ ಎಲ್ಲರ ಮನಸ್ಸಿಗೆ ಸಮಾಧಾನವಾಗುತ್ತಿತ್ತಲ್ಲದೆ ಅವರ ಬಗ್ಗೆ ಗೌರವವುಂಟಾಗುತ್ತಿತ್ತು.

ಅವರ ಮನಸ್ಸು ತುಂಬಾ ಮೃದು; ಯಾರ ಮನಸ್ಸನ್ನೂ ನೋಯಿಸಲು ಇಷ್ಟ ಪಡುತ್ತಿರಲಿಲ್ಲ; ದುಡುಕಿ ಆಡಿದ ಮಾತುಗಳಿಗೆ ಕ್ಷಮೆಯಾಚಿಸಲು ಹಿಂಜರಿಯುತ್ತಿರಲಿಲ್ಲ.

ಒಮ್ಮೆ ಹೀಗಾಯಿತು. ಶಿಕ್ಷಣಾರ್ಥಿಯೊಬ್ಬನಿಂದ ಅಶಿಸ್ತಿನ ಸಣ್ಣ ಪ್ರಕರಣ ಸಂಭವಿಸಿತು. ಆ ಬಗ್ಗೆ ಅವನ ಮೇಲೆ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಬಿರುನುಡಿ ಯಾಡಿದರು. ನಾನು 'ಅದನ್ನು ಗಮನಿಸಿದ್ದೇನೆ. ಅವನನ್ನು ಸಮಯವರಿತು ತಿದ್ದುತ್ತೇನೆ. ಶಿಸ್ತಿನ ಕಲ್ಪನೆ ಆಂತರಿಕವಾಗಿ ಮೂಡಿ ಬರಲು ಪ್ರಯತ್ನಿಸಬೇಕು' ಎಂದೆ. ನನ್ನ ಮಾತು ಹೆಚ್ಚಾಯಿತೆಂದು ಕಾಣುತ್ತದೆ ಅವರು ತಟ್ಟನೆ 'ನಿಮ್ಮನ್ನು ವಿದ್ಯಾಪೀಠ ದಲ್ಲಿಟ್ಟು ತಪ್ಪು ಮಾಡಿದೆ' ಎಂದುಬಿಟ್ಟರು. ಆ ಮಾತುಗಳಿಂದ ನಾನು ಸ್ತಬ್ಧನಾಗಿ ನಿಂತೆ. ನಿಷ್ಠೆಯಿಂದ ಕೆಲಸ ಮಾಡಿದ ನನ್ನ ನಂಬಿಕೆ ಪ್ರತಿಷ್ಠೆಗಳು ನುಚ್ಚುನೂರಾದವು. ನಾನು ಮರುಮಾತಾಡಲಿಲ್ಲ. ನನ್ನ ಕಣ್ಣುಗಳು ನೀರು ತುಂಬಿದುವು. ನಭ ಅವರಿಗೆ ಅರಿವಾಯಿತು. ಮೆಲ್ಲಗೆ ನನ್ನ ಹತ್ತಿರ ಬಂದು ಅಣ್ಣ ತಮ್ಮನನ್ನು ಸಂತೈಸುವಂತೆ ಮೈಧಡವಿ 'ನನ್ನ ಮಾತುಗಳಿಂದ ನಿಮ್ಮ ಮನಸ್ಸಿಗೆ ನೋವಾಯಿತು. ನಾನು ಹಾಗೆ ಹೇಳಬಾರದಾಗಿತ್ತು. ದುಡುಕಿದೆ. ಮನಸ್ಸಿಗೆ ಹಚ್ಚಿಕೊಳ್ಳಬೇಡಿ ಕ್ಷಮಿಸಿ' ಎಂದು ಹೇಳಿ ದಡದಡನೆ ನಮ್ಮ ಮನೆಗೆ ಹೋಗಿ ಮನೆಯವರ ಕ್ಷೇಮ ವಿಚಾರಿಸಿ ಹೊರಟರು. ನನ್ನ ಪುಟ್ಟಮಗಳು 'ಭದ್ರಯ್ಯ' ಎಂದು ಕೂಗಿದಳು. ತಾಯಿ 'ಛೇ, ಹಾಗೆ ಅನ್ನಬಾರದು. ಭದ್ರಯ್ಯನವರು ಎನ್ನಬೇಕು' ಎನ್ನುತ್ತಿದ್ದ ಹಾಗೆಯೆ ಅವರು ಹಿಂದಿರುಗಿ ಬಂದು, 'ನನಗೆ ಅವರು, ಇವರು ಎಂಬುದು ಸಲ್ಲದು. ಮಗು ನೀನು ಹೇಳಿದ್ದೇ ಸರಿ. ಹಾಗೆಯೇ ಕೂಗು' ಎಂದು ಮಗುವಿಗೆ ಕೆನ್ನೆ ಹಿಡಿದು ಮುದ್ದಿಸಿ ಹೊರಟು ಹೋದರು.

ಡೆನ್ಮಾರ್ಕಿನ ತಜ್ಞರು ನಮ್ಮ ಜತೆಯಲ್ಲಿ ಕೆಲಸ ಮಾಡುತ್ತಿದ್ದಾಗ ಹಲವಾರು ಸಮಸ್ಯೆಗಳು ತಲೆದೋರುತ್ತಿದ್ದವು. ಒಂದು ಸಾರಿ ಕೋಳಿ ಸಾಕಣಿಕೆಯ ಕಟ್ಟಡಗಳನ್ನು ಕಟ್ಟಲು ಯೋಜನೆಯನ್ನು ಡೇನರು ತಮ್ಮ ಮಾದರಿಯಲ್ಲಿ ಸಿದ್ಧಪಡಿಸಿದರು. ಅದರಂತೆ ಕಟ್ಟಡ ಗುಂಪಾಗಿ ಹತ್ತಿರ ಹತ್ತಿರ ಇರಬೇಕೆಂಬುದು ಅವರ ಇಚ್ಛೆಯಾಗಿತ್ತು. ಅದರಿಂದ ಸಾಗುವಳಿಗೆ ಯೋಗ್ಯವಾದ ಜಮೀನು ನಷ್ಟವಾಗುವ ಸಂಭವವಿತ್ತು. ನಾನು ಕಟ್ಟಡ ಗಳು ಶಿವಾರ ಬೆಟ್ಟದ ಬುಡದಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಕಲ್ಲು ಮಣ್ಣು ಇರುವ ಸ್ಥಳದಲ್ಲಿ ಏರ್ಪಟ್ಟರೆ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಅಭಿಪ್ರಾಯ ಭೇದ ದೊಡ್ಡದಾಯಿತು. ಡೇನಿಷ್ ನಾಯಕ ಮೈಸೂರಿಗೆ ಓಡಿಹೋಗಿ ನಭ ಅವರನ್ನು ಕರೆತಂದ. ಅವರ ವಾದವನ್ನು ನಿಧಾನವಾಗಿ ಆಲಿಸಿದರು. 'ನೀವು ಹೇಳುವುದು ಸರಿ' ಎಂದರು. ಪ್ರತ್ಯೇಕವಾಗಿ ನನ್ನನ್ನು ಕರೆದು ನನ್ನ ಅಭಿಪ್ರಾಯ ಕೇಳಿದರು. ನನ್ನ ವಾದ ಮಂಡಿಸಿದೆ. 'ನೀವು ಹೇಳುವುದೂ ಸರಿ' ಎಂದರು. ನನಗೆ ಗೊಂದಲಕ್ಕಿಟ್ಟುಕೊಂಡಿತು. ಎರಡು ವಾದಗಳನ್ನು ಒಪ್ಪಿಕೊಂಡವರು ತೀರ್ಮಾನ ಹೇಗೆ ಕೊಡುತ್ತಾರೆ ಎಂಬುದು ತಿಳಿಯದಾಯಿತು.

ಜೀಪು ಹತ್ತುವಾಗ ನಮ್ಮಿಬ್ಬರನ್ನು ಕರೆದರು. 'ನೀವಿಬ್ಬರೂ ಜವಾಬ್ದಾರಿಯುಳ್ಳ ವರು. 'ನೀವು ಕುಳಿತು ಚರ್ಚಿಸಿ ಒಂದು ತೀರ್ಮಾನಕ್ಕೆ ಬನ್ನಿ. ಅದರಂತೆ ಮಾಡಿ. ಅದಕ್ಕೆ ನನ್ನ ಸಮ್ಮತಿಯಿದೆ' ಎಂದು ಹೇಳುತ್ತಿದ್ದಾಗಲೇ ಜೀಪು ಹೊರಟಿತು.

ಡೇನಿಷ್ ತಂಡದ ನಾಯಕ ನನ್ನೆಡೆ ನೋಡಿ ಮುಗುಳ್ನಕ್ಕ 'ನಿಮ್ಮ ಭದ್ರಯ್ಯ ಬಹಳ ಚಾಣಾಕ್ಷ! ಏನೆನ್ನುತ್ತೀರಿ?' ಎಂದರು. ಅವರ ಸೂಚನೆಯಂತೆಯೇ ಕೆಲಸ ಯಶಸ್ವಿಯಾಗಿ ನಡೆಯಿತು.

ಸಮಿತಿಯಲ್ಲಿ ಉಪಾಧ್ಯಕ್ಷರಾಗಿದ್ದು ಅನಂತರ ಯೂನೆಸ್ಕೊ ಸಂಸ್ಥೆಯಲ್ಲಿ ಸಮನ್ವಯಾಧಿಕಾರಿಯಾಗಿದ್ದ ಪ್ರೊ|| ಈಗಲ್‌ಟನ್ ನಂಜನಗೂಡು ವಿದ್ಯಾಪೀಠಕ್ಕೆ ಬಂದರು. ಮುಖ್ಯ ಕಟ್ಟಡದ ವಿನ್ಯಾಸವನ್ನು ನೋಡಿ 'ಇದನ್ನು ಹಾಕಿದವರು ಯಾರು' ಎಂದರು. ಉತ್ತರ 'ನ. ಭದ್ರಯ್ಯ!' ಎಂದಿತ್ತು. "ಈ ಕಟ್ಟಡಕ್ಕೆ ಸುಂದರವಾದ ವಿನ್ಯಾಸ ನೀಡಿದವರು 'ಭದ್ರಯ್ಯ'. ಆ ಯೋಜನೆಯನ್ನು ರೂಪಿಸಿದವರು 'ಭದ್ರಯ್ಯ' ಯಾವುದನ್ನೂ ನೋಡಿದರೂ ಕೇಳಿದರೂ 'ಭದ್ರಯ್ಯ' ಎಂಬುದೇ ಉತ್ತರ. ಎಲ್ಲವೂ ಭದ್ರಯ್ಯಮಯ!" ಎಂದು ಉದ್ಗಾರವೆತ್ತಿದರು. ಅದು ನಿಜವೂ ಆಗಿತ್ತು. ಅವರ ಹೆಸರು ಅಂತರರಾಷ್ಟ್ರ ಮಟ್ಟಕ್ಕೆ ಮುಟ್ಟಿತ್ತು. ಸ್ವಲ್ಪ ಕಾಲದಲ್ಲಿಯೇ ಅವರು ತಜ್ಞರಾಗಿ ಆಹ್ವಾನಿಸಲ್ಪಟ್ಟು ವಿದೇಶಗಳಿಗೆ ಹೋದರು.

ನಭ ಅವರು ಮೈಸೂರು ಬಿಟ್ಟನಂತರ ಮತ್ಸರ, ಅಸಹನೆಯಿಂದ ಕುದಿಯುತ್ತಿದ್ದ ನನ್ನ ಸಹೋದ್ಯೋಗಿಗಳು ಒಟ್ಟಾಗಿ ನನ್ನ ಮೇಲೆ ಧಾಳಿ ಮಾಡಿದರು. ಬಗೆ ಬಗೆಯ ಕಿರುಕುಳ ಕೊಟ್ಟರು. ಶಿವಾರಗುಡ್ಡ ವಿದ್ಯಾಪೀಠದಿಂದ ನನ್ನನ್ನು ಹೊರಗೆ ಕಳುಹಿಸಲಾಯ್ತು. ನಭ ಅವರಿಗೆ ಸುದ್ದಿ ಮುಟ್ಟಿತು. ಅವರು 'ಪ್ರಾಮಾಣಿಕನಾಗಿ ನಿಷ್ಠೆಯಿಂದ ಕೆಲಸ ಮಾಡುವವರಿಗೆ ಕಷ್ಟಗಳು ಬರುವುದು ಸಹಜ. ಧೈರ್ಯಗುಂದಬೇಡಿ. ದೇವರು ಬಗೆಹರಿಸುತ್ತಾನೆ' ಎಂದು ನೊಂದು ಬರೆದರು.

ಎರಡು ವರ್ಷಕ್ಕೆ ಎಂದು ವಿದೇಶಿಗಳಿಗೆ ಹೋದವರು ಒಂಭತ್ತು ವರ್ಷಗಳ ಕಾಲ ವಯಸ್ಕ ಶಿಕ್ಷಣ ಕ್ಷೇತ್ರಗಳಲ್ಲಿ ದುಡಿದರು. ನಾನು ಬರೆಯುತ್ತಿದ್ದ ಪತ್ರಗಳಲ್ಲಿ 'ನಿಮ್ಮ ಸೇವೆ ಭಾರತಕ್ಕೆ ಹೆಚ್ಚು ಅಗತ್ಯವಿದೆ. ಮೈಸೂರಿಗೆ ಹಿಂದಿರುಗಿ' ಎಂದು ಬರೆಯುತ್ತಿದ್ದೆ.

ಯುನೆಸ್ಕೊದಿಂದ ಹಿಂದಿರುಗಿ ಮೈಸೂರಿನಲ್ಲಿ ನೆಲೆಸಿದರು. ನನಗೂ ನಿವೃತ್ತಿಯಾಗಿ ಮೈಸೂರಿನಲ್ಲಿಯೇ ನಿಂತೆ. ಮೊದಲು ನಮ್ಮ ನಡುವಿದ್ದ ಅಧಿಕಾರಿ–ನೌಕರ ಸಂಬಂಧಕ್ಕೆ ಬದಲಾಗಿ ನಮ್ಮ ಮಧ್ಯೆ ಆತ್ಮೀಯ ಮಧುರ ಸ್ನೇಹ ಬೆಳೆದು ಬಂದಿತು. ವಿದ್ಯಾಪೀಠದ ಸುಧಾರಣೆಗಾಗಿ ನಿಯಮಿಸಲ್ಪಟ್ಟ ಎರಡು ಸಮಿತಿಗಳಲ್ಲಿಯೂ ನಾನು ಸದಸ್ಯನಾಗಿದ್ದೆ; ವರದಿಗಾರನಾಗಿದ್ದೆ. ನನ್ನ ಅಭಿಪ್ರಾಯಗಳಿಗೆ ಮನ್ನಣೆ ಕೊಡುತ್ತಿದ್ದರು.

ನನ್ನ ಮಗಳ ಮದುವೆಗೆ ಏರ್ಪಾಡಾಗಿತ್ತು. ಸರ್ಕಾರದಿಂದ ಸಮಿತಿಯ ಮೂಲಕ ನನಗೆ ಬರಬೇಕಿದ್ದ ಹಣ ಸಕಾಲದಲ್ಲಿ ಬರಲಿಲ್ಲ. ನಭ ಅವರೂ ಫೋನ್ ಮಾಡಿದರು. ಆದರೂ ಪ್ರಯೋಜನವಾಗಲಿಲ್ಲ. 'ನೀವು ಅನಂತರ ಬಂದು ನೋಡಿ' ಎಂದರು. ನಾನು ಹೋಗಲಿಲ್ಲ. ಒಂದು ದಿನ ನಭ ಅವರು ಶಾಂತಿಯವರೊಡನೆ ನಮ್ಮ ಮನೆಗೆ ಬಂದು "ಹಣದ ಕೊರತೆಗಾಗಿ ನಿಮ್ಮ ಮಗಳ ಮದುವೆ ನಿಲ್ಲಿಸಬೇಡಿ. ಸದ್ಯಕ್ಕೆ ಹಣ ಕೊಡುತ್ತೇವೆ. ನಿಮಗೆ ದೊರೆತಾಗ ಹಿಂದಿರುಗಿಸಿ" ಎಂದು ಬ್ಯಾಂಕ್ ಚೆಕ್ ಇದ್ದ ಕವರನ್ನು ಕೊಟ್ಟು "ಮದುವೆಯ ವೇಳೆಗೆ ನಾವು ವಿದೇಶದಲ್ಲಿ ಇರುತ್ತೇವೆ. ವಧು ವರರಿಗೆ ದೇವರು ಶುಭ ತರಲಿ" ಎಂದು ಹೇಳಿ ಹೊರಟು ಹೋಗಿದ್ದರು.

ನಭ ಅವರಿಗೆ ಸನ್ಮಾನಗಳು ಒಂದರ ಮೇಲೊಂದು ಬರ ತೊಡಗಿದವು. ರಾಜ್ಯ ಪ್ರಶಸ್ತಿ ದೊರಕಿತು. ನೆಹರೂ ಸಾಕ್ಷರತಾ ಪ್ರಶಸ್ತಿ ದೊರೆತಾಗ ರೇಡಿಯೋ ಸಂದರ್ಶನ ವೊಂದು ಏರ್ಪಟ್ಟಿತ್ತು. ಆಗ ನಾನು "ನೀವು ವಯಸ್ಕರ ಶಿಕ್ಷಣವನ್ನೇ ಜೀವಿತದ ಗುರಿಯನ್ನಾಗಿ ಇಟ್ಟುಕೊಂಡಿದ್ದೀರಿ. ಆ ಮಹಾಕಾರ್ಯಕ್ಕೆ ನಿಮ್ಮನ್ನೇ ಅರ್ಪಿಸಿಕೊಂಡಿರಿ. ಆ ದಿಸೆಯಲ್ಲಿ ನಿಮ್ಮ ಅಭಿಪ್ರಾಯಗಳು, ಆದರ್ಶಗಳು, ಯೋಜನೆಗಳು ರೂಪುಗೊಂಡಿವೆ. ನಿಮ್ಮ ಚಿಂತನೆ, ಅಧ್ಯಯಗಳು ಅಪಾರ. ಅವುಗಳ ಪರಿಚಯ ಇಂದಿನ ಯುವಜನತೆಗೆ ಆಗಬೇಕು. ನಿಮ್ಮ ನಂತರ ನಿಮ್ಮ ನೆನಪು ತರಲು ಒಂದು ಸಂಶೋಧನಾ ಸಂಸ್ಥೆ, ತರಬೇತಿ ಸಂಸ್ಥೆ, ಒಂದು ಗ್ರಂಥಾಲಯ—ಈ ಮಾದರಿಯ ಕಾರ್ಯಕ್ರಮವೊಂದನ್ನು ರೂಪಿಸಬೇಕೆಂಬುದು ನನ್ನ ಅಭಿಪ್ರಾಯ. ನಿಮ್ಮ ಅನಿಸಿಕೆಗಳೇನು?' ಎಂದು ಪ್ರಶ್ನಿಸಿದೆ. ಅದಕ್ಕೆ "ನಿಮ್ಮ ಅಭಿಪ್ರಾಯ ಸರಿ. ಆದರೆ ಅಂತಹ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸುವಂತಹ ನಿಷ್ಠಾವಂತ ಜನರೆಲ್ಲಿದ್ದಾರೆ? ವಯಸ್ಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವ ಕೆಲಸವೂ ಸಮರ್ಪಕವಾಗಿ ನಡೆಯುತ್ತಿಲ್ಲ. ಅದಕ್ಕೆ ಕಾರಣ ಕಾರ್ಯಕರ್ತರಿಗೆ ತಮ್ಮ ಕೆಲಸವೇನೆಂಬುದೇ ಗೊತ್ತಿಲ್ಲ. ಅವರಿಗೆ ತರಬೇತಿಯಿಲ್ಲ" ಎಂದು ನೊಂದು ನುಡಿದರು.

ಕಾರ್ಯಕರ್ತರ ತರಬೇತಿಗಾಗಿ ಸಮಿತಿ ಮತ್ತು ಡೆನ್ಮಾರ್ಕಿನ ಫೋಕ್ ಹೈಸ್ಕೂಲು ಸಂಸ್ಥೆಗಳ ಸಹ ಯೋಗದಿಂದ ರೂಪುಗೊಳ್ಳುತ್ತಿರುವ ಯೋಜನೆಯನ್ನು ಚರ್ಚಿಸಲು ನಭ ಅವರನ್ನು ಕೆಲವು ವಾರಗಳ ಹಿಂದೆ ಭೇಟಿ ಮಾಡಿದ್ದೆ. ನಾನು ಸಿದ್ಧಪಡಿಸಿದ್ದ ಕರಡು ಯೋಜನೆಯನ್ನು ಆಮೂಲಾಗ್ರವಾಗಿ ಓದಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು; ಕೆಲವು ಭಾಗಗಳನ್ನು ಟೀಕಿಸಿದರು; ತಿದ್ದುವಂತೆ ಹೇಳಿದರು. ಯೋಜನೆ ಯನ್ನು ನವೀಕರಿಸುವಾಗ ಅವರ ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳಲು ಮರೆಯಲಿಲ್ಲ.

ನನ್ನ ಪುಸ್ತಕ 'ವಯಸ್ಕರ ಶಿಕ್ಷಣ ವಿಚಾರಧಾರೆ' ಎಂಬುದು ಮುದ್ರಣದಿಂದ ಹೊರಬಂತು. ಅದರಲ್ಲಿ ನಭ ಅವರ ಬಗ್ಗೆ ಒಂದು ವ್ಯಕ್ತಿ ಚಿತ್ರ ಅಥವಾ ನುಡಿ ಚಿತ್ರ ಸೇರಿದೆ. ಅದನ್ನು ಅವರಿಗೆ ತೋರಿಸಿದೆ. ಅದರಲ್ಲಿ ನಭ ಅವರು ವಯಸ್ಕರ ಶಿಕ್ಷಣ ಸಮಿತಿಯನ್ನು ಒಂದು ಪ್ರಯೋಗಾಲಯವನ್ನಾಗಿ ಮಾಡಿಕೊಂಡಿದ್ದರು. ಹಲವಾರು ಸಂಶೋಧನೆಗಳು ಯಶಸ್ವಿಯಾಗಿ ಕೊನೆಗೊಂಡವು ಎಂದು ಬರೆದಿದ್ದೆ. "ಟಿಪ್ಪಣಿ ಬಹಳ ಚಿಕ್ಕವಾದರೂ ಚೆನ್ನಾಗಿದೆ. ನಿಮ್ಮ ಬರವಣಿಗೆ ನಿಮ್ಮ ಮಾತಿಗಿಂತಲೂ ಹೆಚ್ಚು ಸಂಗ್ರಹ ವಾಗಿರುತ್ತದೆ, ಅಡಕವಾಗಿರುತ್ತದೆ" ಎಂದು ಪ್ರಶಂಸಿಸಿದರು.

ಅವರ ಮರಣದ ವಾರ್ತೆಯನ್ನು ಕೇಳಿದಾಗ ಸಂಜೆ ಏಳುಘಂಟೆ. ಸುದ್ದಿ ಆಕಸ್ಮಿಕ ವಲ್ಲದಿದ್ದರೂ ನನ್ನ ದೇಹದಲ್ಲಿ ಲಘು ಕಂಪನವುಂಟಾಯಿತು. ನಾನೂ ನನ್ನ ಹೆಂಡತಿಯೂ ಜಯಲಕ್ಷ್ಮೀಪುರದಲ್ಲಿರುವ ಅವರ ಮನೆಗೆ ಧಾವಿಸಿದೆವು. ಅಲ್ಲಿ ನಮ್ಮ ನಿರೀಕ್ಷೆಗೆ ವಿರುದ್ಧವಾಗಿ ಯಾರೂ ಇರಲಿಲ್ಲ, ಎಲ್ಲವೂ ಮೌನ. ಸೊಂಪಾಗಿ ಅವರು ಬೆಳೆಸಿದ್ದ ತೆಂಗು ಬಾಳೆ ಅಡಿಕೆ ಹೂಗಿಡಗಳು ನಸುಗತ್ತಲೆಯಲ್ಲಿ ಶೋಕದಿಂದ ಬಾಗಿದ್ದಂತೆ ಕಂಡವು. ಸಂಸ್ಕಾರ ಕ್ರಿಯೆಗಳು ಬೆಳಗ್ಗೆ ಮುಗಿದು ಹೋಗಿದ್ದವು.

ನಮ್ಮನ್ನು ಶ್ರೀಮತಿ ಶಾಂತಿಯವರು ಒಳಗೆ ಬರಮಾಡಿಕೊಂಡರು. ಅವರು ನಿಧಾನವಾಗಿ ಶಾಂತವಾಗಿ ಮಾತನಾಡಿದರು. ದುಗುಡ ತುಂಬಿದ ನನ್ನ ಮನಸ್ಸೂ ಶಾಂತವಾಯಿತು. "ಆತ್ಮ ಹಳೆಯ ಕವಚವನ್ನು ಬಿಟ್ಟು ಬೇರೊಂದು ಧಾರಣೆಮಾಡಲು ಹೋಯಿತು. ಅಷ್ಟೇ" ಎಂದರು. ಪಾಶ್ಚಾತ್ಯ ಮಹಿಳೆಯೊಬ್ಬಳು ಭಾರತೀಯ ತತ್ತ್ವಜ್ಞಾನವನ್ನು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳೆ ಎಂಬುದಲ್ಲದೆ ಕಾರ್ಯತಹ ಅನುಷ್ಠಾನಕ್ಕೆ ತಂದಿದ್ದಾಳೆ ಎಂಬ ಬಗ್ಗೆ ನಮಗೆ ಮೆಚ್ಚುಗೆಯಾಯಿತು. ನಾನು ತೆಗೆದುಕೊಂಡು ಹೋಗಿದ್ದ ಒಂದು ಹೂಮಾಲೆಯನ್ನು ಅವರು ಕುಳಿತುಕೊಳ್ಳುತ್ತಿದ್ದ ಕುರ್ಚಿಯ ಮೇಲಿಟ್ಟೆ. ಶಾಂತಿಯವರು ಒಳಗೆ ಹೋಗಿ ನಭ ಅವರ ಒಂದು ಚಿಕ್ಕ ಫೋಟೋ ತಂದಿಟ್ಟರು. ಮಾಲೆಯನ್ನು ಅದಕ್ಕೆ ಅರ್ಪಿಸಿ ನಮಿಸಿದೆವು.

ಸ್ವಲ್ಪಕಾಲದ ಹಿಂದೆ ನಭ "ರಜತಾದ್ರಿ, ನೀವು ಕಟ್ಟಿಸಿರುವ ಹೊಸಮನೆ ನೋಡಬೇಕೆಂದಿದ್ದೇವೆ. ವಿಳಾಸ ಮಾತ್ರ ಕೊಟ್ಟರೆ ಸಾಲದು ಹುಡುಕುವುದು ಕಷ್ಟ. ನೀವೇ ಬಂದು ಕರೆದುಕೊಂಡು ಹೋಗಿ" ಎಂದರು ನಾನು ಒಪ್ಪಿಕೊಂಡೆ. ಆದರೆ ನಿಧಾನಿಸಿ ತಪ್ಪು ಮಾಡಿದೆ. ನಾನು ಹೊಸ ಮನೆಗೆ ಆಹ್ವಾನಿಸುವುದಕ್ಕೆ ಮುನ್ನವೇ ಅವರು ಬೇರೊಂದು ಹೊಸ ಮನೆಗೆ ಹೊರಟುಹೋದರು!

ಅವರು ಈಗ ನಮ್ಮೊಡನೆ ಇಲ್ಲದಿದ್ದರೂ ಅವರ ವ್ಯಕ್ತಿತ್ವದ ಪ್ರಭಾವ ಸಮಿತಿಯ, ವಿದ್ಯಾಸಂಸ್ಥೆಗಳ ಮೇಲೆ ಅಚ್ಚಳಿಯದೆ ಉಳಿದಿದೆ, ಅವರ ವ್ಯಕ್ತಿತ್ವ ನಮ್ಮ ಸ್ಮೃತಿಪಥದಲ್ಲಿ ಸ್ಥಿರವಾಗಿ ಬೆಳಗುತ್ತಿದೆ.

---

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

ಗಾಂಧೀಜಿ

# ವಯಸ್ಕರ ಶಿಕ್ಷಣ ಮತ್ತು ಭದ್ರಯ್ಯನವರು

**ಟಿ. ಆರ್. ನಾಗಪ್ಪ**

೧೯೬೮ರ ನವಂಬರಿನಲ್ಲಿ ಬ್ಯಾಂಕಾಕಿನಲ್ಲಿ ಕ್ರಿಯಾತ್ಮಕ ಸಾಕ್ಷರತಾ ತಜ್ಞರ ಕಾರ್ಯಾಗಾರ ನಡೆಯಿತು. ನಾನು ಭಾರತ ಸರಕಾರದ ಪ್ರತಿನಿಧಿಯಾಗಿ ಈ ಕಾರ್ಯಾಗಾರದಲ್ಲಿ ಪಾಲುಗೊಂಡೆ. ಕಾರ್ಯಾಗಾರದ ನಿರ್ದೇಶಕರು ಎಲ್ಲರಂತೆ ನನ್ನ ಪರಿಚಯು ಮಾಡಿಕೊಂಡರು. ನಾನು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯು ಪರವಾಗಿ ಬಂದಿದ್ದೇನೆಂದು ಹೇಳಿದೆ. 'Do you come from the land of M/s T. Krishnamurthy, S. V. Srinivasarao and N. Bhadriah' ಎಂದು ಕೇಳಿದರು. ಈ ಮೂರು ಮಂದಿ ತಜ್ಞರು ಸಮಿತಿಯ ಕೀರ್ತಿಪತಾಕೆಯನ್ನು ಹೊರ ದೇಶಗಳಲ್ಲಿ ಎತ್ತಿಹಿಡಿದಿರುವರು. ಭದ್ರಯ್ಯನವರ ಸೇವಾ ಪ್ರಮಾಣ ನಿರ್ದೇಶಕರ ಮಾತಿನಲ್ಲಿ ಅಡಗಿದೆ. ಕರ್ನಾಟಕಕ್ಕೆ ಮತ್ತು ಸಮಿತಿಗೆ ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಇನ್ನೇನು ಬೇಕು. ಭದ್ರಯ್ಯನವರಿಗೆ 'ನಾನು ವಯಸ್ಕರ ಶಿಕ್ಷಣ ತಜ್ಞ' ಎಂಬ ಅಹಂಭಾವ ಇರಲಿಲ್ಲ. 'ನಾನು ವಯಸ್ಕರ ಶಿಕ್ಷಣದಲ್ಲಿ ಮೊದಲ ವಿದ್ಯಾರ್ಥಿ' ಎಂಬುದಾಗಿ ಹೇಳುತ್ತಿದ್ದುದುಂಟು. ಅವರು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದರು. ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯು ಕಾರ್ಯದರ್ಶಿಯಾಗಿದ್ದರು. ಅನಂತರ ಕೇಂದ್ರ ಸಮಿತಿಯು ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಕಡೆಗೆ ಸಮಿತಿಯು ಅಧ್ಯಕ್ಷರಾಗಿ ಅದರ ಕೀರ್ತಿ ವಿದೇಶಗಳಲ್ಲ ಹರಡುವಂತೆ ಮಾಡಿದರು. ವಿದ್ಯಾಪೀಠ ಉಪಸಮಿತಿಯ ಕಾರ್ಯದರ್ಶಿಯಾಗಿ ವಿದ್ಯಾಪೀಠ ಯೋಜನೆಯನ್ನು ರೂಪಿಸಿದರು. ಇಂತಹ ಉದಾತ್ತ ವ್ಯಕ್ತಿ ತನ್ನ ಕೈಕೆಳಗೆ ಕೆಲಸ ಮಾಡುತ್ತಿದವರ ಹೆಗಲ ಮೇಲೆ ಕೈ ಹಾಕಿ ಮೊದಲು ಅವರ ಯೋಗಕ್ಷೇಮ ವಿಚಾರಿಸುತ್ತಿದ್ದರು. ಇದು ಅವರಿಗೆ ತನ್ನ ಕಾರ್ಯಕರ್ತರಲ್ಲಿದ್ದ ವಿಶ್ವಾಸ

ಮತ್ತು ಸಮಾನತೆಯ ಪ್ರತೀಕ. ಇದು ನಿಜವಾದ ವಯಸ್ಕರ ಶಿಕ್ಷಣ ಕಾರ್ಯಕರ್ತನ ಗುಣ. ಇಂದು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಆಶ್ರಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕರ್ತರ ಬೃಹತ್ ಸೇವೆ ಅಸ್ತಿತ್ವಕ್ಕೆ ಬಂದಿದೆ. ಆದರೆ ಎಷ್ಟು ಮಂದಿ ಭದ್ರಯ್ಯನವರ ಆದರ್ಶ ಗುರಿಗಳನ್ನು ಹೊಂದಿದ್ದಾರೆ? ಭದ್ರಯ್ಯನವರ ಸೌಜನ್ಯ ಅನೇಕರನ್ನು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸೆಳೆಯಿತು. ಅಧಿಕಾರವರ್ಗದವರಲ್ಲಿ ಅನೇಕರು ಮತ್ತು ಖಾಸಗಿ ಮುಖಂಡರು ವಯಸ್ಕರ ಶಿಕ್ಷಣ ಸಮಿತಿ ತಮ್ಮದು ಎಂಬ ಭಾವನೆ ತಾಳಿದ್ದರು. ವಯಸ್ಕರ ಶಿಕ್ಷಣದ ಹೆಸರನ್ನು ಕೇಳಿದರೆ ಆಗದವರು ಭದ್ರಯ್ಯನವರ ಸಂಪರ್ಕದಿಂದ ಅವರ ಮಿತ್ರರಾದರು. ಅವರ ಕಾರ್ಯಕ್ಕೆ ಹೆಗಲುಕೊಟ್ಟು ದುಡಿದರು. ಜಿಲ್ಲಾಧಿಕಾರಿಗಳಾಗಿದ್ದ ತಿಪ್ಪೇರುದ್ರಯ್ಯನವರು ಹಳ್ಳಿಯಲ್ಲಿ ಗಾಡಿಯ ನೊಗದ ಮೇಲೆ ಕುಳಿತು ಹಳ್ಳಿಗರಿಗೆ ಗೋವಿನ ಹಾಡು ಹೇಳಿದ ನಿದರ್ಶನಗಳುಂಟು. ಹೀಗಾಗಿ ವಯಸ್ಕರ ಶಿಕ್ಷಣ ಸಮಿತಿ ಬೆಳೆಯಿತು. ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆಯಿತು. ಇಷ್ಟೆಲ್ಲಾ ಆದದ್ದು ಅದಕ್ಕಿದ್ದ ಧನಬಲದಿಂದಲ್ಲ. ಜನಬಲದಿಂದ. ಇಂದು ಧನಬಲ ಇದೆ. ಅಷ್ಟಿದ್ದರೆ ಸಾಲದೆ? ಇನ್ನೇಕೆ ಜನಬಲ ಬೇಕು? ಯುನೆಸ್ಕೊ ಸಮಿತಿಯನ್ನು 'Associated project' ಎಂದು ಪರಿಗಣಿಸಿತು. ಯುನೆಸ್ಕೊ ಸಮಿತಿಯ ಪರವಾಗಿ ವಿದೇಶಗಳಲ್ಲಿ ಪ್ರಚಾರ ನಡೆಸಿ ಸಂಗ್ರಹಿಸಿದ ಹಣವನ್ನು 'ಉಡುಗೊರೆ ಚೀಟಿ'ಗಳ ಮೂಲಕ ಕಳುಹಿಸುತ್ತಿತ್ತು.

ಸಮಿತಿ ತನ್ನದೇ ಆದ ಪ್ರಕಟಣಾ ಶಾಖೆಯನ್ನು ಹೊಂದಿತ್ತು. ಅದು ತನಗೆ ಬೇಕಾದ ಪಠ್ಯಪುಸ್ತಕ ಮತ್ತು ಇತರ ಪೂರಕ ಪುಸ್ತಕಗಳನ್ನು ಪ್ರಕಟಿಸುತ್ತಿತ್ತು. ಪ್ರಕಟಣೆಗಳಿಂದ ಬರುವ ಲಾಭವನ್ನು ಪ್ರತ್ಯೇಕವಾಗಿಟ್ಟು ಈ ವಿಭಾಗವನ್ನು ಸ್ವತಂತ್ರವಾಗಿ ತನ್ನ ಕಾಲಿನ ಮೇಲೆ ನಿಲ್ಲುವಂತೆ ಮಾಡುವುದು ಸಮಿತಿಯ ಸ್ಥಾಪಕ ಹಾಗೂ ಪ್ರಧಾನ ಕಾರ್ಯದರ್ಶಿ ಆಗಿದ್ದ ಟಿ. ಕೃಷ್ಣಮೂರ್ತಿಯವರ ಆಶಯವಾಗಿತ್ತು. ಸಮಿತಿಯ ಪ್ರಕಟಣೆಗಳು ಮೈಸೂರಿನ ಹಲವಾರು ಮುದ್ರಣಾಲಯಗಳಲ್ಲಿ ಅಚ್ಚಾಗುತ್ತಿದ್ದವು. ಪ್ರತಿವಾರ ಬೆಳಕು ಪತ್ರಿಕೆ ಪ್ರಕಟವಾಗಬೇಕಾಗಿತ್ತು. ಹೊರಗಡೆ ಮುದ್ರಣಾಲಯಗಳಲ್ಲಿ ಅಚ್ಚು ಮಾಡಿಸುವುದು ತನ್ನದೇ ಆದ ಸಮಸ್ಯೆಗಳನ್ನು ಹೊಂದಿತ್ತು. ಮುದ್ರಣಾಲಯದ ಅನುಭವ ಭದ್ರಯ್ಯನವರಿತ್ತು. ಯುನೆಸ್ಕೊ ಉಡುಗೊರೆ ಚೀಟಿಯಿಂದ ಮುದ್ರಣಾಲಯದ ಯಂತ್ರಗಳನ್ನು ಕೊಂಡರು. ಅವರೇ ಸ್ವತಃ ನಿಂತು ತಮ್ಮ ನೇತೃತ್ವದಲ್ಲಿ ಮುದ್ರಣಾಲಯದ ಯಂತ್ರಗಳನ್ನು ಜೋಡಿಸಲು ವ್ಯವಸ್ಥೆ ಮಾಡಿದರು. ಅವರಿಗೆ ಯಾವ ಕೆಲಸವೂ ಸಣ್ಣದಲ್ಲ. ಎಲ್ಲವೂ ಅಚ್ಚುಕಟ್ಟಾಗಿ ಆಗಬೇಕು ಎಂಬುದು ಅವರ ದೃಷ್ಟಿ.

ಸಮಿತಿಯ ಪ್ರಕಟಣೆಗಳೆಲ್ಲವೂ ಒಂದು ಕಾಲಕ್ಕೆ ತನ್ನ ಮುದ್ರಣಾಲಯದಲ್ಲೇ ಪ್ರಕಟವಾಗುತ್ತಿದ್ದವು. ಇಂದಿಗೆ ಮುದ್ರಣಾಲಯಕ್ಕೆ ಸಾಕಷ್ಟು ವರ್ಷಗಳಾಗಿದ್ದರೂ ಇತರ ಮುದ್ರಣಾಲಯಗಳಂತೆ ಭದ್ರಯ್ಯನವರ ನಿರೀಕ್ಷೆಗೆ ಬರಲಿಲ್ಲ.

ಸಮಿತಿಗೆ ಸರಕಾರದ ಸಹಾಯ ಸಾಕಷ್ಟು ಇರಲಿಲ್ಲ. ಆದ್ದರಿಂದ ಪ್ರತಿಯೊಂದು ಕಾಸನ್ನೂ ವಿಚಕ್ಷಣೆಯಿಂದ ಮತ್ತು ಜಾಗರೂಕತೆಯಿಂದ ಖರ್ಚು ಮಾಡಬೇಕೆಂಬುದು

ಭದ್ರಯ್ಯನವರ ಇಷ್ಟ. ಮುದ್ರಣಾಲಯದ ಯಂತ್ರಗಳು ಪ್ಯಾಕ್ ಆಗಿ ಬಂದಿದ್ದವಷ್ಟೆ. ಮರಗೆಲಸದವನ ಸಹಾಯದಿಂದ ಪ್ಯಾಕ್ ಆಗಿ ಬಂದಿದ್ದ ಮರವನ್ನು ಉಪಯೋಗಿಸಿ ಮುದ್ರಣಾಲಯಕ್ಕೆ ಬೇಕಾದ ಸಾಮಗ್ರಿಗಳನ್ನು ತಯಾರು ಮಾಡಿಸಿದರು. ಉಳಿದ ಮರದಲ್ಲಿ ವಾಚನಾಲಯಕ್ಕೆ ಒಂದು ದೊಡ್ಡ ಮೇಜನ್ನು ಮಾಡಿಸಿದರು. ಆಫೀಸಿನ ಕಟ್ಟಡದ ಮುಂಭಾಗ (ಪೋರ್ಟಿಕೊ) ಬಿದ್ದಾಗ ಈ ಮೇಜು ಅದಕ್ಕೆ ಸಿಕ್ಕಿ ಸಹ ಮುರಿದಿರಬೇಕು.

ಸಾಕ್ಷರತೆ, ಪುಸ್ತಕ ಭಂಡಾರ ಮುಂತಾದ ಕಾರ್ಯಕ್ರಮಗಳು ವ್ಯಕ್ತಿ ವಿಕಾಸ ಸಾಧನಗಳು. ಆದರೆ ಈ ಕಾರ್ಯಕ್ರಮಗಳು ಕೂಡಲೇ ಫಲ ಕೊಡುವಂತಿಲ್ಲ. ಗ್ರಾಮೀಣರ ಸಂಪರ್ಕ ಬೆಳಸಿ ಅವರ ಕಷ್ಟಸುಖಗಳನ್ನು ಅರಿತುಕೊಳ್ಳಬೇಕು. ಅವುಗಳನ್ನು ಸಾಧ್ಯವಾದಷ್ಟು ಪರಿಹರಿಸಲು ಯತ್ನಿಸುವುದು ಅಗತ್ಯ. ಜೊತೆಗೆ ಅವರಿಗೆ ಬದುಕುವ ಹೊಸ ಮಾರ್ಗ ತೋರಿಸುವುದು ಅನಿವಾರ್ಯ. ವಿದ್ಯಾರ್ಥಿಗಳು ರೈತನ ಹಣದಿಂದ ವಿದ್ಯಾರ್ಜನೆ ಮಾಡಿರುವರು. ಋಣಮುಕ್ತರಾಗಲು ಅವರು ಗ್ರಾಮೀಣರ ಸೇವೆ ಸಲ್ಲಿಸಬೇಕು. ವಿದ್ಯಾರ್ಥಿಗಳು ಬೇಸಿಗೆ ರಜಾ ಕಾಲದಲ್ಲಿ ತಮ್ಮ ವಿರಾಮಕಾಲವನ್ನು ಗ್ರಾಮೀಣರ ಸೇವೆಯಲ್ಲಿ ಕಳೆಯಬಹುದು. ಈ ದೃಷ್ಟಿಯಿಂದ ಬೇಸಿಗೆ ಗ್ರಾಮ ಸೇವಾ ಶಿಬಿರ ಯೋಜನೆಯನ್ನು ತಯಾರಿಸಿದ್ದು ಅವರ ದೂರ ದೃಷ್ಟಿಯ ಫಲ. ಈ ಯೋಜನೆಯ ಪ್ರಕಾರ ೧೫–೨೦ ಮಂದಿ ಪ್ರೌಢಶಾಲಾ ವಿದ್ಯಾರ್ಥಿಗಳು ಸಂಬಂಧಪಟ್ಟ ಶಾಲೆಯ ಉಪಾಧ್ಯಾಯರ ನೇತೃತ್ವದಲ್ಲಿ ನಿಗದಿಯಾದ ಗ್ರಾಮದಲ್ಲಿ ನೆಲಸಿ ಸೇವೆ ಸಲ್ಲಿಸಬೇಕಾಗಿತ್ತು. ಶಿಬಿರ ನಡೆಸಲು ೧ ತಿಂಗಳಿಗೆ ೫೦೦ ರೂ ಮೀಸಲು. ಅದು ಅವರ ಊಟ ತಿಂಡಿಗೆ ಮಾತ್ರ.

ಗ್ರಾಮಸ್ಥರು ಮತ್ತು ಅಧಿಕಾರವರ್ಗದವರು ಈ ಯೋಜನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಅಷ್ಟೇ ಅಲ್ಲ. ಯೋಜನೆಯಲ್ಲಿ ಮನಸಾರೆ ಪಾಲುಗೊಂಡರು. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಟ್ಟಲ್ಲಿ ಪ್ರಾಯಶಃ ತಪ್ಪಾಗಲಾರದು. ಆದರಿಂದ ಗ್ರಾಮಸ್ಥರ ಮತ್ತು ಅಧಿಕಾರಿಗಳ ಮೇರೆ ಮೀರಿದ ಉತ್ಸಾಹ ಪ್ರಕಟವಾಗಲಿದೆ. ಮಹಮುದ್ ಅಹಮದ್ ಮೈಸೂರಿನ ಜಿಲ್ಲಾಧಿಕಾರಿಗಳು ಜೊತೆಗೆ ವಯಸ್ಕರ ಶಿಕ್ಷಣ ಕಾರ್ಯಕರ್ತರೂ ಹೌದು ಎಂದರೆ ತಪ್ಪಲ್ಲ. ಅವರು ಜಿಲ್ಲಾ ವ್ಯವಸ್ಥಾಪಕ ಕಾರ್ಯದರ್ಶಿಗಳೊಡನೆ ಶಿಬಿರ ನಡೆಸಬೇಕಾದ ಹಳ್ಳಿಗೆ ಭೇಟಿ ಇತ್ತರು. ಗ್ರಾಮ ಮುಖಂಡರು, ಶ್ಯಾನುಭೋಗರು, ಪಟೇಲರು, ಮತ್ತು ಧರ್ಮಿಷ್ಠರನ್ನು ಕರೆಸಿದರು. 'ನಿಮ್ಮ ಊರಿನಲ್ಲಿ ಒಂದುತಿಂಗಳಕಾಲ ೧೫–೨೦ ಮಂದಿ ಪ್ರೌಢಶಾಲಾ ವಿದಾರ್ಥಿಗಳು ಮತ್ತು ಉಪಾಧ್ಯಾಯರು ಇರುವರು. ಅವರು ನಿಮ್ಮನ್ನು ತಿಳಿಯಲು ಬಯಸುವರು. ಜೊತೆಗೆ ನಿಮ್ಮೊಡನೆ ಸೇರಿ 'ಅಳಿಲು ಭಕ್ತಿ ಮಳಲು ಸೇವೆ' ಎಂಬಂತೆ ತಮ್ಮ ಅಲ್ಪ ಕಾಣಿಕೆಯನ್ನು ನಿಮ್ಮ ಗ್ರಾಮಕ್ಕೆ ಸಲ್ಲಿಸುವರು. ಅವರು ನಿಮ್ಮ ಮಕ್ಕಳು. ನೀವು ಒಂದು ತಿಂಗಳಕಾಲ ಅವರ ಯೋಗಕ್ಷೇಮ ನೋಡಿಕೊಳ್ಳಬೇಕು' ಎಂಬುದಾಗಿ ಜಿಲ್ಲಾಧಿಕಾರಿಗಳು ಗ್ರಾಮಸ್ಥರಲ್ಲಿ ಮನವಿ ಮಾಡಿಕೊಂಡರು.

"ಸ್ವಾಮಿ, ನಮ್ಮಿಂದ ಏನಾಗಬೇಕು ಅಪ್ಪಣೆ ಕೊಡಿಸಿ" ಗ್ರಾಮಸ್ಥರು ಕೇಳಿದರು.

"ನಿಮ್ಮಲ್ಲಿ ಅನುಕೂಲವಿರುವವರು ಇದ್ದಾರೆ. ಅವರ ಪೈಕಿ ಒಬ್ಬೊಬ್ಬರು ಒಂದೊಂದು ದಿನ ಶಿಬಿರದ ವಿದ್ಯಾರ್ಥಿಗಳ ಊಟಕ್ಕೆ ಬೇಕಾದ ಆಹಾರ ಸಾಮಗ್ರಿಗಳನ್ನು ಒದಗಿಸಬೇಕು. ಜೊತೆಗೆ ಆತ ವಿದ್ಯಾರ್ಥಿಗಳೊಡನೆ ಊಟ ಮಾಡಬೇಕು. ಈ ಕೆಲಸ ನಿಮ್ಮಿಂದ ಸಾಧ್ಯವೆ' ಎಂಬುದಾಗಿ ಜಿಲ್ಲಾಧಿಕಾರಿಗಳು ಪ್ರಶ್ನೆ ಹಾಕಿದರು. ಜಿಲ್ಲಾಧಿಕಾರಿಗಳು ಹಾಗೆ ಒಪ್ಪಿದವರ ಹೆಸರು ಮತ್ತು ಊಟದ ಸಾಮಾನುಗಳ ಮೂರು ಪ್ರತಿಗಳನ್ನು ಮಾಡಿಸಿದರು. ಹೀಗೆ ೩೦ ದಿನಗಳಿಗೂ ಪಟ್ಟಿ ತಯಾರಾಯಿತು. ಒಂದನ್ನು ಗ್ರಾಮದ ಛೇರ್ಮನ್ನರು, ಇನ್ನೊಂದನ್ನು ರೆವಿನ್ಯೂ ಇನ್ಸ್‌ಪೆಕ್ಟರು ಇಟ್ಟುಕೊಂಡರು. ಮೂರನೆಯ ಪ್ರತಿ ಶಿಬಿರದ ಅಧಿಕಾರಿಗಳ ವಶ ಕೊಟ್ಟರು. ಪಟ್ಟಿಯಲ್ಲಿ ನಮೂದಾಗಿದ್ದ ಪ್ರತಿಯೊಬ್ಬರು ಆಯಾ ದಿನ ಕಾಲಕ್ಕೆ ಮುಂಚಿತವಾಗಿ ಶಿಬಿರಕ್ಕೆ ಅಕ್ಕಿಪಡಿ ತಂದು ಒದಗಿಸುತ್ತಿದ್ದರು. ಗ್ರಾಮಸ್ಥರು ಶಾಲಾ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡಿಕೊಂಡರು. ಜೊತೆಗೆ ಶಿಬಿರಾಧಿಕಾರಿಗಳ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮತ್ತು ಗ್ರಾಮ ಮುಖಂಡರು ಗ್ರಾಮದ ಒಟ್ಟಾರೆ ಕೆಲಸಗಳನ್ನು ಮಾಡಿದರು. ಇನ್ನೊಂದು ಶಿಬಿರದ ವಿಷಯ ಹೀಗಿದೆ. ಚಿಕ್ಕಮಗಳೂರು ಜಿಲ್ಲೆ ಮತ್ತಾವರ ಗ್ರಾಮ ಇರಬೇಕು. ನನಗೆ ಜ್ಞಾಪಕವಿಲ್ಲ. ಅಲ್ಲೊಂದು ಬೇಸಿಗೆ ಗ್ರಾಮ ಸೇವಾ ಶಿಬಿರ ಏರ್ಪಾಡಾಗಿತ್ತು. ಆ ಊರಿನಲ್ಲೊಂದು ಕೆರೆಯ ತುಂಬ ಹುಲ್ಲು ಮತ್ತು ಜೊಂಡು ಬೆಳೆದಿತ್ತು. ಅದರ ಮೇಲೆ ದನಕರುಗಳು ಸಲೀಸಾಗಿ ಓಡಾಡುತ್ತಿದ್ದವು. ಊರ ದನಕರುಗಳಿಗೆ ಆ ಕೆರೆಯ ನೀರೇ ಆಸರೆ. ಕೆರೆಯ ಮೇಲೆ ಬೆಳೆದ ಜೊಂಡನ್ನು ತೆಗೆಸಲು ಮರಾಮತ್ತು ಇಲಾಖೆಗೆ ಸಾವಿರಾರು ರೂಪಾಯಿ ಖರ್ಚಾಗುತ್ತಿತ್ತು. ಇದು ಸರಕಾರದ ಗಮನಕ್ಕೆ ಬಂದಿರಲಿಲ್ಲ. ಗ್ರಾಮಸ್ಥರಿಗೂ ಸಹ ಬೇಕಿರಲಿಲ್ಲ. ಹಲವಾರು ಬಾರಿ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಶಿಬಿರದ ಅವಧಿಯಲ್ಲಿ ಭೇಟಿಕೊಟ್ಟು ಗ್ರಾಮಸ್ಥರಿಗೆ ತಿಳಿವಳಿಕೆ ಹೇಳಿದರು. ಗ್ರಾಮಸ್ಥರಲ್ಲಿ ಇದ್ದಕ್ಕಿದ್ದಂತೆ ಒಂದು ದಿನ ಎಲ್ಲೂ ಇಲ್ಲದ ಉತ್ಸಾಹ ಮೂಡಿತು. ಕೆರೆಯ ಮೇಲೆ ಬೆಳೆದಿದ್ದ ಜೊಂಡನ್ನು ತೆಗೆಯಲು ನಿರ್ಧರಿಸಿದರು. ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ನೆರವಾದರು ಕೆರೆಯ ಮೇಲೆ ಬೆಳೆದಿದ್ದ ಜೊಂಡು ಹುಲ್ಲನ್ನು ಒಂದು ವಾರದಲ್ಲಿ ತೆಗೆದುಹಾಕಿದರು. ಕೆರೆಯ ನೀರು ಸ್ವಚ್ಛವಾಯಿತು. ದನಕರುಗಳು ಕೆರೆಯ ನೀರನ್ನು ಕುಡಿಯುವಂತಾಯ್ತು. ಇಂತಹ ನೂರಾರು ನಿದರ್ಶನಗಳನ್ನು ಕೊಡಬಹುದು. ಈ ಯೋಜನೆ ೧೯೪೯–೫೩ ರ ವರೆಗೆ ನಡೆಯಿತು. ನಾಲ್ಕು ವರ್ಷಗಳ ಅವಧಿಯಲ್ಲಿ ಶಿಬಿರಗಳಲ್ಲಿ ಆದ ಕೆಲಸದ ಅಂದಾಜನ್ನು ಕೊಡಲು ಇಷ್ಟಪಡುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಗ್ರಾಮಸ್ಥರಿಗೆ ತಮ್ಮ ಗ್ರಾಮದ ಕೆಲಸಕಾರ್ಯಗಳ ವಿಚಾರದಲ್ಲಿ ಉಂಟಾದ ಮನಸ್ಸು ಬಹು ಮುಖ್ಯ. ಉತ್ಸಾಹ ಮೆಚ್ಚತಕ್ಕಂತಹುದು ನಾಲ್ಕು ವರ್ಷಗಳ ನಂತರ ಈ ಯೋಜನೆಯನ್ನು ನಿಲ್ಲಿಸಬೇಕಾಯಿತು. ಕಾರಣ, ಸರಕಾರ ಈ ಕಾರ್ಯಕ್ರಮವನ್ನು ಸೇವಾದಳ ಮಾಡತಕ್ಕದ್ದು ಎಂದು ಸೂಚಿಸಿತು. ಇಂತಹ ಚೈತನ್ಯಪೂರ್ಣವಾದ ಯೋಜನೆಯ ಯಶಸ್ಸಿಗೆ ಭದ್ರಯ್ಯನವರು ಕಾರಣ.

ಅವರಿಗೆ ಗ್ರಾಮದ ನಾಡಿ ಗೊತ್ತಿತ್ತು. ವಿದ್ಯಾರ್ಥಿಗಳನ್ನು ಗ್ರಾಮ ಸೇವಾ ಕಾರ್ಯದಲ್ಲಿ ತೊಡಗಿಸುವ ತಂತ್ರ ಅರಿತಿದ್ದರು. ಇದೊಂದು ವಾಸ್ತವಿಕ ಕಾರ್ಯಕ್ರಮ ಭದ್ರಯ್ಯನವರು ಹಿಂದೆ ಎಲೆಮರೆಕಾಯಿಯಂತೆ ಇದ್ದು ಕೆಲಸಗಾರರಿಗೆ ಸಲಹೆ ನೀಡಿ ಹುರಿದುಂಬಿಸಿದರು.

ಭದ್ರಯ್ಯನವರು ವಿದ್ಯಾಪೀಠ ಉಪಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ವಿದ್ಯಾಪೀಠ ಯೋಜನೆಯನ್ನು ರೂಪಿಸಿದರು ಎಂದು ಹಿಂದೆ ಹೇಳಿದೆ. ಅವರೇ ಸ್ವತಃ ನಿಂತು ನಂಜನಗೂಡು ವಿದ್ಯಾಪೀಠ ಕಟ್ಟಿಸಿದರು. ಈ ಯೋಜನೆ ಅಂತರ ರಾಷ್ಟ್ರೀಯ ತಜ್ಞರ ಗಮನವನ್ನು ಸೆಳೆಯಿತು ಫೋರ್ಡ್ ಫೌಂಡೇಶನ್ ಧಾರಾಳವಾಗಿ ಧನ ಸಹಾಯ ಮಾಡಿತು. ಡೆನ್ಮಾರ್ಕಿನಿಂದ ಹೇರಳವಾಗಿ ಹಣ ಮತ್ತು ತಾಂತ್ರಿಕ ನೆರವು ಹರಿಯಿತು. ಹೊಸ ವಿದ್ಯಾಪೀಠಗಳು ಸ್ಥಾಪನೆ ಆದವು. ಒಂದು ಕಾಲಕ್ಕೆ ವಿದ್ಯಾಪೀಠಗಳು ವಯಸ್ಕರ ಶಿಕ್ಷಣ ತಜ್ಞರ ಯಾತ್ರಾ ಸ್ಥಳಗಳಾಗಿದ್ದವು. ಅದೇ ಕಾಲಕ್ಕೆ ಭಾರತ ಸರಕಾರ ಜನತಾ ಕಾಲೇಜುಗಳನ್ನು ಅನೇಕ ರಾಜ್ಯಗಳಲ್ಲಿ ತೆರೆಯಿತು. ಈ ಕಾಲೇಜುಗಳಿಗೆ ಕೇಂದ್ರ ಸರಕಾರದ ಹಣ ಹೇರಳವಾಗಿ ಹರಿಯಿತು. ಆದರೂ ಜನತಾ ಶಾಲೆಗಳು ಹೇಳ ಹೆಸರಿಲ್ಲದಂತೆ ಕೆಲವು ವರ್ಷಗಳ ನಂತರ ಮುಚ್ಚಿ ಹೋದವು. ವಿದ್ಯಾಪೀಠಗಳ ಮಾದರಿಯಲ್ಲಿ ಇತರ ರಾಜ್ಯಗಳಲ್ಲೂ ಒಟ್ಟು ೫೦ ವಿದ್ಯಾಪೀಠಗಳನ್ನು ತೆರೆಯುವ ಯೋಜನೆ ಭಾರತ ಸರಕಾರಕ್ಕೆ ಇತ್ತು. ಆದರೆ ಕೇಂದ್ರ ಸರಕಾರದ ಮಟ್ಟದಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧಿಕಾರಿ ವರ್ಗದವರು ಪ್ರಯತ್ನ ಮಾಡಲಿಲ್ಲ. ಆದ್ದರಿಂದ ಈ ಯೋಜನೆಯೂ ಸಹ ಮಣ್ಣು ಪಾಲಾಯಿತು. ವಿದ್ಯಾಪೀಠದ ಬಗ್ಗೆ ಇನ್ನು ಹೆಚ್ಚಿನ ರೀತಿ ಬೇರೆ ಕಡೆ ಪ್ರಸ್ತಾಪವಾಗಿರುವುದರಿಂದ ಅದರ ಬಗ್ಗೆ ನಾನು ಹೆಚ್ಚು ವಿಚಾರ ಮಾಡಲು ಇಷ್ಟಪಡುವುದಿಲ್ಲ.

ಭದ್ರಯ್ಯನವರು ಹಲವಾರು ವಿದೇಶಗಳಲ್ಲಿ ಯುನೆಸ್ಕೊ ತಜ್ಞರಾಗಿ ಸೇವೆ ಸಲ್ಲಿಸಿರುವರು. ಅವರು ಅಲ್ಲೆಲ್ಲಾ ಸಮಿತಿಯ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಿದಲ್ಲಿ ತಪ್ಪಾಗಲಾರದು. ಆ ದೇಶಗಳಲ್ಲಿ ಸೇವೆ ಸಲ್ಲಿಸಲು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಸೂಕ್ತ ಭೂಮಿಕೆಯನ್ನು ಒದಗಿಸಿದೆ. ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ ಸಂತೋಷ ಇನ್ನಾವ ಸೇವೆಯಿಂದಲೂ ಉಂಟಾಗಿಲ್ಲ. ಸಮಿತಿ ಕೈಕೊಳ್ಳದ ಕಾರ್ಯಕ್ರಮಗಳಿಲ್ಲ ಎಂಬುದಾಗಿ ಅವರು ಆಗಾಗ್ಗೆ ಹೇಳುತ್ತಿದ್ದರು.

ಈಗ ಸುಮಾರು ಒಂದು–ಒಂದೂವರೆ ವರ್ಷಗಳ ಹಿಂದೆ ಅವರ ಮನೆಗೆ ಹೋಗಿದ್ದೆ. ಅವರಿಗೆ ಆರೋಗ್ಯ ಇರಲಿಲ್ಲ. ಆದರೂ ಹಸನ್ಮುಖಿಯಾಗಿದ್ದರು. ನನ್ನ ಆರೋಗ್ಯ ವಿಚಾರಿಸಿ ಸಮಿತಿಯ ವಿಚಾರ ಕೇಳಿದರು. 'ನನಗೆ ಅದರ ಸಂಪರ್ಕ ಇಲ್ಲ. ಹಾಗೂ ನಮ್ಮಂಥಹವರ ಸಂಪರ್ಕ ಸಂಸ್ಥೆಗೆ ಬೇಕಿಲ್ಲ' ಎಂದು ಹೇಳಿದೆ. 'ಸಮಿತಿಯನ್ನು ಸುಧಾರಿಸಲು ಸಾಧ್ಯವಿಲ್ಲ. ಸರಕಾರಕ್ಕೆ ಬೇಕಿಲ್ಲ. ಸರಕಾರ ತೆಗೆದುಕೊಂಡರೂ ನಷ್ಟವಿಲ್ಲ. ಸರಕಾರ ಸಮಿತಿಯ ಮೂಲಕ ಹಲವಾರು ಸಂಸಾರಗಳಿಗೆ ಅನ್ನ ನೀಡುತ್ತಿದೆ. ಅದೇ ಒಂದು ಸಮಾಧಾನ' ಎಂಬುದಾಗಿ ಬಹಳ ನೊಂದು ಹೇಳಿದರು.

ಭದ್ರಯ್ಯನವರು ವಯಸ್ಕರ ಶಿಕ್ಷಣ ಸಮಿತಿಯನ್ನು ತಮ್ಮದಾಗಿಸಿಕೊಂಡಿದ್ದರು. ತಮ್ಮ ಇಡೀ ಜೀವನವನ್ನು ಅದಕ್ಕೆ ಸಮರ್ಪಿಸಿದರು. ಅವರು ಮೊದಲ ಬಾರಿಗೆ ಯುನೆಸ್ಕೊ ಕೆಲಸ ಒಪ್ಪಿಕೊಂಡಾಗ ಅವರ ಹಣಕಾಸಿನ ಪರಿಸ್ಥಿತಿ ಸರಿಯಾಗಿರಲಿಲ್ಲ. ಇದನ್ನು ಹೇಳುವ ಕಾರಣ ಇಷ್ಟೇ. ಇಂದು ಅಧಿಕಾರ ವಹಿಸುವವರಲ್ಲಿ ಅನೇಕ ಮಂದಿ 'ಮೊದಲು ನಾನು' ಎಂಬ ಭಾವನೆ ಉಳ್ಳವರು ಮತ್ತು ಬೆಳಸಿಕೊಳ್ಳುವವರು. ಭದ್ರಯ್ಯನವರು ಅದಕ್ಕೆ ಅಪವಾದ. ಅವರು ಚುನಾಯಿತ ಅಧ್ಯಕ್ಷರಾಗಿದ್ದರು. ಚುನಾಯಿತ ಅಧ್ಯಕ್ಷರು ಇರುವವರಿಗೆ ಯಾವ ತೆರವಾದ ಸಂಬಳ ಸಾರಿಗೆಗಳಿರಲಿಲ್ಲ.

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಎಂದರೆ ಭದ್ರಯ್ಯ. ಭದ್ರಯ್ಯ ಎಂದರೆ ವಯಸ್ಕರ ಶಿಕ್ಷಣ ಎಂಬುದು ಎಲ್ಲ ಕಾರ್ಯಕರ್ತರಿಗೆ ತಿಳಿದಿದೆ. ಇಂತಹ ನಿಷ್ಠಾವಂತರ ಸೇವೆಯ ಫಲವಾಗಿ ಇಂದಿಗೂ ವಯಸ್ಕರ ಶಿಕ್ಷಣ ಸಮಿತಿ ಉಳಿದು ಬಂದಿದೆ.

---

ಕಲ್ಲು ಇಟ್ಟಿಗೆಗಳಿಂದ ಕಟ್ಟಿರುವ ಗುಡಿ ಗೋಪುರಗಳಿಗಿಂತ ನರ, ಮಾಂಸಗಳಿಂದ ನಿರ್ಮಾಣವಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ಗಾಂಧೀಜಿ

# ಚಿದಂಬರ ರಹಸ್ಯ—ಒಂದು ಅವಲೋಕನ

ಡಾ|| ಪದ್ಮಾಶೇಖರ್

ಪೂರ್ಣಚಂದ್ರ ತೇಜಸ್ವಿ ಅವರದ್ದು ದೈತ್ಯಪ್ರತಿಭೆ. ನಮ್ಮ ಶಿಷ್ಟ ಸಾಹಿತ್ಯಗಳಲ್ಲಿ ಕಾಣಸಿಗದ ಹಲವಾರು ಅಭಿರುಚಿಗಳ ಸಂಗಮ ಅವರು. ಮೀನು ಹಿಡಿಯುವುದು, ಬೇಟೆಯಾಡುವುದು, ಛಾಯಾ ಚಿತ್ರಗಳನ್ನು ತೆಗೆಯುವುದು, ಪ್ರವಾಸ ಕೈಗೊಳ್ಳುವುದು, ಸಾಮಾನ್ಯ ವಿಜ್ಞಾನ, ಸಸ್ಯ, ಪ್ರಾಣಿ, ಖಗೋಳ ಮನಃಶಾಸ್ತ್ರಾದಿ ಹಲವು ಪ್ರಕಾರಗಳಲ್ಲಿ ಅವರದ್ದು ಮೊದಲದರ್ಜೆಯ ಜ್ಞಾನ. ಬಿ.ಜಿ.ಎಲ್. ಸ್ವಾಮಿ, ಕಾರಂತ ಅಂಥವರನ್ನು ಬಿಟ್ಟರೆ ಈಗ ಇರುವ ಸಾಹಿತಿ ಗಳಲ್ಲಿ ತೇಜಸ್ವಿ ಅವರದು ವೈವಿಧ್ಯಮಯ ವರ್ಣನೀಯ ಅನುಭವ ಗಳಿಂದ ದೀಪ್ತವಾದ ಸಾಹಿತ್ಯ ಸೃಷ್ಟಿ. ಜೀವನದ ಎಲ್ಲ ಮಗ್ಗಲು ಗಳನ್ನು ದರ್ಶಿಸುವ ಛಲ ಚೈತನ್ಯ ಇವರದು. ಮನುಷ್ಯನ ವಿವಿಧ ಚಟುವಟಿಕೆಗಳನ್ನು ನಡವಳಿಕೆ ಮನೋಭಾವಗಳನ್ನು ನೇರವಾಗಿ ಅಧ್ಯಯನ ಮಾಡಬಲ್ಲಂಥ ಎಲ್ಲ ರಂಗಗಳಲ್ಲಿಯೂ ಇವರು ನೇರ ಸಹಭಾಗಿಗಳಾಗುತ್ತಾರೆ. "ನಿಸರ್ಗದ ಕಡೆ ಮುಖ ಮಾಡಿಕೊಂಡು ಬದುಕಿನ ನಾನಾ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿ ಪ್ರಯೋಗಶೀಲತೆ ಯಲ್ಲಿ ತಲ್ಲೀನರಾಗಿರುವ ಲೇಖಕರು ಕನ್ನಡದಲ್ಲಿ ಕಾರಂತರ ನಂತರ ಇನ್ನೊಬ್ಬರಿದ್ದರೆ ಅದು ತೇಜಸ್ವಿ ಅವರೊಬ್ಬರೆ. ಭಾಷೆ ಜಾತಿಮತ ಗಳಿಗೆ ಸಂಬಂಧಿಸಿದ ಚಳುವಳಿಗಳಾಗಲಿ, ರೈತ ಚಳುವಳಿಯಾಗಲಿ, ರಾಜಕೀಯ ಪರಿಸರಗಳಿಗೆ ಸಂಬಂಧಿಸಿದ ವ್ಯವಹಾರಗಳಾಗಲಿ, ಅವರಿಗೆ ಯಾವುದೂ ಹೊರತಲ್ಲ. ವ್ಯವಸಾಯದಿಂದ ಛಾಯಾ ಗ್ರಹಣದವರೆಗೆ ಅವರಿಗೆ ಆಸಕ್ತಿಯ ಹರಹು. ಆಸಕ್ತಿಯ ಈ ಹಲವು ಹತ್ತು ಮುಖಗಳ ಫಲವಾಗಿ ತೇಜಸ್ವಿ ಅವರ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿದೆ" ಎಂಬ ಹಾ. ಮಾ. ನಾಯಕರ ಮಾತುಗಳಲ್ಲಿ ತೇಜಸ್ವಿ ಅವರನ್ನು ಅರ್ಥೈಸಿಕೊಳ್ಳಲು, ಅವರ ಸಾಹಿತ್ಯವನ್ನು ಮನಗಾಣಲು ಮಾರ್ಗದರ್ಶನವಿದೆ. ತೇಜಸ್ವಿ ಅವರು ತಮ್ಮ ವಿಚಾರಧಾರೆಗಳನ್ನು, ಜೀವನಾನುಭವಗಳನ್ನು ತಮ್ಮ ಕೃತಿಗಳಿಗೆ

ಧಾರೆಯೆರೆದಿದ್ದಾರೆ. ಸಮಾಜವನ್ನು ತೆರೆದ ಕಣ್ಣುಗಳಿಂದ ನೋಡಿ, ಚಿಕಿತ್ಸಕ ಬುದ್ಧಿಯಿಂದ ವಿಶ್ಲೇಷಿಸಿದ್ದಾರೆ. ಜನರನ್ನು ನಾಡನ್ನು ರಾಷ್ಟ್ರವನ್ನು ದಿಟ್ಟತನದಿಂದ ವಿಮರ್ಶಿಸಿ, ಪ್ರಗತಿದಾರಿಯನ್ನು ಕಂಡುಕೊಳ್ಳಲು ನೆರವಾಗಿದ್ದಾರೆ. ಹೀಗಾಗಿ ಅವರ ಯಾವುದೇ ಕೃತಿಯನ್ನು ಪರಿಶೀಲಿಸುವಾಗ ವಿಮರ್ಶಕ ಈ ಹಲವಾರು ದೃಷ್ಟಿಕೋನಗಳಿಂದಲೇ ಮೌಲ್ಯಮಾಪನ ಮಾಡಬೇಕಾಗುತ್ತದೆ.

'ಕರ್ವಾಲೊ'ವಿನಂತೆ 'ಚಿದಂಬರ ರಹಸ್ಯ' ಕೂಡ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ತೇಜಸ್ವಿ ಅವರಿಂದ ಸಂದ ವಿನೂತನ ಕೊಡುಗೆ. 'ಕರ್ವಾಲೊ'ವಿನಲ್ಲಿ ಓದುಗರು ಹಾರುವ ಓತಿಯ ಬೆನ್ನುಹತ್ತಿ ಪ್ರಕೃತಿಯ ರಮ್ಯಚಿತ್ರಣ ಹಾಗೂ ಹೊಸಬಗೆಯ ರೋಚಕ ಅನುಭವವನ್ನು ಪಡೆಯುತ್ತಾರೆ. 'ಚಿದಂಬರ ರಹಸ್ಯ'ದಲ್ಲಿ ಶಾಮುನಂದನ ಅಂಗಾಡಿಯೊಡನೆ ಶಾಮೀಲಾಗಿ ರಹಸ್ಯ ಭೇದನೆಗೆ ತೊಡಗಿ ಒಂದು ಸುಂದರ ಗ್ರಾಮದ ನಿಶ್ಚಿತ ಅವನತಿಯ ಘೋರ ಅನುಭವವನ್ನು ಪಡೆಯುತ್ತಾರೆ.

ಕಾದಂಬರಿಯಲ್ಲಿ ಬರುವ ಕೆಸರೂರು ನಿಮಿತ್ತಮಾತ್ರವಷ್ಟೆ. ನಮ್ಮ ನಾಡಿನ ಸಮಾಜದ ನಗ್ನಚಿತ್ರಣವನ್ನು ಕೆಸರೂರನ್ನು ಕೇಂದ್ರವಾಗಿಟ್ಟುಕೊಂಡು ಕಾದಂಬರಿಕಾರರು ಎಳೆಎಳೆಯಾಗಿ ಬಿಡಿಸಿದ್ದಾರೆ. ಈ ಊರಿನ ಜನರು, ಅವರ ಬದುಕು ಸಾಮಾಜಿಕ ರಾಜಕೀಯ–ಧಾರ್ಮಿಕ ತೊಡಕು, ಮೌಢ್ಯದ ತಾಂಡವ, ತದ್ವಿರುದ್ಧವಾಗಿ ಸಾಮಾಜಿಕ ವೈಚಾರಿಕ ಕ್ರಾಂತಿಯ ಬೊಬ್ಬೆ, ಜಾತೀಯತೆಯ ದಳ್ಳುರಿ, ಮತಾಂಧತೆಯ ಜ್ವಾಲಾಗ್ನಿ, ಇವೆಲ್ಲವನ್ನು ಮೆಟ್ಟನಿಲ್ಲುವ, ಮಾರಿ ಬೆಳೆಯುವ ನಿರ್ಮಲ ಹೃದಯಗಳೆರಡರ ಅವ್ಯಾಜ ಪ್ರೇಮ ಪ್ರಸ್ತುತ ಕಾದಂಬರಿಯಲ್ಲಿ ನಮ್ಮ ಕಣ್ಣು ಕಟ್ಟುತ್ತವೆ: ಹೃದಯ ತಟ್ಟುತ್ತವೆ. ಪ್ರಕೃತಿ ಸೌಂದರ್ಯದ ತವರಾಗಿ, ಸುತ್ತಮುತ್ತ ಗಿರಿಕಂದರಗಳಿಂದಲೂ ವನರಾಜಿಗಳಿಂದಲೂ ಕಳೆಗೊಂಡು ಸಹಜವಾಗಿ ಬೆಳೆಯುವ ಪ್ರಪಂಚದಲ್ಲಿಯೇ ಪರಿಮಳಕ್ಕೆ ಹೆಸರಾದ ಏಲಕ್ಕಿ ಬೆಳೆಯಿಂದಲೂ ಸಂಪದ್ಭರಿತವಾಗಿ ಕರ್ನಾಟಕದ ಸ್ವಿಜರ್ಲೆಂಡ್ ಎಂಬ ಖ್ಯಾತಿಗೆ ಪಾತ್ರವಾಗಿದ್ದ ಕೆಸರೂರು ಕ್ಷುದ್ರ ರಾಜಕೀಯಕ್ಕೆ, ಮತೀಯ ಸಂಘರ್ಷಕ್ಕೆ ವೈಯುಕ್ತಿಕ ಲಾಭಿಗೆ ಸಿಕ್ಕಿ ನಿರ್ನಾಮವಾಗುವ ಬಗೆಯನ್ನು ಹೃದಯ ವಿದ್ರಾವಕ ಅನುಭವಕ್ಕೆ ಪಕ್ಕಾಗುವ ರೀತಿಯಲ್ಲಿ ತೇಜಸ್ವಿ ಅವರು ವರ್ಣಿಸಿದ್ದಾರೆ; ವಿವೇಚಿಸಿದ್ದಾರೆ.

ಕೆಸರೂರು ನಾಶವಾಗುವುದಕ್ಕೆ ಪ್ರಧಾನವಾಗಿ ಅದರ ಬಾಹ್ಯ ಪರಿಸರದಲ್ಲಾದ ಪರಿವರ್ತನೆ ಕಾರಣವಾಗುತ್ತದೆ. ಅರಣ್ಯ ಇಲಾಖೆಯುವರ ಲಂಚ ಸಾಲದ ಆಸೆಗಣ್ಣಿನ ಕ್ರೂರ ನೋಟಕ್ಕೆ ಊರಿನ ಸುತ್ತ ಬೆಳೆದಿದ್ದ ದಟ್ಟ ಅರಣ್ಯದ "ನೂರಾರು ವರ್ಷಗಳ ದೇಗುಲದ ಕಂಬಗಳಂಥ ಹೆಮ್ಮರಗಳು ಚೀತ್ಕಾರದೊಂದಿಗೆ ನೆಲಕ್ಕುರುಳುತ್ತವೆ". ಕಾಡು ಕಣ್ಮರೆಯಾಗಿ ಆ ಜಾಗದಲ್ಲಿ ಲಂಟಾನ ರಾಕ್ಷಸನ ಪ್ರತಿಷ್ಠಾಪನೆಯಾಗಿ ಏಲಕ್ಕಿ ಬೆಳೆ ರೋಗಕ್ಕೆ ತುತ್ತಾಗುತ್ತದೆ; ಊರಿನ ಸಹಜ ಸಂಪತ್ತು ದುರ್ದೆಸೆಗೊಳಗಾಗುತ್ತದೆ. ಕಾಡು ನಾಡಿನ ಬೆನ್ನೆಲುಬು ಅದಿಲ್ಲದಿದ್ದಲ್ಲಿ ಮಾನವ ಹೇಗೆ ಕ್ಷಿಪ್ರದಲ್ಲಿಯೇ ಅವನತಿಗೀಡಾಗುತ್ತಾನೆ ಎಂಬ ಸಾರ್ವತ್ರಿಕ ಸತ್ಯವನ್ನು ಲೇಖಕರಿಲ್ಲಿ ಮಾರ್ಮಿಕವಾಗಿಯೇ ಮನಗಾಣಿಸುತ್ತಾರೆ.

ಕೆಸರೂರಿನ ಬಾಹ್ಯ ಜಗತ್ತಿನಲ್ಲಾದ ಬದಲಾವಣೆ ಆ ಊರಿನ ಜನರ ಸಂಸ್ಕೃತಿಯ ಅವನತಿಯ ಮುನ್ಸೂಚನೆಯೂ ಆಗುತ್ತದೆ. ಏಲಕ್ಕಿ ಮಂಡಿಯ ರಾಜನಂತಿದ್ದ ಕೃಷ್ಣೇಗೌಡನೂ, ಊರಿನ ಸುಲ್ತಾನ ಸುಲೇಮಾನ್ ಬೇರಿಯೂ ತಮ್ಮ ತಮ್ಮ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಾನಮಾನಗಳಿಗಾಗಿ ವಿಶೇಷ ಕಸರತ್ತು ಮಾಡಬೇಕಾಗಿ ಬಂದು, ಇವರಿಬ್ಬರ ಮಹತ್ವಾಕಾಂಕ್ಷೆಗಳ ನೆರಳಿನಲ್ಲಿ ಆಚಾರಿ, ಅಬ್ಬಾಸ್ ಬೇರಿ ಅಂಥವರು ಬೇಳೆ ಬೇಯಿಸಿಕೊಳ್ಳಲು ಹೋಗಿ ಇಡೀ ಊರು ಮತೀಯ ದಳ್ಳುರಿಗೆ ಅಂತರಿಕವಾಗಿಯೂ ತುತ್ತಾಗುತ್ತದೆ.

ಸುಲ್ತಾನಬೇರಿ ಕೇರಳದಿಂದ ಬಂದು ಕಾಡನ್ನು ಲೂಟಿಮಾಡಿ, ಜನರನ್ನು ವಂಚಿಸಿ, ಅಧಿಕಾರಿ, ಮಂತ್ರಿಗಳಿಗೆ ಲಂಚದ ರುಚಿ ತೋರಿ, ತಾನೂ ಬೆಳೆದದ್ದೇ ಅಲ್ಲದೆ, ಊರಿನ ಮುಸಲ್ಮಾನರ ಸಂಖ್ಯೆ ಹೆಚ್ಚಿಸಿ ಅವರ ಮತೀಯ ಭಾವನೆ ಜಾಗೃತವಾಗಿರಿಸಲು ಮಸೀದಿ ಕಟ್ಟಿಸಿ ಮೈಕು ಹಾಕಿಸಿಕೊಡುತ್ತಾನೆ. ತುರುಕರ ಪ್ರವರ್ಧಮಾನಕ್ಕೆ ಹೆದರಿದ ಹಿಂದೂಗಳು ತಾವೂ ದೇವಸ್ಥಾನ ಕಟ್ಟಿ, ತಿರುಪತಿ ದೇವಸ್ಥಾನದವರಿಂದ ಪುಸಲಾವಣೆ ಪಡೆದು, ಸಾಬರಂತೆ ಇವರೂ ಮೈಕಿನಲ್ಲಿ ಉತ್ತಿಷ್ಠೋತ್ತಿಷ್ಠ ಜಪಿಸುತ್ತಾರೆ. ಇವರ ನಡುವೆ ಆ ಊರಿನ ಹರಿಜನರು ಬ್ಯಾಂಕಿನ ಸಾಲ ತೀರಿಸಲಾಗದೆ ಮುಸ್ಲಿಮರಾಗಲು ತೀರ್ಮಾನಿಸುವ ನಾಟಕ ಹೂಡುತ್ತಾರೆ. ಈ ಎಲ್ಲಾ ಸಂದರ್ಭಗಳಲ್ಲಿಯೂ ಜಾತೀಯ ಮತೀಯ ಭಾವನೆಗಳು ನರ್ತಿಸುವ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ಮಾತ್ರವಲ್ಲ; ಆ ರೀತಿ ಧರ್ಮಹಿತವನ್ನು ರಕ್ಷಿಸ ಹೊರಡುವ ಡಂಬಕೋರರಿಗೆ ಎಚ್ಚರಿಕೆಯನ್ನೂ ಮೊಳಗಿಸಿದ್ದಾರೆ.

ಈ ಕೆಸರೂರಿನ ಸಾಮಾನ್ಯ ಜನರಿಗಿಂತ ಭಿನ್ನವಾದ ಮನೋಭಾವಗಳನ್ನುಳ್ಳ ವ್ಯಕ್ತಿಗಳು ಕಾದಂಬರಿಯಲ್ಲಿ ಬರುತ್ತಾರೆ. ಆದರೆ ಉರಿಯುವುದಕ್ಕೆ ಉಪ್ಪು ಹಾಕಿದಂತೆ ಈ ಗಣ್ಯರ ಚಟುವಟಿಕೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಊರನ್ನು ಇನ್ನಷ್ಟು ತೀವ್ರಗತಿಯಲ್ಲಿ ವಿನಾಶದತ್ತ ಕೊಂಡೊಯ್ಯುತ್ತಾರೆ.

ಸಹಜ ಸಂಪನ್ನನಾದ ಕೆಸರೂರಿನ ಏಲಕ್ಕಿ ಬೆಳೆ ಇದ್ದಕ್ಕಿದ್ದಂತೆ ರೋಗಕ್ಕೆ ತುತ್ತಾದದ್ದು, ಮಹತ್ವದ ಕೃಷಿ ವಿಜ್ಞಾನಿಯಾಗಿ ಮ್ಯಾಗಸೇಸ್ ಪ್ರಶಸ್ತಿಗಾಗಿ ಶಿಫಾರಸು ಪಡೆದಿದ್ದ ಜೋಗಿಹಾಳರ ಅಕಾಲ ಮರಣವನ್ನು ಕುರಿತು ತನಿಖೆ ನಡೆಸಿ ಕೇಂದ್ರ ಕೃಷಿ ಮಂತ್ರಿಗಳಿಗೆ ವರದಿ ಸಲ್ಲಿಸಲು ಬಂದ ಇಂಟಲಿಜೆನ್ಸ್ ಅಧಿಕಾರಿ ಶಾಮನಂದನ ಅಂಗಾಡಿ ಗ್ರಾಮದಲ್ಲಿನ ಹಲವಾರು ಚಟುವಟಿಕೆಗಳಿಗೆ ಚಾಲನೆ ಇತ್ತ ವ್ಯಕ್ತಿ. ಇವನ ಶಂಕಾಸ್ಪದ ಆಗಮನದಿಂದ ಕಳ್ಳಸಾಗಣೆಯ ಅಧಿಪತಿ ಸುಲೇಮಾನ್ ಬೇರಿ ಮತ್ತವನ ಬಲಗೈ ಬಂಟ ಅಬ್ಬಾಸ್ ವಿಶೇಷ ಎಚ್ಚರ ವಹಿಸುತ್ತಾರೆ. ಇವನ ವಿಚಾರ ತಿಳಿಯಲು ಮಹಮುದ್‌ನನ್ನು ಹಿಂದಿನಿಂದ ಬೆದರಿಸುತ್ತಾರೆ. ಕಡೆಗೆ ಮಹಮುದ್‌ನನ್ನು ಸುಡಲು ಹೋದ ಜನ ತಾವೇ ಆ ಚಕ್ರವ್ಯೂಹದಲ್ಲಿ ಸಿಲುಕಿ ಬಲಿಯಾಗುವ ಭೀಕರ ಪ್ರಸಂಗ ಉಂಟಾಗುತ್ತದೆ.

ಅಂಗಾಡಿ, ಸುಲೇಮಾನ್ ಕಡೆಯವರಲ್ಲಿ ಗುಮಾನಿ ಹೆಚ್ಚಿಸಿದರೆ, ಏಲಕ್ಕಿ ಸಂಶೋಧನ ಕೇಂದ್ರದ ಅಧಿಕಾರಿ ಪಾಟೀಲರು ಮತ್ತವರ ಸಹವರ್ತಿ ಹೆಗ್ಡೆ ಸಿದ್ದಪ್ಪ

ಷುಂತಾದವರಲ್ಲಿ ಹೂತುಹೋಗಿದ್ದ ವಿಷಯಗಳನ್ನು ಮತ್ತೆ ಜ್ವಲಿಸುತ್ತಾನೆ; ನಿಂತು ಹೋಗಿದ್ದ ಏಲಕ್ಕಿ ಬೆಳೆ ಸಂಶೋಧನೆಗೆ ವಿಶೇಷ ತಿರುವು ಕೊಡುತ್ತಾನೆ. ಅದರಲ್ಲೂ ಪಾಟೀಲರು ಕೆಸರೂರು ಹೈಬ್ರೀಡ್ ತಳಿ, ಕೆಸರೂರು ಏಲಕ್ಕಿಯ ವೈರಸ್‌ರೋಗ, ಜೋಗಿಹಾಳರ ಸಂಶೋಧನೆಯ ರೆಕಾರ್ಡ್ಸ್‌ಗಳ ಬಗೆಗೆ ಹೆಚ್ಚು ತಿಳಿಯುವಂತಾಗುತ್ತದೆ. ಈ ಚಟುವಟಿಕೆಗಳ ನಡುವೆಯೆ ಊರಿನ ಜನರ ಅಧಃಪತನದ ಬಗೆಗೆ ಪಾಟೀಲರ ಅತೃಪ್ತಿ, ಪರಿಸರ ನಾಶದ ಬಗೆಗೆ ಸಿದ್ದಪ್ಪನ ಆಕ್ರೋಶ ಇವೆಲ್ಲಾ ಸಾಂದ್ರಗೊಳ್ಳುತ್ತಾ ಹೋಗಿ, ಹಲವಾರು ಘಟನೆಗಳು ಜರುಗಿ ಊರು ಮತ್ತಷ್ಟು ಹದಗೆಡುವಂತಾಗುತ್ತದೆ.

ಊರಿನ ಪರಿಸ್ಥಿತಿ ಬಿಗಡಾಯಿಸುವಲ್ಲಿ ಊರ ಹೊರಗೆ ಬಂದು ನೆಲಸಿ, ಊರಿನಲ್ಲಿ ಸೂಳೆಗಾರಿಕೆ, ಕಳ್ಳತನ ಇತ್ಯಾದಿಗಳಿಗೆ ಕಾರಣರಾದದ್ದೇ ಅಲ್ಲದೆ, ಹರಿಜನರ ನಿಷ್ಠುರಕ್ಕೂ ಆಚಾರಿಯಂಥ ಕಾಮ ಪಿಪಾಸುಗಳ ಕಚ್ಚೆ ಹರಕುತನಕ್ಕೂ ಕೃಷ್ಣೇಗೌಡನ ರಾಜಕೀಯ ಚದುರಂಗದಾಟಕ್ಕೆ ನಡೆಯಾಗಲಿಕ್ಕೂ, ಪಾಟೀಲರ ಹೈಬ್ರೀಡ್ ತಳಿಯ ತಾಯಿ ಸಸ್ಯದ ಚಿದಂಬರ ರಹಸ್ಯ ಭೇದಿಸಲಿಕ್ಕೂ ಇಂಬಾಗಲೆಳೆಸುವ ವಲಸೆ ಜನಾಂಗವಾದ ಗೋಸಾಯಿಗಳು ಹೇಗೆ ಕಾರಣವಾಗುತ್ತಾರೆಂಬ ಸಂಗತಿ ಅತ್ಯಂತ ವಿಶ್ಲೇಷಣಾತ್ಮಕವಾಗಿ ಕಾದಂಬರಿಯಲ್ಲಿ ಒಡಮೂಡಿದೆ.

ಇನ್ನೊಂದು ಕಡೆಯಿಂದ ಸಾಹಿತಿ ಮತ್ತು ವಿಚಾರವಾದಿ ಜಯರಾಂ ಮತ್ತು ಕ್ರಾಂತಿಕಾರಿ ಅಧ್ಯಾಪಕ ರಾಮಚಂದ್ರ ಮತ್ತವನ ಶಿಷ್ಯರು ಊರಿನ ಹಲವಾರು ಪ್ರಮುಖ ಘಟನೆಗಳಲ್ಲಿ ಕಾವು ಮೂಡಿಸಿದವರು. ಸಾಹಿತಿ ಜಯರಾಂ ತನ್ನ ಅಮೋಘವಾದ ಕಲ್ಪನಾ ಚತುರತೆಯಿಂದ, ಕಥನಕೌಶಲ್ಯದಿಂದ ಅಂಗಾಡಿಯಂಥ ಪತ್ತೇದಾರನಲ್ಲಿ ಜೋಗಿಹಾಳರ ಸಾವಿನ, ಏಲಕ್ಕಿ ತಳಿಯ ಚಿದಂಬರ ರಹಸ್ಯದ ಭೇದೋಪಾಯದ ದಿಕ್ಕನ್ನೇ ಬದಲಾಯಿಸಿದಂಥ ವ್ಯಕ್ತಿ. ಈ ನಿಟ್ಟಿನಲ್ಲಿ ವೃಥಾ ಶ್ರಮಿಸಿ ಗೋಸಾಯಿಗಳ ಮೆಜಿಸಿಯನ್ ಮುತ್ತು, ವಿದೇಶಿ ಏಜೆಂಟ್ ಎಂಬ ಅವಾಸ್ತವ ನಿಲವಿಗೆ ಅಂಗಾಡಿ ತಲುಪುವಂತಾಗುತ್ತದೆ. ಇದರಲ್ಲಿ ಜಯರಾಂನ ತಪ್ಪೇನು ಇಲ್ಲ. ಆತ ಕೆಲವು ನೈಜ ಘಟನೆಗಳ ಆಧಾರದ ಮೇಲೆ ಸತ್ಯದ ಸಮೀಪಕ್ಕೆ ಕಲ್ಪನೆಯಿಂದ ತಲುಪಬಹುದೆಂಬುದನ್ನು ತಿಳಿಸಿದನೇ ಹೊರತು, ಸತ್ಯವನ್ನೇ ಅಲ್ಲ. ಇದನ್ನು ನಂಬಿ ಅಂಗಾಡಿ ಪಥಭ್ರಾಂತನಾಗುತ್ತಾನೆ ಅಷ್ಟೆ. ಇವನ್ನು ಗಮನಿಸಿದಾಗ ಜಯರಾಂನಂಥ ಗೌರವಾನ್ವಿತ ವ್ಯಕ್ತಿಗಳೂ ಕೆಸರೂರಿನ ಅವನತಿಯನ್ನು ತಡೆಯಲಾಗುವುದಿಲ್ಲ ಎಂಬ ಮಾರ್ಮಿಕ ಸತ್ಯ ಧ್ವನಿಪೂರ್ಣವಾಗಿ ನಿನಾದಗೊಳ್ಳುತ್ತದೆ. ಕೃಷ್ಣೇಗೌಡನಂಥ ಜಾತ್ಯಾಂಧನನ್ನು ತುರುಕನಿಗೆ ಮಗಳನ್ನು ಕೊಡುವಷ್ಟರ ಮಟ್ಟಿಗೆ ಬದಲಾಯಿಸುವುದು ಸಾಧ್ಯವಾದ ಜಯರಾಂನೂ ಇಲ್ಲಿ ಜರುಗಿದ ಅನಾಹುತಕ್ಕೆ ಪ್ರೇಕ್ಷಕನಾಗಿಯೇ ಉಳಿದುಬಿಡುವುದರಲ್ಲಿ ಲೇಖಕರು ಪ್ರಸ್ತುತ ಬದುಕಿನ ವಿಪರ್ಯಾಸವನ್ನು ವಿಷದೀಕರಿಸಿರುವರು.

ಆದರ್ಶವಾದಿಗಳಿಗೆ ಎಲ್ಲೂ ನಿಲುಗಡೆ ಇಲ್ಲ, ಉಳಿಗಾಲವಿಲ್ಲ ಎಂಬ ದಿಟಕ್ಕೆ ಸಾಕ್ಷಿಯಾಗಿ ಅರ್ಥಶಾಸ್ತ್ರ ಅಧ್ಯಾಪಕ ರಾಮಚಂದ್ರನ ಪಾತ್ರ ಸೃಷ್ಟಿಯಾಗಿದೆ. ಈತ ಕೆಸರೂರಿಗೆ ಬರುವ ಮುನ್ನವೇ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ನೆಕ್ಸಲೈಟ್ ಎಂಬ

ಭಾವನೆ ಊರಲ್ಲಿ ಪ್ರಚಾರಗೊಂಡಿರುತ್ತದೆ. ಆದರೆ ಆತನನ್ನು ನೋಡಿದಾಗ ಅದರ ಲವಲೇಶ ಛಾಯೆಯೂ ಆತನಲ್ಲಿ ಕಾಣದು. ವಾಸ್ತವದಲ್ಲಿ ಆತನೊಬ್ಬ ಆದರ್ಶಜೀವಿ. ವಿಚಾರವಾದಿ. ಜನಹಿತಕಾರಿ. ವಿದ್ಯಾರ್ಥಿಗಳಲ್ಲಿ ನೈಜವಿಚಾರ ಕ್ರಾಂತಿ ಉಂಟು ಮಾಡುವ ವ್ಯಕ್ತಿ. ಇದಕ್ಕೆ ಪ್ರತೀಕವಾಗಿ ಆತ ವಿದ್ಯಾರ್ಥಿಗಳನ್ನು ಹಲವಾರು ಸಂದರ್ಭಗಳಲ್ಲಿ ನಿಯಂತ್ರಿಸಿದ ಬಗೆ, ಅವರ ಸಮಸ್ಯೆಗಳಿಗೆ ಕಿವಿಗೊಡುವ ರೀತಿ, ಅವರನ್ನು ಇತರರ ಕಷ್ಟಗಳನ್ನು ನೆರವಾಗಲು ತೊಡಗಿಸುವ ವಿಧಾನಗಳಲ್ಲಿ ಕಾಣಬಹುದು. ಇಲ್ಲೆಲ್ಲ ರಾಮಚಂದ್ರನ ಪಾತ್ರ ಆದರ್ಶವನ್ನು ಹೊತ್ತು ಮುಂದಾಲೋಚಿಸುವ ಇಂದಿನ ವಿರಳ ಆದರ್ಶವಾದಿಗಳ ದ್ಯೋತಕವಾಗಿ ನಿಲ್ಲುತ್ತದೆ.

ಆದರ್ಶ ಪ್ರಾಯರಿದ್ದರೂ ಅವರನ್ನು ಆಶ್ರಯಿಸಿ ಕ್ರಾಂತಿಕಾರರಾಗ ಬಯಸುವ ವಿದ್ಯಾರ್ಥಿಗಳು ಯಾವ ಮಟ್ಟದವರಾಗಿರುತ್ತಾರೆ ಎಂಬ ಮಾಹಿತಿ ರಾಮಚಂದ್ರನ ಶಿಷ್ಯರಲ್ಲಿ ನಮಗೆ ದೊರೆಯುತ್ತದೆ. ವಿಚಾರ ಕ್ರಾಂತಿಯ ಬೊಬ್ಬೆಹಾಕುವ ಈ ಮಂದಿ ನೈಜ ಬದುಕಿನಲ್ಲಿ ಕೆಸರೂರಿನ ತುಂಬಿದೆದೆಯ ಲಂಗದ ಲೌಡಿಯರಿಂದ ನಿರಸನಿಗಳಾದವರು. ಹುಡುಗಿಯಿಂದಾದ ತೇಜೋವಧೆಯಿಂದ ಚೇತರಿಸಿಕೊಳ್ಳಲು ಇವರಿಗೊಂದು ಅವಲಂಬನೆ ಬೇಕಿತ್ತು. ಆ ಹೊತ್ತಿಗೆ ವರ್ಗವಾಗಿ ಬಂದ ರಾಮಚಂದ್ರನ ಮೂಲಕ ಅದು ದೊರೆತು ಅವರಿಗೆ ಒಂದು ಬಗೆಯ ನೆಮ್ಮದಿಯುಂಟಾಯಿತು. ಈಗ ಒಟ್ಟನಲ್ಲಿ ಒಳಿತೋ ಕೆಡಕೋ ಅವರಿಗೆ ಊರಲ್ಲಿ ಕ್ರಾಂತಿಯಾಗಬೇಕು ಕೊಬ್ಬಿದ ಗೂಳಿಯಂತೆ ಅವರು ಈಗ ಯಾವುದೇ ದಬ್ಬಾಳಿಕೆಯ ವಿರುದ್ಧ ಹರಿಹಾಯಬಲ್ಲರು. ಕ್ರಾಂತಿಕಾರರ ಮನೋಭಾವನೆಯನ್ನು ಹೊರಹಾಕುವಂಥ ಮಾರ್ಮಿಕ ವ್ಯಂಗ್ಯವನ್ನು ಇವರಲ್ಲಿ ತೇಜಸ್ವಿಯವರು ಧ್ವನಿಸಿ ದ್ದಾರೆ.

ಪಾಪದ ಫಲ ಪಕ್ವಾದಾಗ ದೇಹದಿಂದ ಆತ್ಮ ಬೇರೆಯಾಗುವಂತೆ ಕೆಸರೂರಿನಲ್ಲಿ ಹಲವಾರು ವರ್ಷಗಳಿಂದ ಹೊಗೆಯಾಡುತ್ತಿದ್ದ, ಕಾವುಗೊಂಡಿದ್ದ, ಸುಪ್ತವಾಗಿದ್ದ ಜನವಿರೋಧಿ, ಸಮಾಜ ವಿರೋಧಿ, ಸಂಸ್ಕೃತಿ ವಿರೋಧಿ, ದೇಶವಿರೋಧಿ ಮನೋಭಾವನೆ ಗಳು ಸಿಡಿದು ವಿಷಜ್ವಾಲೆಯಾಗಿ ಆವರಿಸಿದಾಗ ನಿರ್ಮಲ ಪ್ರೇಮಿಗಳಿಬ್ಬರು ಊರನ್ನು ಬಿಟ್ಟು ಕಾಡು ಸೇರುತ್ತಾರೆ. ಜಯಂತಿ ಊರಗೌಡನ, ಊರಿನ ಏಕಮೇವಾ ದ್ವಿತೀಯ ಸುಂದರಿ. ರಫಿ ಒಬ್ಬ ಅನಾಥ ತುರುಕ. ಇವರಿಬ್ಬರ ಪ್ರೇಮವಾದರೂ ಎಂಥದು ! ಎರಡು ಕುರುಡು ಮತಗಳನ್ನು, ಧರ್ಮಗಳನ್ನು ಮೀರಿ, ಕಾಲ, ದೇಶ ಪರಿಸ್ಥಿತಿಗಳನ್ನು ಮೀರಿ ಪ್ರಾಣದ ಹಂಗು ತೊರೆದು ಆರ್ಜಿಸಿದಂಥದ್ದು. ಈ ಪ್ರೇಮಕ್ಕೆ ಸುಸಂಸ್ಕೃತ, ವಿಚಾರ ವಾದಿಗಳ, ಕ್ರಾಂತಿಕಾರರ ಎಲ್ಲರ ಬೆಂಬಲ ದೊರೆತು ಊರಿನ ಕಲ್ಮಷದಿಂದ ಪಾರಾಗಿ ನಿರ್ಮಲ ಹವೆಯಲ್ಲಿ ತನ್ನ ಧ್ವಜ ಪತಾಕೆಯನ್ನು ಹಾರಿಸುತ್ತದೆ. ನಿರ್ಮಲ ಪ್ರೇಮ–ಪ್ರೀತಿ ಒಂದೇ ಸತ್ಯ ಉಳಿದಿದ್ದೆಲ್ಲ ಎಷ್ಟೇ ಪ್ರಬಲವಾಗಿದ್ದರೂ ಅದರ ಮುಂದೆ ಮಿಥ್ಯ ಎಂಬ ಪ್ರೀತಿಗಿರುವ ಶಕ್ತಿಯ ಚಿದಂಬರ ರಹಸ್ಯ ಬಯಲಾಗುತ್ತದೆ. ಇಲ್ಲಿ ಲೇಖಕರು ಹೊಸ ಬದುಕಿನ ಆಗಮನ, ಹೊಸ ಸೃಷ್ಟಿ, ಅದರ ಹಿಂದೆ ಪ್ರೀತಿಯ ಚಿರಂತನತೆಯನ್ನು ಸಾರುತ್ತ ತನ್ಮೂಲಕ ಇಂದಿನ ಪ್ರಕ್ಷುಪ್ತ ಮಲಿನ ಬದುಕನ್ನು ಪ್ರೀತಿಯಿಂದಲೇ

ತಿಳಿಗೊಳಿಸಲು ಸಾಧ್ಯ ಎಂಬ ಸಾರ್ವಕಾಲಿಕ ಮಾನವೀಯ ಮೌಲ್ಯವನ್ನು ಪ್ರತಿಫಲಿಸುತ್ತಾರೆ.

ಕಾದಂಬರಿಯ ಪಾತ್ರ ಚಿತ್ರಣಗಳಲ್ಲಿಂತೋ ಅಂತೆಯೆ ಕಾದಂಬರಿಯ ನಿರ್ವಹಣೆಯಲ್ಲಿಯೂ ತೇಜಸ್ವಿ ಅವರು ತಮ್ಮ ಅಮೋಘ ಕೌಶಲವನ್ನು ಪ್ರದರ್ಶಿಸಿದ್ದಾರೆ. ಪತ್ತೇದಾರಿ ಕಾದಂಬರಿಯ ಧಾಟಿಯಲ್ಲಿ ಕುತೂಹಲ ಕೆರಳಿಸುತ್ತಾ ಹೋಗುವ ಕಾದಂಬರಿ ತನ್ನ ಬಂಧವನ್ನುಳಿಸಿಕೊಂಡೇ ಹಲವಾರು ಪದರಗಳಲ್ಲಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ಹೀಗೆ ಕಥನಗತಿ ಹಾಯುವಾಗ ಅನೇಕ ಬಗೆಯ ಜನರನ್ನು ಅನಾವರಣಗೊಳಿಸಿ, ಘಟನೆಗಳನ್ನು ಚಿತ್ರಿಸಿ, ಅನೇಕ ಸಾಮಾಜಿಕ ಸತ್ಯಗಳನ್ನು ಬಯಲಿಗಿಡುತ್ತದೆ. ಎಲ್ಲಿಯೂ ಅನಗತ್ಯ ಭಾವೋದ್ವೇಗವಾಗಲಿ, ರಂಜಕ ಸಾಮಗ್ರಿಯಾಗಲಿ ವೈಚಾರಿಕ ಭಾಷಣ, ಉಪದೇಶಗಳಾಗಲಿ ಎಡೆತಾಕದಿರುವುದೊಂದು ವಿಶೇಷ. ವಿರಳವಾಗಿ ಬರುವ ದೀರ್ಘ ಮಾತಿನ ಎಳೆಗಳೂ ಕಾದಂಬರಿಯ ನಡೆಗೆ ಪೂರಕವಾಗಿದ್ದು, ಓದುಗರ ಅಭಿರುಚಿಗೆ ಆರ್ದ್ರವೂ ಆಗಿ ಬಂದಿರುವುದನ್ನು ಗ್ರಹಿಸಬಹುದು. ನಿರಾಡಂಬರ ನೇರನಡೆಯೇ ಇಲ್ಲಿನ ಭಾಷೆಯ ಸ್ವಾರಸ್ಯ. ನಿರ್ದಿಷ್ಟ ಪರಿಸರದಲ್ಲಿ ಕಥಾವಸ್ತು ನಡೆದರೂ ಶಿಷ್ಟಗ್ರಾಮ್ಯದ ಗೋಜು ಗೊಂದಲಗಳಿಲ್ಲದೆ ಕಾದಂಬರಿ ಸಾಗುತ್ತದೆ. ಪಾತ್ರದ ಔಚಿತ್ಯವರಿತ ಪದ ಪ್ರಯೋಗ ಇಲ್ಲಿ ಎದ್ದು ಕಾಣುವಂಥದ್ದು. ಬಯ್ಗುಳುಗಳ ಬಗೆಗೆ ಕಾದಂಬರಿಕಾರರಲ್ಲಿ ನಿಸ್ಸಂಕೋಚತೆಯಿದೆ. ಕಾದಂಬರಿಕಾರರೇ ನಿರೂಪಕರಾಗಿ ಆಯಾಯ ಪಾತ್ರಗಳಿಗೆ ವಿಶ್ಲೇಷಣೆಯನ್ನು ಕಾದಂಬರಿಯಲ್ಲಿ ಒದಗಿಸಿರುವುದರಿಂದ ಓದುಗರ ವಿಚಾರಕ್ಕೆ ಸೊನ್ನೆಯಾಗಿದ್ದರೂ, ಹೊಸ ಬಗೆಯ ಈ ತಂತ್ರದಿಂದ ಪಾತ್ರಗಳ ಸ್ಥಾನ ನಿರ್ದೇಶನಕ್ಕೆ ಇನ್ನೂ ಹೆಚ್ಚಿನ ಬಿಗಿ ದೊರತಂತಾಗಿದೆ. ಉದಾಹರಣೆಗೆ ಆಚಾರಿಯ ಪಾತ್ರದ ವಿಶ್ಲೇಷಣೆ ನೋಡಿ ; "ಆಚಾರಿಯದು ಮಹಾ ಪ್ರಳಯಾಂತಕ ತಲೆ. ಅವನನ್ನು ತಲೆ ಬಿಸಿ ಆಚಾರಿ ಎಂದೇ ಎಲ್ಲ ಕರೆಯುತ್ತಿದ್ದರು. ಆಚಾರಿಯ ಕುತಂತ್ರ ಬುದ್ಧಿಗಾಗಿ ಹೆದರಿಯೇ ಬಹುವಚನದಲ್ಲಿ ಆತನನ್ನು ಮಾತನ್ನಾಡಿಸುತ್ತಿದ್ದರು. ಆಚಾರಿಗೆ ಕಚ್ಚೆ ಹರಕು ಬುದ್ಧಿ ಇಲ್ಲದಿದ್ದರೆ ಅವನು ಈ ವೇಳೆಗಾಗಲೆ ಸುಲೇಮಾನ್ ಬೇರಿಯನ್ನು ಮಾರಿಸುವಂಥ ಕುಳವಾಗಿರುತ್ತಿದ್ದ. ಆದರೆ ಆತನಿಗೆ ಪ್ರಪಂಚದಲ್ಲಿ ಹೆಂಗಸಿನ ಮುಕುಳಿ ಒಂದನ್ನು ಬಿಟ್ಟು ಇನ್ಯಾವುದಕ್ಕೂ ಆಸೆಯಾಗಲಿ ಬೆಲೆಯಾಗಲಿ ಇರಲಿಲ್ಲ" (ಪು. ೧೩೩) ಈ ಮಾತು ಕಾದಂಬರಿಯಲ್ಲಿ ಆ ಪಾತ್ರದೊಂದಿಗೇ ಮಿಡಿಯುವುದನ್ನು ನೋಡಬಹುದು.

ಕಾದಂಬರಿಕಾರರ ಪ್ರಕೃತಿ ಪ್ರಿಯತೆ, ಅದರ ಸೂಕ್ಷ್ಮಾವಲೋಕನ ಹರಳುಗಟ್ಟಿರುವುದನ್ನು ಕೆಸರೂರಿನ ವರ್ಣನೆಯಲ್ಲಿ ಕಾಣಬಹುದು. "ಕೆಸರೂರಿನ ಸುತ್ತಲೂ ಪರ್ವತಗಳು ಒಂದರ ಹಿಂದೆ ಒಂದರಂತೆ ಒಟ್ಟಿಗೆ ಮಲಗಿದ ಬಸವನ ಮುಂದೆಯತರ ಹಬ್ಬಿಕೊಂಡಿದ್ದವು. ದಟ್ಟ ಅರಣ್ಯ ಈ ಗುಡ್ಡಗಳನ್ನು ಕಂಬಳಿ ಹೊದಿಸಿದಂತೆ ಮುಚ್ಚಿಕೊಂಡಿತ್ತು. ಎಲ್ಲ ಮರಗಳೂ ಒಟ್ಟಾಗಿ ಇಡೀ ಗುಡ್ಡವೇ ಒಂದೇ ಒಂದು ಭೂತಾಕಾರದ ಮರದಂತೆ ಕಾಣುತ್ತಿತ್ತು. ಸಂಜೆಯಾಗುತ್ತಲೆ ಕಡಲತ್ತಣಿಂದ ಹಾಯ್ದು ಬರುವ ತೇವದ ಹವೆ ಮಂಜಿನ ಮೋಡವಾಗಿ ಪರಿವರ್ತನೆಗೊಂಡು ಆ ಬೆಟ್ಟಗಳ ನಡುವಿನಿಂದ ಕೆಸರೂರಿನ ಮೇಲೆ ಹರಿಯುತ್ತದೆ. ಇಡಿಯ ಕೆಸರೂರನ್ನು ಒಂದು ಮಾಯಾಲೋಕವನ್ನಾಗಿ

ಮಾಡುತ್ತದೆ" (ಪು. ೪೩-೪೪)—ಸರಳವಾದ ಪದ ಪುಂಜಗಳಿಂದ ಇಂಥ ರಮ್ಯ ಮನಮೋಹಕ ಚಿತ್ರಣವನ್ನು ನವಿರಾಗಿ ಕೊಡಬಲ್ಲ ತೇಜಸ್ವಿಯವರು ಭಯಂಕರ ಘಟನೆಯೊಂದನ್ನು ಹೀಗೆ ಸೆರೆಹಿಡಿದಿದ್ದಾರೆ "....ಟಾರ್ ಯಂತ್ರದ ಉಕ್ಕಿನ ಡೊಳ್ಳು ಹೊಟ್ಟೆ 'ಭೂಮ್' ಎಂದು ಇಡೀ ಕಾಡುಗಿರಿ ಕಂದರವೆಲ್ಲಾ ನಡುಗುವಂತೆ ಘರ್ಜಿಸಿ ಸಿಡಿಯಿತು. ಆ ನಾಲ್ವರಿಗೆ ಸದ್ದು ಕೇಳಿದ್ದಷ್ಟೇ ಗೊತ್ತು. ಅದರ ಹಿಂದೆಯೆ ಕುದಿಯುವ ಟಾರಿನ ಬಿರುಮಳೆ ಬಂದೆರಗಿತು. ಟಾರಿನ ಆವಿಗೆ ಹಿಡಿದ ಜ್ವಾಲೆ ಇವರ ಮೈಗೂ ಹತ್ತಿಕೊಂಡಿತು. ಮೈಕೈ ಬೆಂಕಿಯಾದುದನ್ನು ಕಂಡು ನಾಲ್ವರೂ ಓಡೋಡಿ ಬೀದಿಬದಿಯ ಮರಳಿನಲ್ಲಿ ಹೊರಳಾಡಿದರು. ಬೆಂಕಿ ನಂದಿತು. ಆದರೆ ಬಿಸಿಟಾರಿಗೆ ಮರಳು ಮಣ್ಣು ಚೆನ್ನಾಗಿ ಮೆತ್ತಿಕೊಂಡು ಕರಿಯ ಗಿಲಾವು ಮೈಯೆಲ್ಲ ಹಿಡಿಯಿತು. ರೆಪ್ಪೆಯ ಮೇಲೆಲ್ಲಾ ಕುಳಿತಿದ್ದ ಟಾರಿನ ಭಾರಕ್ಕೆ ಕಣ್ಣು ತೆರೆಯಲು ಇವರಿಗೆ ಕಷ್ಟವಾಗಿತ್ತು. ಮೈಯೆಲ್ಲ ಭಯಂಕರ ಉರಿ 'ಅಯ್ಯೋ ಅಮ್ಮ' ಎಂದು ಕೂಗಿಕೊಂಡು ಕೆಸರೂರಿನ ಕಡೆಗೆ ಓಡತೊಡಗಿದರು. ಓಡೋಡುತ್ತಿದ್ದಂತೆಯೇ ಹೆಜ್ಜೆಯ ಸ್ಪಂದನಕ್ಕೆ ಮೆತ್ತಿಕೊಂಡ ಭಾರದ ಟಾರು ಜಗ್ಗಿ ಬೆಂದ ಚರ್ಮ ಟಾರಿನೊಡನೆ ಸುಲಿದು ಇಳಿಯಲಾರಂಭಿಸಿತು" (ಪು. ೨೨೬). ಎಂಥ ಭೀಭತ್ಸ ವರ್ಣನೆ! ಊಹಿಸಬಲ್ಲವರಾದರೆ ಹೃದಯ ಬಾಯಿಗೆ ಬರುತ್ತದೆ!! ಹತ್ತು ವಾಕ್ಯಗಳಲ್ಲಿ ಹೇಳಿ ವಿವರಿಸಬಹುದಾದ್ದನ್ನು ಒಂದು ವಾಕ್ಯದಲ್ಲಿ ದುಡಿಸಿಕೊಳ್ಳುವ ಶಕ್ತಿ ಲೇಖಕರಿಗಿರುವುದು ಅವರ ಬರವಣಿಗೆಯ ಇನ್ನೊಂದು ಗುಟ್ಟು. ಇಂಗ್ಲಿಷ್‌ಗೌಡ ಹೆದರಿಕೊಂಡಾಗ ಅವನಿಗರಿವಿಲ್ಲದೆಯೆ ಏನು ಮಾಡುತ್ತಿದ್ದ ಎಂಬುದನ್ನು ಒಂದೇ ವಾಕ್ಯದಲ್ಲಿ ಹೀಗೆ ಹೇಳುತ್ತಾರೆ "ಅವನಿಗೆ ಗಾಬರಿಯಾದಾಗಲೆಲ್ಲಾ ಅವನ ಕಾಲುಗಳು ಒಲಂಪಿಕ್ ಓಟಗಾರನಂತೆ ಅದ್ಭುತವಾಗಿ ಕೆಲಸ ಮಾಡುತ್ತಿದ್ದವು" (ಪು. ೨೧೫) ಈ ಮಾತು ಹಾಸ್ಯದೊಂದಿಗೇ ಆ ಪಾತ್ರದ ಪುಕ್ಕಲತನವನ್ನು ಮಾನಸಿಕ ಒಳತೋಟೆಯನ್ನು ವ್ಯಕ್ತಪಡಿಸುವಂಥದ್ದಾಗಿದೆ. ಹಾಗೆಯೇ ಕೃಷ್ಣೇಗೌಡರ ಈ ಮಾತನ್ನು ಗಮನಿಸಿ. "ನನಗೆ ಮನೆ ಒಳಗೂ ತಾಪತ್ರಯ, ಮನೆ ಮೇಲೂ ತಾಪತ್ರಯ ಮನೆ ಹೊರಗೂ ತಾಪತ್ರಯ" ಎಂಬ ಮಾತು ಅತನ ಸಮಸ್ಯೆಗಳ ನೆಲೆಯನ್ನು ಶೋಧಿಸುತ್ತವೆ. ಕೃಷ್ಣೇಗೌಡನ ಪರಿಚಯವಿರುವ ಯಾರಿಗಾದರೂ ಈ ಮಾತಿನ ಸತ್ಯಾಸತ್ಯತೆ, ಸಮಸ್ಯೆಗಳ ಸೈಜತೆ ಅನುಭವಕ್ಕೆ ತಟ್ಟದಿರದು—ಹೀಗೆ ಹಲವಾರು ನಿದರ್ಶನಗಳಿಂದ ಲೇಖಕರ ವರ್ಣನಾ ಸಾಮರ್ಥ್ಯವನ್ನು ಬರವಣಿಗೆಯ ಶೈಲಿಯನ್ನು ಒರೆಹಚ್ಚಬಹುದು.

ಕಾದಂಬರಿಯ ಹೆಸರಾಗಲಿ, ಕಾದಂಬರಿಯೊಳಗಣ ಕಥೆ ಜರಗುವ ಊರಿನ ಹೆಸರಾಗಲಿ ತುಂಬ ಮಹತ್ವದವು; ಧ್ವನಿಪೂರ್ಣವಾದಂಥವು. ಕೆಸರೂರಿನ ಕೆಸರು ಭಾರತದ ಯಾವ ಊರಿನಲ್ಲೂ ಇರುವಂಥದ್ದೆ! ಕಾದಂಬರಿಯ ಚಿದಂಬರ ರಹಸ್ಯ ಇಂದಿನ ನಮ್ಮ ಸಮಕಾಲೀನ ಬದುಕಿನಲ್ಲಿ ಬೇರುಬಿಟ್ಟಿರುವ ಹತ್ತು ಹಲವು ಸಂಗತಿಗಳ ಸಂಗಮ. ಶಾಮೇಗೌಡ ಅಂಗಾಡಿ ಬಂಗಾಳಿಗಳ ನಡುವೆ ಶಾಮನಂದನ ಅಂಗಾಡಿಯಾಗಬೇಕಾಗಿ ಬಂದ ಬದುಕಿನ ಬವಣೆಗೂ, ರಾಮಪ್ಪ ತನ್ನ ತಪ್ಪೇನು ಇಲ್ಲದಿದ್ದರೂ ರೂಪಸಾಮ್ಯದಿಂದ ಇಂಗ್ಲಿಷ್‌ಗೌಡ ಎಂದು ಕರೆಸಿಕೊಳ್ಳುವಲ್ಲಿನ ವ್ಯಂಗ್ಯಕ್ಕೂ ಸಾಮಾಜಿಕ ವೈಚಿತ್ರ್ಯವೇ ಕಾರಣವಲ್ಲವೆ? ಇದು ಇಂದಿನ ವಸ್ತುಸ್ಥಿತಿ ಕೂಡ.

ಒಟ್ಟಿನಲ್ಲಿ ಕಾದಂಬರಿಯು ಕೇಂದ್ರಪ್ರಜ್ಞೆ ನಾಡಿನ ಇಂದಿನ ಪರಿಸ್ಥಿತಿಯನ್ನು ಯಥಾವತ್ತಾಗಿ ಅರ್ಥವತ್ತಾಗಿ ಪ್ರತಿಬಿಂಬಿಸುವಂಥದ್ದು. ಒಂದು ಊರನ್ನು ಪ್ರತಿನಿಧಿಸಿ ನಾಡನ್ನು ಎಚ್ಚರಿಸುವ ಸಾರ್ವತ್ರಿಕ ಮೌಲ್ಯವನ್ನು ಒಳಗೊಂಡಿರುವಂಥದ್ದು. ಸ್ವಾರ್ಥಿಗಳು ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವ ಚಪಲದಲ್ಲಿ ಊರನ್ನು ತನ್ಮೂಲಕ ನಾಡನ್ನು ಕಡೆಗೆ ತಮ್ಮನ್ನು ತಾವೇ ವಿನಾಶದ ಅಂಚಿಗೆ ಹೇಗೆ ಕೊಂಡೊಯ್ಯುತ್ತಾರೆಂಬ ನಿತ್ಯಸತ್ಯವನ್ನು ಬಯಲಿಗಿಡುವಂಥದ್ದು. ಇದಕ್ಕಾಗಿ ಬಳಸಿರುವ ಕಥಾವಸ್ತುವಾದರೂ ಹಲವು ಆಯಾಮಗಳಿಂದ ಕೂಡಿದ್ದು; ಕನ್ನಡ ಕಾದಂಬರಿ ಕ್ಷೇತ್ರದಲ್ಲೇ ವಿನೂತನವಾದದ್ದು; ವೈವಿಧ್ಯತೆಯಿಂದ ಕೂಡಿದ್ದು. ಜೊತೆಗೆ ಅದರ ನಿರ್ವಹಣೆ, ತಂತ್ರ, ಪಾತ್ರಗಳ ಚಿತ್ರಣ, ಕಥನಕ್ರಿಯೆ ಕುಶಲಶಿಲ್ಪಿಯೊಬ್ಬನ ಕುಸರಿ ಕೆಲಸದಷ್ಟು ನೈಪುಣ್ಯಯುಕ್ತವಾಗಿರುವಂಥದ್ದು.

---

ಸತ್ಯ ಒಂದು ದೊಡ್ಡ ಮರ ಇದ್ದಂತೆ. ಅದರ ಸ್ನೇಹ ಮಾಡಿದಷ್ಟೂ ಫಲಗಳು ಹೆಚ್ಚುತ್ತವೆ.

ತನಗೆ ಅಗತ್ಯವಿದ್ದಷ್ಟನ್ನು ಮಾತ್ರ ಪಡೆಯುವುದು ಧರ್ಮ. ಅಗತ್ಯಕ್ಕಿಂತ ಹೆಚ್ಚಾಗಿ ಪಡೆದರೆ ಕಳ್ಳತನ ಮಾಡಿದಂತೆಯೇ.

ಗಾಂಧೀಜಿ

# ವಯಸ್ಕರ ಶಿಕ್ಷಣದಲ್ಲಿ ಜನಸಂಖ್ಯಾ ಶಿಕ್ಷಣ

**ಸ. ರ. ಸುದರ್ಶನ**

ನಮ್ಮ ದೇಶದ ಜನಸಂಖ್ಯೆ ಎಲ್ಲ ತಜ್ಞ ಅಂದಾಜುಗಳನ್ನೂ ಮೀರಿ ಸಾಗಿರುವುದು ೧೯೮೧ರ ಜನಗಣತಿಯಿಂದ ವ್ಯಕ್ತವಾಗಿದೆ. ಪ್ರಸ್ತುತ ಜನಸಂಖ್ಯೆ ೬೮.೪ ಕೋಟಿ ಇದ್ದು, ೧೯೭೧ರಲ್ಲಿ ಇದ್ದುದಕ್ಕಿಂತ ೧೩.೫ ಕೋಟಿ ಹೆಚ್ಚಿದೆ. ನಮ್ಮ ದೇಶದ ಜನಸಂಖ್ಯೆ ೧೯೪೧ ರಿಂದ ೧೯೫೧ರವರೆಗಿನ ಅವಧಿಯಲ್ಲಿ ಶೇ. ೧೩.೩೧ರಷ್ಟು ಬೆಳೆದಿದ್ದರೆ, ೧೯೭೧–೮೧ರವರೆಗಿನ ಅವಧಿಯಲ್ಲಿ ಶೇ. ೨೫ರಷ್ಟು ಬೆಳೆದಿದೆ. ೧೯೪೧–೫೧ರ ದಶಕದಲ್ಲಿ ೧೩.೬ ಕೋಟಿ ಮಕ್ಕಳು ಹುಟ್ಟಿದ್ದರೆ, ೧೯೭೧–೮೧ ದಶಕದಲ್ಲಿ ೨೨.೯ ಕೋಟಿ ಮಕ್ಕಳು ಹುಟ್ಟಿವೆ. ಆದರೆ ಮರಣ ಸಂಖ್ಯೆ ೧೯೪೧–೫೧ರಲ್ಲಿ ೯.೩ ಕೋಟಿ ಇದ್ದುದು, ೧೯೭೧–೮೧ರಲ್ಲಿ ೯.೧ ಕೋಟಿಗೆ ಇಳಿದಿದೆ. ಭವಿಷ್ಯ ವಿಜ್ಞಾನಿಗಳ ಪ್ರಕಾರ ಇದೇ ಪ್ರವೃತ್ತಿ ಮುಂದುವರಿದಲ್ಲಿ, ಭಾರತದ ಜನಸಂಖ್ಯೆ ಈ ಶತಮಾನದ ಕೊನೆಯ ವೇಳೆಗೆ ೧೦೦ ಕೋಟಿ ಮುಟ್ಟುವ ನಿರೀಕ್ಷೆ ಇದೆ.

ಭಾರತ ಸ್ವಾತಂತ್ರ್ಯಾನಂತರ ಹಲವು ದಿಸೆಯಲ್ಲಿ ಪ್ರಗತಿ ಸಾಧಿಸಿದೆ. ಆದರೆ ಇನ್ನೂ ಹೆಚ್ಚೆಚ್ಚು ಜನರು ಬಡತನದ ರೇಖೆಯ ಕೆಳಗೇ ಇದ್ದಾರೆ. ಈ ಜನ ಬಹುಮಟ್ಟಿಗೆ ದೊಡ್ಡ ಕುಟುಂಬವುಳ್ಳ ಅನಕ್ಷರಸ್ಥರು ಎಂಬುದು ಸಮೀಕ್ಷೆಗಳಿಂದ ಶ್ರುತಪಟ್ಟಿದೆ. ಆದರೆ ಶಿಕ್ಷಣ, ಆದರಲ್ಲೂ ಮಹಿಳಾ ಸಾಕ್ಷರತೆ, ಸಣ್ಣ ಕುಟುಂಬ ಸಂಹಿತೆಯ ಅಂಗೀಕಾರಕ್ಕೆ ಹೆಚ್ಚು ಉತ್ತೇಜಕವಾದ ಅಂಶವಾಗಿದೆ.

ಪ್ರಸ್ತುತ ನಮ್ಮಲ್ಲಿ ೪೨.೩೩ ಕೋಟಿ ಅನಕ್ಷರಸ್ಥರು ಇದ್ದಾರೆ. ಈಗಿನ ಸಂತಾನೋತ್ಪತ್ತಿ ದರ ೧.೬೭ ಎಂದು ಅಂದಾಜು ಮಾಡಿದ್ದು, ೨೦೦೧ ಇಸವಿಗೆ ಅದನ್ನು ೧ಕ್ಕೆ ಇಳಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಆದರೆ ಪ್ರತಿ ದಂಪತಿಗಳಿಗೆ ಮಕ್ಕಳ ಸಂಖ್ಯೆ ೪.೨ ರಿಂದ ೨.೩ಕ್ಕೆ ಇಳಿಯಬೇಕಾಗಿದೆ.

ಜನಸಂಖ್ಯಾ ನಿಯಂತ್ರಣವನ್ನು ತೀವ್ರಗೊಳಿಸಲು ಹೊಸ ತಂತ್ರವನ್ನು ಹಮ್ಮಿಕೊಳ್ಳಲಾಗಿದೆ. ಜನಸಂಖ್ಯಾ ಸಮಸ್ಯೆಯ ಬಗ್ಗೆ ಅರಿವನ್ನು ಬೆಳೆಸಿ, ಉತ್ತಮ ಜೀವನ ಗುಣಮಟ್ಟಕ್ಕೆ ಪ್ರೇರೇಪಿಸುವ ಅಂಶಗಳನ್ನು ಶಿಕ್ಷಣದಲ್ಲಿ ಅಡಕಗೊಳಿಸುವುದೇ ಆ ಹೊಸ ತಂತ್ರವಾಗಿದೆ. ಇದೀಗ ಅದನ್ನು ವಯಸ್ಕರ ಶಿಕ್ಷಣಕ್ಕೂ ವಿಸ್ತರಿಸಲಾಗಿದೆ.

ರಾಷ್ಟ್ರೀಯ ಸಾಕ್ಷರತಾ ನಿಯೋಗದ ಆಶಯದಂತೆ ೧೯೯೫ರ ವೇಳೆಗೆ ಎಂಟು ಕೋಟಿ ಅನಕ್ಷರಸ್ಥರನ್ನು ವಯಸ್ಕರ ಶಿಕ್ಷಣದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಅದರಲ್ಲಿ ೧೫-೩೫ ವಯಸ್ಸಿನ ಜನರಿಗೆ ಹೆಚ್ಚು ಒತ್ತು ಇರುತ್ತದೆ. ಆದ್ದರಿಂದ ಆ ಸಮುದಾಯಕ್ಕೆ ನೀಡುವ ಶಿಕ್ಷಣದಲ್ಲಿ ಜನಸಂಖ್ಯಾ ಅಂಶಗಳು, ಸಾಮಾಜಿಕ-ಆರ್ಥಿಕ ಅಭಿವೃದ್ಧಿಯೊಂದಿಗೆ ಅವುಗಳ ಸಂಬಂಧ, ಕುಟುಂಬ ಆರೋಗ್ಯ, ಕುಟುಂಬ ಜೀವನ ಮುಂತಾದ ಅಂಶಗಳನ್ನೊಳಗೊಂಡ 'ಜನಸಂಖ್ಯಾ ಶಿಕ್ಷಣ'ವನ್ನು ಅಡಕಗೊಳಿಸಲು ಯೋಜಿಸಲಾಗಿದೆ.

ಜನಸಂಖ್ಯಾ ಶಿಕ್ಷಣ ಎಂದರೆ ಕುಟುಂಬ ಯೋಜನೆಯ ಪ್ರಚಾರವಲ್ಲ. ಅದರೆ ತೀವ್ರವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ನಿಯಂತ್ರಣಕ್ಕಾಗಿ ವ್ಯಕ್ತಿಗಳ ಮನೋಭಾವದಲ್ಲಿ ಆಗಬೇಕಾದ ಬದಲಾವಣೆಯನ್ನು ತರುವ ಪ್ರಯತ್ನವಾಗಿದೆ.

ಜನಸಂಖ್ಯಾ ಸಮಸ್ಯೆಗೆ ಪ್ರತಿಯೊಂದು ಕುಟುಂಬವಲ್ಲದೆ, ಪ್ರತಿಯೊಬ್ಬ ವ್ಯಕ್ತಿಯೂ ಕಾರಣನಾಗಿದ್ದಾನೆ. ತನ್ನ ವೈಯಕ್ತಿಕ ಕ್ರಿಯೆಯೇ ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಬೆಳೆಯುವುದಕ್ಕೆ ಕಾರಣ ಎಂಬ ಮೂಲಭೂತ ಪ್ರಜ್ಞೆ ಅನೇಕ ವ್ಯಕ್ತಿಗಳಲ್ಲಿ ಇಲ್ಲವಾಗಿದೆ. ಅಂತಹ ಪ್ರಜ್ಞೆಯನ್ನು ಮೂಡಿಸುವುದೇ ಜನಸಂಖ್ಯಾ ಶಿಕ್ಷಣ.

ಜನಸಂಖ್ಯಾ ಸಮಸ್ಯೆಗೆ ಕಾರಣವಾದ ಅನೇಕ ಮನೋಸಾಮಾಜಿಕ ಕಟ್ಟಳೆಗಳಾದ ಮೂಢನಂಬಿಕೆ, ಗೊಡ್ಡು ಸಂಪ್ರದಾಯ, ಆಚಾರ ವಿಚಾರಗಳ ಸುಳಿಯಲ್ಲಿ ಸಿಲುಕಿದವನನ್ನು ಕಟ್ಟಳೆಗಳಿಂದ ಬಂಧಮುಕ್ತನನ್ನಾಗಿ ಮಾಡುವುದೇ ಜನಸಂಖ್ಯಾ ಶಿಕ್ಷಣ.

ಚಿಕ್ಕ ಕುಟುಂಬ ಎಂಬುದು ಸಾಮಾಜಿಕ ಕಟ್ಟಳೆಯಾಗುವಂತೆ ಶ್ರಮಿಸುವುದಕ್ಕೆ ಜನಸಂಖ್ಯಾ ಶಿಕ್ಷಣ ಬದ್ಧವಾಗಿದೆ.

ಸಮಸ್ಯೆಗೆ ಏನು ಕಾರಣ ಎಂಬ ಪ್ರಜ್ಞೆ ವ್ಯಕ್ತಿಯಲ್ಲಿ ಮೂಡಿದರೆ ಸಾಲದು, ಆದರ ಪರಿಹಾರದಲ್ಲಿಯೂ ತಾನು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂಬ ಜವಾಬ್ದಾರಿಯ ಪ್ರಜ್ಞೆ ಮೂಡಿಸುವುದೇ ಜನಸಂಖ್ಯಾ ಶಿಕ್ಷಣ.

ಜನಸಂಖ್ಯಾ ಸಮಸ್ಯೆಯನ್ನು ಬಿಡಿಸಲು 'ಕುಟುಂಬ ಯೋಜನೆ' ಒಂದು ವೈದ್ಯಕೀಯ ಮಾರ್ಗವಾದರೆ ಜನಸಂಖ್ಯಾ ಶಿಕ್ಷಣ ಒಂದು ಶೈಕ್ಷಣಿಕ ಮಾರ್ಗ.

ಶೈಕ್ಷಣಿಕ ಮಾರ್ಗದಿಂದ ಜನತೆಯು ಮಾನಸಿಕವಾಗಿ ವೈದ್ಯಕೀಯ ಮಾರ್ಗವನ್ನು ಅನುಸರಿಸುವಂತೆ ಪ್ರೇರೇಪಿಸುವುದು, ಜನಸಂಖ್ಯಾ ಸಮಸ್ಯೆಗೆ ಹೊಸ ನಿವಾರಣಾ ತಂತ್ರವಾಗಿದೆ.

ಒಟ್ಟಿನಲ್ಲಿ ಜನಸಂಖ್ಯಾ ಸಮಸ್ಯೆಯಿಂದ ಉದ್ಭವವಾಗಿರುವ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಅವಶ್ಯಕವಾದ ಮನೋಭಾವ, ಜವಾಬ್ದಾರಿ ಹಾಗೂ ನಡವಳಿಕೆ

ಗಳನ್ನು ವ್ಯಕ್ತಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ಅವರಿಗೆ ಕುಟುಂಬ, ಸಮಾಜ, ರಾಷ್ಟ್ರ ಹಾಗೂ ವಿಶ್ವದ ಜನಸಂಖ್ಯಾ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಒಂದು ಶೈಕ್ಷಣಿಕ ಕಾರ್ಯಕ್ರಮವೇ ಜನಸಂಖ್ಯಾ ಶಿಕ್ಷಣ.

ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಮೂರು ಅಂಗಗಳಿವೆ. ೧) ಅರಿವು ೨) ಕ್ರಿಯಾಶೀಲತೆ ೩) ಸಾಕ್ಷರತೆ.

ಅರಿವು ಶೀರ್ಷಿಕೆಯಡಿಯಲ್ಲಿ ವಯಸ್ಕರಿಗೆ ಜನಸಂಖ್ಯಾ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮದ ಆರಂಭದಿಂದಲೇ ಜನತೆಯ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯ ಮೇಲೆ ಜನಸಂಖ್ಯೆ ಹೆಚ್ಚಳ, ಪರಿಸರ ಸಮಸ್ಯೆಗಳು, ಸಮುದಾಯ ಕಲ್ಯಾಣ ಮುಂತಾದ ಜನಸಂಖ್ಯಾ ಸಂಬಂಧದ ವಿಷಯಗಳು, ವಯಸ್ಕರ ಶಿಕ್ಷಣ ಕೇಂದ್ರ ಗಳಲ್ಲಿ ಬಳಸುವ ಬೋಧನಾ ಹಾಗೂ ಕಲಿಕೆಯ ಸಾಮಗ್ರಿಗಳಲ್ಲಿ ಸೇರಿಕೆಯಾಗಿವೆ. ಕ್ಷೇತ್ರ ಕಾರ್ಯಕರ್ತರಿಗೆ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಜನ ಸಂಖ್ಯಾ ಚಲನಶಾಸ್ತ್ರದ ಅಂದರೆ ಸ್ಥಿತಿಗತಿಯ ವೈಶಿಷ್ಟ್ಯಗಳನ್ನು ಅವರ ತರಬೇತಿಯ ಭಾಗವಾಗಿ ಸೇರಿಸಲಾಗಿದೆ.

ಆದರೆ ಅವು ಅಸಮರ್ಪಕ ಹಾಗೂ ಅಪರಿಪೂರ್ಣವೆಂದು ಸಮೀಕ್ಷೆಗಳಿಂದ ವ್ಯಕ್ತ ವಾದ ಮೇಲೆ, ಜನಸಂಖ್ಯಾ ಶಿಕ್ಷಣವನ್ನು ವ್ಯವಸ್ಥಿತವಾಗಿ ವಯಸ್ಕರ ಶಿಕ್ಷಣದಲ್ಲಿ ಸಮನ್ವಯಗೊಳಿಸುವ ಅಗತ್ಯ ಹೆಚ್ಚಾಯಿತು. ವಯಸ್ಕರ ಕಲಿಕೆಗೆ ಮೀಸಲಾದ ಸಾಮಗ್ರಿಗಳಲ್ಲಿ ಜನಸಂಖ್ಯಾ ಶಿಕ್ಷಣದ ಸಾಮಗ್ರಿ ಹಾಗೂ ಸಂದೇಶಗಳನ್ನು ಪರಿಣಾಮ ಕಾರಿಯಾಗುವಂತೆ ಸೇರಿಸಬೇಕಾಯಿತು.

ಪ್ರಸ್ತುತ ವಯಸ್ಕರ ಶಿಕ್ಷಣ ಕಾರ್ಯಕ್ರಮ ಮೂರು ಹಂತಗಳದ್ದಾಗಿದೆ. ಮೂಲ ಸಾಕ್ಷರತಾ ಹಂತ, ಸಾಕ್ಷರೋತ್ತರ ಹಂತ, ಸ್ಥಿರೀಕರಣ ಹಂತ—ಇವೇ ಆ ಮೂರು ಹಂತಗಳು. ಒಂದನೇ ಮತ್ತು ಎರಡನೇ ಹಂತಕ್ಕೆ ಒಂದು ವರ್ಷದ ಅವಧಿಯಲ್ಲಿ ಕ್ರಮವಾಗಿ ೩೦೦-೩೫೦ ಗಂಟೆಗಳು ಹಾಗೂ ೧೫೦ ಗಂಟೆಗಳನ್ನು ನಿಗದಿ ಮಾಡಿದೆ. ಮೂಲ ಸಾಕ್ಷರತಾ ಹಂತ ಎಂಟು ತಿಂಗಳ ನಂತರವೂ ಸಾಕ್ಷರೋತ್ತರ ಹಂತ ಮುಂದಿನ ನಾಲ್ಕು ತಿಂಗಳ ನಂತರವೂ ಪೂರ್ಣಗೊಳ್ಳುತ್ತದೆ. ಕಲಿಯುವವರಲ್ಲಿ ಕಲಿಕೆಯ ಕೌಶಲ ಗಳನ್ನು ಶಕ್ತಿಯುತಗೊಳಿಸಲು ಮತ್ತು ಅವರಲ್ಲಿ ತಾವಾಗಿಯೇ ಕಲಿಯುವ ಪ್ರವೃತ್ತಿ ಮೂಡಿಸಲು ಒಂದು ವರ್ಷದ ಅವಧಿಯಲ್ಲಿ ೧೦೦ ಗಂಟೆಗಳಿಗೆ ವ್ಯಾಪಿಸಿದ ಮೂರನೇ ಹಂತವೇ ಸ್ಥಿರೀಕರಣ ಹಂತ. ಆದರೆ ರಾಷ್ಟ್ರೀಯ ಸಾಕ್ಷರತಾ ನಿಯೋಗದ ಪ್ರಕಾರ ಜನ ಶಿಕ್ಷಣ ನಿಲಯಗಳು ವ್ಯಾಪಕವಾದಂತೆ ಸ್ಥಿರೀಕರಣ ಹಂತ ಇಲ್ಲವಾಗುತ್ತದೆ. ಬದಲಾಗಿ ಜನ ಶಿಕ್ಷಣ ನಿಲಯಗಳು ಮುಂದುವರಿಕೆ ಶಿಕ್ಷಣದ ಕೇಂದ್ರಗಳಾಗುತ್ತವೆ.

ಹಿಂದಿನ ವಸ್ತುಸ್ಥಿತಿ ಮತ್ತು ಅನುಭವಗಳ ಆಧಾರದ ಮೇಲೆ, ಅಂತರರಾಷ್ಟ್ರೀಯ ಸಂಸ್ಥೆಗಳಾದ ಯುನೆಸ್ಕೊ ಹಾಗೂ ಯುಎನ್‌ಎಫ್‌ಪಿಎಗಳು ರೂಪಿಸಿರುವ ಮೂಲ ವಿಷಯಗಳನ್ನು ಗುರುತಿಸಿ ಆರಿಸಲಾಗಿದೆ. ಹೆಚ್ಚಿನ ಮಕ್ಕಳಿಂದಾಗಿ ದುರ್ಭರವಾಗಿರುವ ಜೀವನ, ಬಾಲವಿವಾಹ, ಪರಿಸರದ ಅಸಮತೋಲನ, ಪರಿಸರ ಮಲಿನತೆ, ಸಂಪನ್ಮೂಲ

ಗಳ ಕೊರತೆ, ಮಹಿಳೆಯರ ಸ್ಥಾನಮಾನ, ಪೋಷಕರ ಬೇಜವಾಬ್ದಾರಿತನ, ಪರಂಪರಾನುಗತ ನಂಬಿಕೆಗಳಿಂದಾಗಿ ನಿರುತ್ಸಾಹ ಇತ್ಯಾದಿ ವ್ಯಕ್ತ ಸಮಸ್ಯೆಗಳನ್ನು ಆಧರಿಸಿದ ಕೇಂದ್ರ ವಿಷಯಗಳನ್ನು ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ಬಳಸಿಕೊಳ್ಳ ಬೇಕಾಗಿದೆ.

ದೇಶದ ಶೈಕ್ಷಣಿಕ ಅಗತ್ಯ ಹಾಗೂ ಸಾಮಾಜಿಕ–ಸಾಂಸ್ಕೃತಿಕ ಪರಿಸ್ಥಿತಿಗಳಿಗೆ ಸರಿ ಹೊಂದುವಂತೆ ಮಾತ್ರವಲ್ಲದೆ, ಗೊತ್ತುಪಡಿಸಿದ ಶ್ರೋತೃಗಳ ಸೂಕ್ಷ್ಮತೆಗಳನ್ನು ಗಮನಿಸಿ, ವಯಸ್ಕರ ಶಿಕ್ಷಣದಲ್ಲಿ ಜನಸಂಖ್ಯಾ ಶಿಕ್ಷಣದ ಪಠ್ಯಕ್ರಮವನ್ನು ರೂಪಿಸ ಬೇಕಾಗಿದೆ. ಜನಸಂಖ್ಯಾ ಶಿಕ್ಷಣದ ವಿಷಯಗಳ ರೂಪರೇಖೆಯೂ ಸಾಮಾನ್ಯವಾಗಿ ವಯಸ್ಕರ ಶಿಕ್ಷಣದ ಮೂಲ ವೈಶಿಷ್ಟ್ಯಗಳಿಗೂ, ನಿರ್ದಿಷ್ಟವಾಗಿ ಅರಿವಿಗೂ ಸಂಬಂಧ ಪಟ್ಟಿರಬೇಕು. ಆದ್ದರಿಂದ ಆರೋಗ್ಯ ಹಾಗೂ ಪೌಷ್ಟಿಕತೆ, ತಾಯಿ ಹಾಗೂ ಮಕ್ಕಳ ಪಾಲನೆ, ಗೃಹ ಆರ್ಥಿಕತೆ, ಗ್ರಾಮಾಭಿವೃದ್ಧಿ, ಸಮಾಜ ಕಲ್ಯಾಣ, ವಯಸ್ಕರ ಶಿಕ್ಷಣ, ಜನಸಂಖ್ಯಾಶಾಸ್ತ್ರ ಮುಂತಾದ ಕ್ಷೇತ್ರಗಳ ಸುಸಂಗತ ವಿಷಯಗಳನ್ನು ಆರಿಸಬೇಕಾಗು ತ್ತದೆ. ವಿವಾದಾತ್ಮಕ ವಿಷಯಗಳಾದ ಲೈಂಗಿಕತೆ, ಮಾನವ ಸಂತಾನೋತ್ಪತ್ತಿ ಹಾಗೂ ಕುಟುಂಬ ಯೋಜನೆ ಮುಂತಾದುವುಗಳನ್ನು ಪ್ರಾರಂಭದಲ್ಲಿಯೇ ಸೇರಿಸಬಾರದು. ಏಕೆಂದರೆ ವಯಸ್ಕರ ಶಿಕ್ಷಣದಲ್ಲಿ ಬಹುತೇಕ ಅಭ್ಯರ್ಥಿಗಳು ಗ್ರಾಮಸ್ಥರಾಗಿರುತ್ತಾರೆ. ಅವರು ಸಂಪ್ರದಾಯಸ್ಥರಾಗಿದ್ದು ಮೇಲಿನ ವಿಷಯಗಳ ಬಗ್ಗೆ ಅಭ್ಯಂತರ ಇಟ್ಟು ಕೊಂಡಿರುತ್ತಾರೆ. ಅನಕ್ಷರಸ್ಥರಲ್ಲಿ ಅದು ಇನ್ನೂ ಹೆಚ್ಚು. ಮೇಲೆ ಹೇಳಿದ ವಿಷಯಗಳು ಫಲವಂತಿಕೆಯ ಪ್ರವೃತ್ತಿ ಅರಿಯುವುದಕ್ಕೆ ಸಹಕಾರಿ ಎಂಬುದು ನಿಜ. ಆದರೆ ಕುಟುಂಬ ಯೋಜನೆ ಹಾಗೂ ಸಂತಾನೋತ್ಪತ್ತಿಗಳಿಗೆ ಬೇಡಿಕೆ ಪ್ರಕಟಿತ ಪರಿಣಾಮವಾಗಿ ಮೂಡಬೇಕು.

ವಯಸ್ಕರ ಶಿಕ್ಷಣದಲ್ಲಿ ಸೇರಿಸಬೇಕಾದ ಜನಸಂಖ್ಯಾ ಶಿಕ್ಷಣದ ಸಮಸ್ಯೆಗಳನ್ನು ಆರಿಸುವಲ್ಲಿ ಅನೇಕ ಕಷ್ಟಗಳಿವೆ. ಏಕೆಂದರೆ ಶ್ರೋತೃಗಳಲ್ಲಿ ತೀರಾ ವೈವಿಧ್ಯತೆ ಇರುತ್ತದೆ. ವಯಸ್ಸು, ವಿವಾಹಿತ ಸ್ಥಿತಿ, ಭಾಷೆಯ ಪ್ರಾವೀಣ್ಯ, ಕೌಶಲಗಳು, ಉದ್ಯೋಗ, ಆಸಕ್ತಿ, ಜೀವನಾನುಭವ, ಧರ್ಮ, ಸಾಮಾಜಿಕ ಆರ್ಥಿಕ ಸ್ಥಿತಿಗತಿ, ಓದು ಹಾಗೂ ಮತ್ತಿತರ ಹವ್ಯಾಸಗಳು ಇವೇ ಮುಂತಾದ ಅಂಶಗಳು ವೈವಿಧ್ಯತೆಗೆ ಕಾರಣಗಳಾಗಿರುತ್ತವೆ.

ಶ್ರೋತೃಗಳ ವೈವಿಧ್ಯತೆ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮೂರು ಹಂತಗಳನ್ನು ಗಮನದಲ್ಲಿಟ್ಟುಕೊಂಡು ಅರಿವಿನ ಇತರ ವಿಷಯಗಳಿಗೆ ಅನುಪಾತವಾಗಿ ಜನಸಂಖ್ಯಾ ಶಿಕ್ಷಣದ ವಿಷಯಗಳನ್ನು ಆರಿಸಿ ಸೇರಿಸಬೇಕು. ಅವು ಜನಸಂಖ್ಯಾ ಶಿಕ್ಷಣದ ಸಂದೇಶಗಳ ಮೇಲೆ ಸಮರ್ಥವಾಗಿ ಹಾಗೂ ಪರಿಣಾಮಕಾರಿಯಾಗಿ ಬೆಳಕು ಬೀರಬೇಕು. ಎಲ್ಲ ಮೂರು ಹಂತಗಳಲ್ಲೂ ಅರಿವಿನ ಇತರೆ ಅಂಶಗಳೊಂದಿಗೆ ಹೋಲಿಸಿ ದಾಗ ಜನಸಂಖ್ಯಾ ಶಿಕ್ಷಣದ ವಿಷಯವು ಶೇ. ೨೦-೨೫ ರಷ್ಟು ಇರಬೇಕು. ಬಹುತೇಕ ಸಂದರ್ಭಗಳಲ್ಲಿ ಜನಸಂಖ್ಯಾ ಶಿಕ್ಷಣದ ಸಂದೇಶಗಳೊಂದಿಗೆ ಇತರ ವಿಷಯಗಳಿಗೆ ಸಂಬಂಧ ಹೆಣೆಯಲು ವಿಷಯ ಮಂಡನೆಯನ್ನು ಮಾತ್ರ ಬದಲಾಯಿಸಬೇಕಾಗುತ್ತದೆ. ಕೆಲ ಸಂದರ್ಭಗಳಲ್ಲಿ ಜನಸಂಖ್ಯಾ ಶಿಕ್ಷಣದ ವಿಷಯಗಳನ್ನು ಪ್ರತ್ಯೇಕವಾಗಿಯೂ ಸೇರಿಸ ಬೇಕಾಗುತ್ತದೆ.

ಕೆಳಕಂಡ ವಿಷಯಗಳು ಜನಸಂಖ್ಯಾ ಶಿಕ್ಷಣದ ಮುಖ್ಯ ಸಂದೇಶಗಳನ್ನು ಓದುಗರಿಗೆ ತಲುಪಿಸುತ್ತವೆ. ಅವು ಕುಟುಂಬದ ಜೀವನ ಗುಣಮಟ್ಟ ಹಾಗೂ ಸಮಾಜದ ಅಭಿವೃದ್ಧಿ ಮೇಲೆ ಪರಿಣಾಮ ಬೀರುತ್ತವೆ:—

೧. ಸಣ್ಣ ಕುಟುಂಬದ ಅಗತ್ಯ ಹಾಗೂ ಕುಟುಂಬ ಕಲ್ಯಾಣ
೨. ವಿಳಂಬಿತ ಮದುವೆ
೩. ಜವಾಬ್ದಾರಿ ಪೋಷಕತ್ವ
೪. ಜನಸಂಖ್ಯೆ ಹಾಗೂ ಸಂಪನ್ಮೂಲ ಅಭಿವೃದ್ಧಿ
೫. ಜನಸಂಖ್ಯಾ ನಂಬಿಕೆ ಮತ್ತು ಸಂಪ್ರದಾಯಗಳು

ಕುಟುಂಬದ ಗಾತ್ರ ಜೀವನ ಗುಣಮಟ್ಟವನ್ನು ನಿಯಂತ್ರಿಸುವ ಅಂಶವಾದರೂ, ಕುಟುಂಬ ಗಾತ್ರ ಮತ್ತು ಕುಟುಂಬ ಕಲ್ಯಾಣ ಎಂಬ ಮುಖ್ಯ ಸಂದೇಶವು ಚಿಕ್ಕ ಕುಟುಂಬವು ಜೀವನ ಗುಣಮಟ್ಟದ ವೃದ್ಧಿಗೆ ಸಹಕಾರಿ ಎಂಬುವರ ಬಗ್ಗೆ ಹೆಚ್ಚು ಒತ್ತು ಕೊಡುತ್ತದೆ.

ವಿಳಂಬಿತ ಮದುವೆಯಿಂದ ಮಹಿಳೆಯರಿಗೆ ಕಡಿಮೆ ಮಕ್ಕಳು ಆಗುವುದರ ಜತೆಗೆ, ಸಂತಾನೋತ್ಪತ್ತಿಯ ಅವಧಿ ಕಡಿಮೆಯದಾಗುತ್ತದೆ.

ಜವಾಬ್ದಾರಿ ಪೋಷಕತ್ವವು ಕುಟುಂಬ ಗಾತ್ರದ ಯೋಜನೆ, ಮಕ್ಕಳ ನಡುವಿನ ಅಂತರ, ವೃದ್ಧರ ಪಾಲನೆ, ಶರೀರ ವಿಜ್ಞಾನದ ತಿಳಿವಳಿಕೆ ಮುಂತಾದವನ್ನು ಒಳಗೊಳ್ಳುತ್ತದೆ.

ಜನಸಂಖ್ಯೆ ಹಾಗೂ ಸಂಪನ್ಮೂಲ ಅಭಿವೃದ್ಧಿಯ ಡಿಯಲ್ಲಿ ಜನಸಂಖ್ಯಾ ಪರಿಸ್ಥಿತಿ, ಜನಸಂಖ್ಯಾ ಚಲನಶಾಸ್ತ್ರ ಮತ್ತು ಭೌತಿಕ ಪರಿಸರ ಹಾಗೂ ಸ್ವಾಭಾವಿಕ ಸಂಪನ್ಮೂಲ ಗಳ ನಡುವಿನ ಸಂಬಂಧಗಳು ಬರುತ್ತವೆ.

ಗಂಡು ಮಗುವಿಗೆ ಮಾನ್ಯತೆ, ಬಾಲ್ಯ ವಿವಾಹ, ವೃದ್ಧಾಪ್ಯದಲ್ಲಿ ಭದ್ರತೆ ಮತ್ತು ಮಹಿಳೆಯರ ಪಾತ್ರದಲ್ಲಿ ಸಾಂಪ್ರದಾಯಿಕತೆ ಮುಂತಾದ ನಂಬಿಕೆಗಳನ್ನು ಕೊಡೆದು ಹಾಕುವ ಬಗ್ಗೆ ಕೊನೆಯ ಸಂದೇಶ ವ್ಯವಹರಿಸುತ್ತದೆ.

ಮೇಲೆ ಹೇಳಿದ ವಿಷಯಗಳು ಪ್ರತ್ಯೇಕವಾದವುಗಳಲ್ಲಿ; ಬದಲಾಗಿ ಪರಸ್ಪರ ಪೂರಕವಾದವು. ಪ್ರತಿಯೊಂದು ಹಂತದಲ್ಲೂ ಈ ವಿಷಯಗಳ ಮೇಲೆ ಆರಿಸಿದ ಸಾಮಗ್ರಿ ಗಳನ್ನು ಆಯಾ ಮಟ್ಟಕ್ಕನುಸಾರವಾಗಿ ಮಂಡಿಸಬೇಕಾಗುತ್ತದೆ. ಈ ಎಲ್ಲ ಐದು ವಿಷಯಗಳ ಬಗ್ಗೆ ಸಮರ್ಪಕ ತಿಳಿವಳಿಕೆಯನ್ನು ನೀಡಿದರೆ, ಗೊತ್ತುಪಡಿಸಿದ ಶ್ರೋತೃಗಳ ಗಮನವನ್ನು ಜನಸಂಖ್ಯಾ ಶಿಕ್ಷಣದ ಒಟ್ಟಾರೆ ಸಂದೇಶಗಳ ಬಗ್ಗೆ ಸೆಳೆದಂತಾಗುತ್ತದೆ.

ವಯಸ್ಕರ ಶಿಕ್ಷಣದಲ್ಲಿ ಜನಸಂಖ್ಯಾ ಶಿಕ್ಷಣವನ್ನು ಅಡಕಗೊಳಿಸುವ ಯೋಜನೆ ಯನ್ನು ೧೯೮೬ ರಿಂದ ಭಾರತ ಸರ್ಕಾರ ತೀವ್ರ ಕಾಳಜಿಯಿಂದ ಕೈಗೊಂಡಿದೆ. ಭಾರತ ಸರ್ಕಾರ ಮತ್ತು ಯು ಎನ್ ಎಫ್ ಪಿ ಎ (ಜನಸಂಖ್ಯಾ ಚಟುವಟಿಕೆಗಳಿಗಾಗಿ ವಿಶ್ವಸಂಸ್ಥೆ ನಿಧಿ) ಈ ಯೋಜನೆಗೆ ಸಂಯುಕ್ತವಾಗಿ ಸಹಿ ಮಾಡಿವೆ. ಈ ಯೋಜನೆಯನ್ನು ಭಾರತ ಸರ್ಕಾರದ ಪರವಾಗಿ ವಯಸ್ಕರ ಶಿಕ್ಷಣ ನಿರ್ದೇಶನಾಲಯವು ರಾಜ್ಯಗಳ ಸಹಕಾರ

ದೊಂದಿಗೆ ಜಾರಿಗೆ ತರುತ್ತದೆ. ರಾಜ್ಯಮಟ್ಟದಲ್ಲಿ ರಾಜ್ಯ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಮತ್ತು ರಾಜ್ಯ ಸಂಪನ್ಮೂಲ ಕೇಂದ್ರಗಳು ಯೋಜನೆಯ ಹೊಣೆ ಹೊರುತ್ತವೆ.

ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣ ಶೇ. ೩೮.೪. ಆದರೆ ಈ ಅನಕ್ಷರಸ್ಥರಲ್ಲಿ ಶೇ. ೫೩.೮ ರಷ್ಟು ಮಂದಿ ೧೫–೩೫ ವರ್ಷ ವಯಸ್ಸಿನವರಾಗಿದ್ದಾರೆ. ಈ ವಯಸ್ಸಿನ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವ ಪ್ರಯತ್ನ ಸಾಗಿದೆ. ಅವರನ್ನು ಸಾಕ್ಷರರನ್ನಾಗಿಸುವುದರ ಜತೆಗೆ ಜನಸಂಖ್ಯಾ ಶಿಕ್ಷಣವನ್ನು ಸಾಕ್ಷರತಾ ಕಾರ್ಯಕ್ರಮದಲ್ಲೇ ಅಡಕಗೊಳಿಸಿ, ಜನಸಂಖ್ಯಾ ಸಮಸ್ಯೆ ಬಗ್ಗೆ ಅವರಲ್ಲಿ ಪ್ರಜ್ಞೆ ಮೂಡಿಸುವುದು ಮೇಲೆ ಹೇಳಿದ ಯೋಜನೆಯ ಮುಖ್ಯ ಉದ್ದೇಶ.

ವಯಸ್ಕರ ಶಿಕ್ಷಣ ಕ್ಷೇತ್ರ ಕಾರ್ಯಕರ್ತರಿಗೆ ಜನಸಂಖ್ಯಾ ಶಿಕ್ಷಣದ ಬಗ್ಗೆ ತರಬೇತಿ ನೀಡುವುದು ಅತಿ ಮುಖ್ಯವಾದ ಕೆಲಸವಾಗಿದೆ. ಆ ತರಬೇತಿ ಅವರಲ್ಲಿ ಜನಸಂಖ್ಯಾ ಶಿಕ್ಷಣದ ಪರಕಲ್ಪನೆಗಳನ್ನು ಸ್ಥಿರವಾಗಿ ಮೂಡಿಸುವುದಲ್ಲದೆ, ಅದನ್ನು ವಯಸ್ಕರ ಶಿಕ್ಷಣದಲ್ಲಿ ಅಡಕಗೊಳಿಸುವುದು ಹೇಗೆಂಬುದನ್ನು ತಿಳಿಸಿಕೊಡಬೇಕಾಗುತ್ತದೆ.

ಅಕ್ಷರ ಕಲಿಯ ಬಯಸುವ ವಯಸ್ಕರಿಗೆ ಮೊದಲ ಹಂತದಲ್ಲಿ ಓದುವ ಪುಸ್ತಕಗಳಲ್ಲೂ ಜನಸಂಖ್ಯಾ ಶಿಕ್ಷಣವನ್ನು ಸೇರಿಸಬೇಕಾಗುತ್ತದೆ. ಎರಡನೆಯ ಸಾಕ್ಷರೋತ್ತರ ಹಂತದಲ್ಲಿ ಓದುವ ಪುಸ್ತಕಗಳಲ್ಲೂ ಜನಸಂಖ್ಯಾ ಶಿಕ್ಷಣವನ್ನು ಸೇರಿಸಬೇಕಾಗುತ್ತದೆ. ನಂತರದ ಸ್ಥಿರೀಕರಣ ಹಂತದಲ್ಲಿ ಜನಸಂಖ್ಯಾ ಶಿಕ್ಷಣದ ವಿವಿಧ ಅಧ್ಯಾಯಗಳ ಬಗ್ಗೆ ಹೊತ್ತಿಗೆಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ವಿಡಿಯೋ, ಸಾಕ್ಷ್ಯ ಚಿತ್ರಗಳು, ಸ್ಲೈಡ್‌ಗಳು, ಭಿತ್ತಿಪತ್ರಗಳು ಇತ್ಯಾದಿ ಸಮೂಹ ಮಾಧ್ಯಮಗಳ ಮೂಲಕ ಜನಸಂಖ್ಯಾ ಸಮಸ್ಯೆ ಬಗ್ಗೆ ಅರಿವು ಮೂಡಿಸಬೇಕಾಗುತ್ತದೆ.

ಮೇಲೆ ಹೇಳಿದ ತರಬೇತಿ ನೀಡಿಕೆ ಮತ್ತು ಸಾಮಗ್ರಿಗಳ ತಯಾರಿಕೆಯ ಹೊಣೆಯನ್ನು ಕರ್ನಾಟಕದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಕ್ಕೆ ವಹಿಸಲಾಗಿದೆ. ೧೯೮೭ ರ ಡಿಸೆಂಬರ್‌ನಿಂದ ಆರಂಭವಾಗಿರುವ ಈ ಜನಸಂಖ್ಯಾ ಶಿಕ್ಷಣ ಯೋಜನೆಗೆ ಭಾರತ ಸರ್ಕಾರದ ಮೂಲಕ ಯುಎನ್‌ಎಫ್‌ಪಿಎ ಮೂರು ವರ್ಷಗಳಿಗೆ ಹತ್ತು ಲಕ್ಷ ರೂಗಳ ನೆರವಿತ್ತಿದೆ.

ಈ ಯೋಜನೆಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವು ಓದುವ ಪುಸ್ತಕಗಳು, ಅಭ್ಯಾಸ ಪುಸ್ತಕಗಳು, ಗಣಿತ ಪುಸ್ತಕಗಳು, ಪೂರಕ ಹೊತ್ತಿಗೆಗಳು, ಜತೆಗೆ ಒಂದು ಸಾಕ್ಷ್ಯಚಿತ್ರ, ಎರಡು ವಿಡಿಯೋ ಚಿತ್ರ, ಹಲವು ವರ್ಣಪಾರದರ್ಶಿಕೆಗಳು ಮುಂತಾದವುಗಳನ್ನು ಅಭಿವೃದ್ಧಿಪಡಿಸಲಿದೆ.

ಜತೆಗೆ ಪ್ರಾದೇಶಿಕ ಭಿನ್ನತೆಯಿರುವ ಕ್ಷೇತ್ರಗಳನ್ನಾರಿಸಿ, ಐದು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಿ, ಸಂಶೋಧನಾ ಕಾರ್ಯವನ್ನು ಕೈಗೊಳ್ಳಲಿದೆ.

---

# ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ಹೈಸ್ಕೂಲಿನಲ್ಲಿದ್ದಾಗ ಹೇಗೋ ಕಾಲೇಜಿನಲ್ಲೂ ಹಾಗೆಯೇ, ಪರೀಕ್ಷೆಯ ದೃಷ್ಟಿಯಿಂದ ಓದಲೇಬೇಕಾದದ್ದಕ್ಕೆ ಕೊಡಬೇಕಾದಷ್ಟು ಗಮನ ಕೊಡದೆ, (ನನ್ನ ತಂದೆ 'ಹಾಳು ಮೂಳು' ಎಂದು ಕರೆಯುತ್ತಿದ್ದ) ಇತರ ಪುಸ್ತಕಗಳಲ್ಲಿ ಮಗ್ನನಾಗುವ ಚಟ ಮುಂದುವರಿಯಿತು. ಹಿಂದಿನ ಓದಿನಲ್ಲಿ ಕಥೆ, ಸಾಹಸ ಸಾಹಿತ್ಯ, ಮುಂತಾದವಕ್ಕೆ ಪ್ರಾಧಾನ್ಯವಿತ್ತು. ಈಗ ಕವನ, ಕಥೆಯಿಲ್ಲದ (ರಸ್ಕಿನ್, ನ್ಯೂಮನ್, ಕಾರ್ಲೈಲ್, ಜೀನ್ಸ್, ಡೀನ್ ಇಂಗ್, ರಸಲ್ ಇತ್ಯಾದಿ) ಗದ್ಯವನ್ನು ಓದುವುದು ಹೆಚ್ಚಾಯಿತು. ಅರ್ಥಶಾಸ್ತ್ರದಲ್ಲಿ ನನಗೆ ಆಸಕ್ತಿ ಹುಟ್ಟಲೇ ಇಲ್ಲ. ರಾಜ್ಯ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ನಮಗೆ ಪಠ್ಯಪುಸ್ತಕವಾಗಿದ್ದ ಸಿಜ್‌ವಿಕ್‌ನ ಗ್ರಂಥವನ್ನು ಕಡೆಗಣಿಸಿ ಬ್ರೈಸ್ ಬರೆದ Modern Democracies ಎಂಬ ಪುಸ್ತಕವನ್ನು ಬಹಳ ಆಸಕ್ತಿಯಿಂದ ಓದಿದ್ದು ನೆನಪಿದೆ. ಎಂ.ಎ. ಕ್ಲಾಸಿನಲ್ಲಿ ಹಾಗೆಯೇ 'ಇಂಗ್ಲಿಷ್ ಭಾಷೆಯ ಇತಿಹಾಸ'ವನ್ನು ಕಡೆಗಣಿಸಿದೆ. ಈ ಬಗೆಯ ಚಟದಿಂದಾಗಿ ಲಾಭವಾಗಿದ್ದಿರಬಹುದಾದರೂ ನಷ್ಟವೂ ಆಯಿತು. ಇಂಗ್ಲಿಷ್‌ನಲ್ಲಿ ಪ್ರಥಮಸ್ಥಾನವನ್ನೇನೊ ಯಾವಾಗಲೂ ಉಳಿಸಿಕೊಂಡೆನಾದರೂ ಇಡೀ ಪರೀಕ್ಷೆಯಲ್ಲಿ ಉತ್ತಮಸ್ಥಾನ ಪಡೆಯಲಿಲ್ಲ. ಆಗ ಪರೀಕ್ಷೆ ಪಾಸ್ ಮಾಡುವುದರಲ್ಲಿ ಮೂರು ದರ್ಜೆಗಳು ಇದ್ದುವು. ನನ್ನ ದರ್ಜೆ ಎರಡನೆಯದು. ಓದಿನಲ್ಲಿ ಪಡೆದ ಆನಂದವನ್ನು ನೆನೆಯುವುದೇನೊ ಹಿತ. ಆದರೆ ನಾನು ಮಾಡಿದ್ದು ತಪ್ಪೆಂಬುದು ಸ್ಪಷ್ಟವಾಗಿಯೇ ಇದೆ. ನನಗೆ ನೀರಸ ಎನ್ನಿಸಿದ ಮಾತ್ರಕ್ಕೆ (ಅದು ನೀರಸವಲ್ಲ, ಸ್ವಲ್ಪ ಕಷ್ಟಪಟ್ಟು ಓದುವವನಿಗೆ!) ಯಾವುದನ್ನಾಗಲಿ ಕಡೆಗಣಿಸುವುದು ಸರಿಯಾಗಲಾರದು. ಬದುಕಿನಲ್ಲಿ ನೀರಸವಾದ ಭಾಗ ಬೇಕಾದಷ್ಟಿದೆ; ಅದನ್ನು ಕಡೆ ಗಣಿಸಿದರೆ

ಬದುಕು ಅಪೂರ್ಣವಾಗುತ್ತದೆ. ಉಪಯುಕ್ತವಾದ—ಆದರೆ ನಮಗೆ ರುಚಿಸದ—ಕೆಲಸವನ್ನು ಪ್ರತಿದಿನವೂ ಸ್ವಲ್ಪಕಾಲ ಮಾಡಲೇಬೇಕು, ಅದು ನಮ್ಮ ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು. ನನಗೆ ಈ ಸತ್ಯದ ಅರಿವಾದದ್ದು ಕಾಲೇಜಿನಲ್ಲಿ ಅಧ್ಯಾಪಕನಾದ ಮೇಲೆ.

ನಾನು ಕಾಲೇಜಿಗೆ ಸೇರುವ ವೇಳೆಗೆ 'ಮೈಸೂರು ಯೂನಿವರ್ಸಿಟಿ ಯೂನಿಯನ್' ಎಂಬ ಸಂಸ್ಥೆ ಹುಟ್ಟಿ ಎರಡು ಮೂರು ವರ್ಷಗಳಾಗಿದ್ದಿರಬಹುದು. ಕಟ್ಟಡದ ಶಿಲ್ಪ, ಕಾರ್ಯಕ್ರಮಗಳು, ನಿಯಮಗಳು—ಎಲ್ಲದರಲ್ಲೂ ನಮ್ಮ ಸಂಸ್ಥೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಯೂನಿಯನ್ನನ್ನು ಅನುಕರಿಸಿತ್ತು. ಕಾಲೇಜು ಎಷ್ಟು ಶಿಸ್ತಿನಿಂದ ನಡೆಯುತ್ತಿತ್ತೋ ಅಷ್ಟೇ ಶಿಸ್ತು ಯೂನಿಯನ್ನಿನ ಕಾರ್ಯಕ್ರಮಗಳಲ್ಲೂ ಕಾಣುತ್ತಿತ್ತು. ಅದರ ವಿಷಯದಲ್ಲಿ ಬಹಳ ಉತ್ಸಾಹ ತಾಳಿದವರು ಪ್ರೊ. ಸಿ. ಆರ್. ರೆಡ್ಡಿ ಮತ್ತು ಪ್ರೊ. ಜೆ. ಸಿ. ರಾಲೊ. ರೆಡ್ಡಿಯವರು ಆಕ್ಸ್‌ಫರ್ಡಿನಲ್ಲಿ (ಅಥವಾ ಕೇಂಬ್ರಿಜ್‌ನಲ್ಲೊ ?) ಎಲ್ಲರ ಗಮನವನ್ನೂ ಸೆಳೆಯುವಷ್ಟು ಉತ್ಸಾಹದಿಂದ ಯೂನಿಯನ್ನಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರಂತೆ; ಅವರು ಅಲ್ಲಿಯ ಯೂನಿಯನ್ನಿನ ಅಧ್ಯಕ್ಷರಾಗಿ ಚುನಾಯಿತರಾಗಿದ್ದರೆಂದು ಕೇಳಿದ್ದೇನೆ. ೧೯೧೯ರ ವೇಳೆಗೆ ರೆಡ್ಡಿಯವರು ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿ ಹೊರಟುಹೋಗಿದ್ದರು. ಅವರಾದ ಮೇಲೆ ಯೂನಿಯನ್ನಿಗೆ ಹೆಚ್ಚು ಸ್ಫೂರ್ತಿ ಕೊಟ್ಟವರೆಂದರೆ ಪ್ರೊ. ರಾಲೊ.

ಆಕ್ಸ್‌ಫರ್ಡ್ ಯೂನಿಯನ್ನಿನ ಸಂವಿಧಾನದ ಪ್ರಕಾರ ಸಂಸ್ಥೆಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ—ಎಲ್ಲರೂ ವಿದ್ಯಾರ್ಥಿಗಳು, ವಿದ್ಯಾರ್ಥಿ ಸದಸ್ಯರಿಂದಲೇ ಚುನಾಯಿತರಾದವರು. ನಮ್ಮ ಸಂಸ್ಥೆಯಲ್ಲಿ ಕಾಲೇಜಿನ ಪ್ರಿನ್ಸಿಪಾಲ್‌ರೇ ಅಧ್ಯಕ್ಷರಾಗಿದ್ದರು ಎಂದು ನೆನಪು. ನೇಮಿತರಾದ ಪ್ರೊಫೆಸರೊಬ್ಬರು ಉಪಾಧ್ಯಕ್ಷರು. ೧೯೨೧–೨೨ರಲ್ಲಿ ಉಪಾಧ್ಯಕ್ಷರಾಗಿದ್ದ ರಾಧಾಕೃಷ್ಣನ್ ಆ ವರ್ಷವೇ ಕಲ್ಕತ್ತೆಗೆ ಹೊರಟು ಹೋದರು. ಆಮೇಲೆ ವಿದ್ಯಾರ್ಥಿಗಳು ತಮ್ಮಲ್ಲೇ ಒಬ್ಬನನ್ನು ಉಪಾಧ್ಯಕ್ಷನನ್ನಾಗಿ ಚುನಾಯಿಸುವ ಹಕ್ಕನ್ನು ಪಡೆದರು. ಮೊದಲ ವಿದ್ಯಾರ್ಥಿ–ಉಪಾಧ್ಯಕ್ಷನಾಗುವ ಯೋಗ ನನಗೆ ಲಭಿಸಿತು. ಅಧ್ಯಾಪಕ–ಕಾರ್ಯದರ್ಶಿಯ ಸ್ಥಾನ ಮೊದಲಿಂದಲೂ ಇತ್ತೋ ಇಲ್ಲವೋ ನೆನಪಿಲ್ಲ. ಸುಮಾರು ೧೯೩೧–೩೨ರಲ್ಲಿ ನಾನು ಅಧ್ಯಾಪಕ–ಕಾರ್ಯದರ್ಶಿಯಾಗಿದ್ದೆ—ಬಹುಶಃ ನಾಮಕರಣದ ಫಲವಾಗಿ. ಚುನಾವಣೆಗಳು ಅಷ್ಟೇನೂ ಭರಾಟೆಯಿಂದ ನಡೆಯುತ್ತಿರಲಿಲ್ಲ. ವಿದ್ಯಾರ್ಥಿ–ಕಾರ್ಯದರ್ಶಿಯ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಂತವರು ತಮ್ಮ ನಾಲ್ಕಾರು ಸ್ನೇಹಿತರನ್ನು "ನನಗೆ ವೋಟು ಕೊಡೊ" ಎಂದು ಕೇಳುತ್ತಿದ್ದರೇನೊ. ತಮಟೆ ತುತ್ತೂರಿ ಬಾವುಟಗಳ ಪ್ರಚಾರ ಇರಲಿಲ್ಲ. ನಾನು ಉಪಾಧ್ಯಕ್ಷನಾದ ಸಂದರ್ಭ ಚೆನ್ನಾಗಿ ನೆನಪಿದೆ. ನನ್ನ ಸಹಪಾಠಿ ಎಂ. ಲಕ್ಷ್ಮೀನರಸಿಂಹಯ್ಯನವರು (ಕಾಲಾನಂತರ ಅವರು ಸಂಸ್ಕೃತ ಪ್ರಾಧ್ಯಾಪಕರಾದರು) ನನ್ನ ಹೆಸರನ್ನು ಸೂಚಿಸಿ ಇನ್ನೊಬ್ಬರಿಂದ ಅನುಮೋದನೆ ದೊರಕಿಸಿಕೊಂಡು ಬಂದು "ವೈಸ್ ಪ್ರೆಸಿಡೆಂಟ್ ಸ್ಥಾನಕ್ಕೆ ನಿಮ್ಮ ಹೆಸರನ್ನು ಸೂಚಿಸಿದ್ದೇನೆ, ನೀವು ಹಿಂದೆಗೆದುಕೊಳ್ಳಕೂಡದು" ಎಂದು ಹೇಳಿದರು. ನಾನಾಗಲಿ ನನ್ನ ಪರವಾಗಿ ಮತ್ತೊಬ್ಬರಾಗಲಿ

ಏನೇನೂ ಪ್ರಚಾರ ನಡೆಸಲಿಲ್ಲ. ವೋಟಿಗಾಗಿ ಗೋಗರೆಯುವುದು ಅವಶ್ಯಕವಾಗಿದ್ದಿದ್ದರೆ ನಾನು ಬಹುಶಃ "ನನ್ನ ಹೆಸರನ್ನು ತೆಗೆದುಹಾಕಿ" ಎಂದು ಬೇಡುತ್ತಿದ್ದೆ. ನನ್ನ ಪ್ರತಿಸ್ಪರ್ಧಿಯಾಗಿದ್ದ ಎಂ. ಜಿ. ಲಕ್ಷ್ಮೀನರಸು ಎಂಬುವರೂ (ಅವರು ಬಿ. ಕಾಂ. ತರಗತಿಯಲ್ಲಿದ್ದರು) ವೋಟಿಗಾಗಿ ಯಾರನ್ನೂ ಬೇಡಲಿಲ್ಲ. ಅವರಿಗೂ ನನಗೂ ಮೊದಲಿಂದ ಇದ್ದ ವಿಶ್ವಾಸ ನಾನು ಚುನಾಯಿತನಾದ ಮೇಲೆ ಸ್ವಲ್ಪವೂ ಕಡಮೆಯಾಗಲಿಲ್ಲ. ಅವರು ಬಿ.ಕಾಂ. ಪಾಸ್ ಮಾಡಿದ ಮೇಲೆ ಹೈದರಾಬಾದಿನಲ್ಲಿ ದೊಡ್ಡದೊಂದು ವ್ಯಾಪಾರೀ ಸಂಸ್ಥೆಯನ್ನು ಕಟ್ಟಿ ಅದ್ದೂರಿಯಾಗಿ ಬಾಳಿದರು. ನನ್ನ ಕೊನೆಯ ತಮ್ಮ ಅಲ್ಲಿಯ ಬ್ಯಾಂಕೊಂದರಲ್ಲಿ ಕೆಲಸಕ್ಕಿದ್ದಾಗ ಅವನನ್ನು ಬಹಳ ಆದರದಿಂದ ಕಂಡು ಅವರು-ನನ್ನ ಕಾಲೇಜಿನ ದಿನಗಳನ್ನು ಬಹಳ ಸಂತೋಷದಿಂದ ನೆನೆದುಕೊಂಡರಂತೆ. ಹೈದರಾಬಾದಿನಲ್ಲಿ ನಾನೂ ಒಂದು ಸಾರಿ ಅವರ ಆತಿಥ್ಯವನ್ನು ಸವಿದ ನೆನಪಿದೆ.

ಭಾರತಕ್ಕೆ ಡೆಮಾಕ್ರಸಿ ಬರುವ ವೇಳೆಗೆ ಪ್ರಜೆಗಳು ಅದಕ್ಕೆ ತಕ್ಕ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು, ಆ ಕೆಲಸದಲ್ಲಿ ಯೂನಿಯನ್ ಪ್ರಮುಖ ಪಾತ್ರ ವಹಿಸಬೇಕು—ಇದು ಸ್ಥಾಪಕರ ಗುರಿ. ಮೇಲೆ ಹೇಳಿದ ಪರಿಸ್ಥಿತಿ ನಾಲ್ಕೈದು ವರ್ಷಗಳೊಳಗಾಗಿ ಬದಲಾಯಿಸಿತು. ಚುನಾವಣೆಯ ಕಾಲದಲ್ಲಿ ಬಾವುಟಗಳು ಕಾಣಿಸಿಕೊಂಡವು; ಚುನಾವಣಾಗೀತಗಳು ಕಿವಿಯನ್ನು ಕೊರೆಯಲಾರಂಭಿಸಿದುವು; ಅಭ್ಯರ್ಥಿಗಳು ಮತದಾರರಿಗೆ ಬಿಟ್ಟಿ ತಿಂಡಿ ಕೊಡಿಸಲಾರಂಭಿಸಿದರು; "ನಿಮ್ಮ ವೋಟು ಯಾರಿಗೆ?....ಗೆ!" ಎಂದು ತಾಳಬದ್ಧವಾಗಿ ಘೋಷಿಸುವ ತಂಡಗಳು ಮೆರವಣಿಗೆ ಹೊರಟವು. ಯೂನಿಯನ್ನಿನ ಹಣದ ದುರುಪಯೋಗ ನಡೆಯುತ್ತಿದೆ ಎಂಬ ಆಪಾದನೆ ಕೇಳಿಬರಲಾರಂಭಿಸಿತು. ಡೆಮಾಕ್ರೆಸಿಗೆ ಪೂರ್ವಸಿದ್ಧತೆ ನಡೆಯಿತು. ಈ ಪರಿಸ್ಥಿತಿಯನ್ನು ಉಗ್ರವಾಗಿ ಟೀಕಿಸಿದವರೊಬ್ಬರನ್ನು ವಿರೋಧಿಸಿ ನಾನು "ಇವೆಲ್ಲ ಬೆಳವಣಿಗೆಯ ಕಾಲದಲ್ಲಿ ಕಾಣಿಸಿಕೊಳ್ಳಲೇಬೇಕಾದ ನ್ಯೂನತೆಗಳು (growing pains); ಡೆಮಾಕ್ರಸಿ ಬೆಳೆಯಬೇಕಾದರೆ, ಪ್ರಾಯಕ್ಕೆ ಬರಬೇಕಾದರೆ, ದೀರ್ಘಕಾಲ ಬೇಕು" ಎಂದು ಯೂನಿಯನ್ನಿನಲ್ಲಿ ಭಾಷಣಮಾಡಿದ್ದು ನೆನಪಿದೆ. ೧೯೬೦ರ ವೇಳೆಗೆ ನ್ಯೂನತೆಗಳು ಬೆಳೆದದ್ದೇನೊ ಕಾಣುತ್ತಿತ್ತು; ಡೆಮಾಕ್ರಸಿ ಬೆಳೆದು ಪ್ರಾಯಕ್ಕೆ ಬಂದದ್ದು ಕಾಣಲಿಲ್ಲ! ಆಗ "ಡೆಮಾಕ್ರಸಿ ಬೆಳೆಯಬೇಕಾದರೆ ದೀರ್ಘಕಾಲ ಬೇಕು, ನಿಜ. ಆದರೆ ಆ ದೀರ್ಘಕಾಲ ಕಳೆಯುವ ವೇಳೆಗೆ ನಾವೆಲ್ಲ ಸತ್ತಿರುತ್ತೇವೆ!" ಎಂಬ ಕಹಿಮಾತನ್ನಾಡಿದ್ದೂ ನೆನಪಿದೆ. ಹಿಂದಿನ ಸಮಾಧಾನ ಸಮರ್ಥನೆಗಳು ಮಿತಿಮೀರಿದ ಆಶಾವಾದ; ಅನಂತರ ಬಂದ ಅಸಮಾಧಾನ ಮಿತಿಮೀರಿದ ಗೋಳು ಕರೆ. ಇಂದಿನ ಜೀವನವನ್ನು ಸಮಗ್ರವಾಗಿ ನೋಡುವುದು ಸಾಧ್ಯವಾದರೆ—ಬಹುಶಃ 'ಪ್ರಗತಿ ನಡೆದಿದೆ' ಎನ್ನಿಸುತ್ತದೆ. ಆದರೆ ಆ ಸಮಗ್ರ ದೃಷ್ಟಿ ಸುಲಭ ಸಾಧ್ಯವಲ್ಲ!

ಯೂನಿಯನ್ನಿನ ಕಾರ್ಯಕ್ರಮಗಳು : ಚರ್ಚೆ (ಡಿಬೇಟ್), ಉಪನ್ಯಾಸಗಳು; ತಾವು ಮೆಚ್ಚಿದ ಕಥೆ ಕವನ ಪ್ರಬಂಧಗಳನ್ನು ಸಭಿಕರ ಮುಂದೆ ಓದುವುದು; ವಾಚನಸ್ಪರ್ಧೆ ಭಾಷಣಸ್ಪರ್ಧೆಗಳು; ಸಂಗೀತ; ನಾಟಕ; ಹ್ಯಾಟ್‌ನೈಟ್ (ಇದರ ವಿಷಯ ಮುಂದೆ ಬರುತ್ತದೆ)—ಇವೆಲ್ಲದರಲ್ಲೂ (ವೇದಿಕೆಯ ಮೇಲೆ ನಿಂತು ಹಾಡುವುದು,

ನಾಟಕದಲ್ಲಿ ಪಾರ್ಟ್ ಮಾಡುವುದು, ಇವೆರಡು ವಿನಾ) ನಾನು ಉತ್ಸಾಹದಿಂದ ಭಾಗ ವಹಿಸಿದೆ.

ಯೂನಿಯನ್ನಿನ ಕಾರ್ಯಕ್ರಮಗಳಲ್ಲಿ ಪ್ರಥಮಸ್ಥಾನ ಸಲ್ಲುತ್ತಿದ್ದದ್ದು ಡಿಬೇಟು (debates–ಚರ್ಚಾಕೂಟ)ಗಳಿಗೆ. ಆಕ್ಸ್‌ಫರ್ಡ್ ಯೂನಿಯನ್ನಿನಲ್ಲಿ ಹೇಗೋ ಹಾಗೆಯೇ ಅವು ಬ್ರಿಟಿಷ್ ಪಾರ್ಲಿಮೆಂಟಿನ ಚರ್ಚಾನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ನಡೆಯುತ್ತಿದ್ದವು. ಪ್ರೊ. ರಾಲೊ ಒಂದು ದಿನ ಗಂಭೀರವಾಗಿ ಮಾತಾಡುತ್ತಾ "ನಮ್ಮ ಯೂನಿಯನ್ನಿನ ಚರ್ಚೆಗಳು ಆಕ್ಸ್‌ಫರ್ಡ್ ಯೂನಿಯನ್ನಿನವುಗಳಿಗಿಂತ ಯಾವ ವಿಧದಲ್ಲೂ ಕಡಮೆಯಲ್ಲ" ಎಂದು ಹೊಗಳಿದರು—ಅವರು ಯಾವುದನ್ನೂ ಬಡಪಟ್ಟಿಗೆ ಮೆಚ್ಚುವವರಲ್ಲ; ಕೇವಲ ಮರ್ಯಾದೆಗಾಗಿ ಹೊಗಳುವವರೂ ಅಲ್ಲ! ವಿದ್ಯಾರ್ಥಿಗಳು ಕೆಲವು ವೇಳೆ ಅಧ್ಯಾಪಕರೊಬ್ಬರನ್ನು 'ಸ್ಪೀಕರ್' (Speaker) ಆಗಬೇಕೆಂದು ಆಹ್ವಾನಿಸುತ್ತಿದ್ದುದುಂಟಾದರೂ ಬಹುಮಟ್ಟಿಗೆ ತಮ್ಮಲ್ಲೇ ಒಬ್ಬನನ್ನು ಆಸ್ಥಾನಕ್ಕೆ ಚುನಾಯಿಸುತ್ತಿದ್ದರು. ಚರ್ಚೆಗಳಲ್ಲಿ ವಿಷಯ ವೈವಿಧ್ಯ ಬೇಕಾದ ಹಾಗಿತ್ತು. ಕೆಲವು ಗಂಭೀರವಾದ ಸಾರ್ವಕಾಲಿಕ ತತ್ತ್ವಗಳನ್ನು ಕುರಿತವು (ಉದಾ: "ಮಾನವನ ಪ್ರಗತಿಗೆ ಹೆಚ್ಚು ಅವಶ್ಯಕವಾದದ್ದು ತತ್ತ್ವಶಾಸ್ತ್ರವಲ್ಲ, ಸಾಹಿತ್ಯ'); ಕೆಲವು ಸಮಕಾಲೀನ ಸಾಮಾಜಿಕ ಅಥವಾ ರಾಜಕೀಯ ಸಮಸ್ಯೆಗಳನ್ನೂ ಕುರಿತವು (ಉದಾ: 'ಭಾರತಕ್ಕೆ ಬೇಕಾದದ್ದು ಡೊಮಿನಿಯನ್ ಸ್ಟೇಟಸ್ (dominion status) ಅಲ್ಲ; ಪೂರ್ಣ ಸ್ವಾತಂತ್ರ್ಯ'); ಇನ್ನು ಕೆಲವು ಕೇವಲ ವಿನೋದಕ್ಕಾಗಿ ಚಮತ್ಕಾರ ಪ್ರದರ್ಶನಕ್ಕಾಗಿ ಮಂಡಿಸಿದ ಮಸೂದೆಗಳು (ಉದಾ: 'ಮಾನವ ನಲವತ್ತು ವರ್ಷ ತುಂಬಿದೊಡನೆ ಆತ್ಮಹತ್ಯ ಮಾಡಿಕೊಳ್ಳಬೇಕು').

ನಮ್ಮ ಯೂನಿಯನ್ನಿಗೆ ಹ್ಯಾಟ್‌ನೈಟ್‌ನ (Hat Night) ಪರಿಚಯ ಮಾಡಿಕೊಟ್ಟವರು ರಾಲೊ. ಆ ಪದ ಅರ್ಧಶತಮಾನದಿಂದೀಚೆಗೆ ನನ್ನ ಕಿವಿಗೆ ಬಿದ್ದಿಲ್ಲವಾದ್ದರಿಂದ ಅದು ಈಗ ಚಾಲತಿಯಲ್ಲಿಲ್ಲ ಎಂದು ಭಾವಿಸಿದ್ದೇನೆ. ಅದು ಚರ್ಚೆಯ ಕಾರ್ಯಕ್ರಮವಲ್ಲ, ಆಶುಭಾಷಣಗಳ ಕಾರ್ಯಕ್ರಮ. ಕಾರ್ಯದರ್ಶಿ ಎರಡು ಹ್ಯಾಟ್‌ಗಳನ್ನು (ಯಾವ ಟೋಪಿಯಾದರೂ ಆಗಬಹುದು) ಹಿಡಿದುಕೊಂಡು ಸಭಿಕರ ಮುಂದೆ ಹೋಗುತ್ತಾನೆ. ಭಾಷಣ ಮಾಡಬಯಸುವವರು ಒಂದು ಚೀಟಿಯಲ್ಲಿ ತಮ್ಮ ಹೆಸರನ್ನು ಇನ್ನೊಂದರಲ್ಲಿ ಭಾಷಣದ ವಿಷಯವನ್ನೂ ಬರೆದು ಅವನ್ನು ಟೋಪಿಗಳಲ್ಲಿ ಹಾಕತಕ್ಕದ್ದು—ಹೆಸರುಗಳಿಗೆ ಒಂದು ಟೋಪಿ, ವಿಷಯಗಳಿಗೆ ಬೇರೊಂದು ಟೋಪಿ. ಅಧ್ಯಕ್ಷನಾದವನು ಆ ಟೋಪಿಗಳನ್ನು ಚೆನ್ನಾಗಿ ಕುಲುಕಿ ಒಂದರಿಂದ ಹೆಸರನ್ನೂ ಇನ್ನೊಂದರಿಂದ ವಿಷಯವನ್ನೂ ಲಾಟರಿ ಎತ್ತುವಂತೆ ಎತ್ತಿ ಸಭಿಕರಿಗೆ ತಿಳಿಸುತ್ತಾನೆ. ಆ ಹೆಸರಿನವನು ಆ ವಿಷಯವನ್ನು ಕುರಿತು ೫ ನಿಮಿಷ ಮಾತಾಡಬೇಕು. ಅಂದ ಮೇಲೆ ಹ್ಯಾಟ್‌ನೈಟ್‌ನಲ್ಲಿ ಸಮಯಸ್ಫೂರ್ತಿಗೂ ವಿನೋದಕ್ಕೂ ಚೇಷ್ಟೆಗೂ ಬೇಕಾದಷ್ಟು ಅವಕಾಶವುಂಟು. ಒಂದು ದಿನ ಅಧ್ಯಕ್ಷರಾಗಿದ್ದ ರಾಲೊ ಮಾಡಿದ ಚೇಷ್ಟೆಗೆ ನಾನು (ಆ ವೇಳೆಗೆ ನಾನು ಅಧ್ಯಾಪಕನಾಗಿದ್ದೆ) ಗುರಿಯಾಗಬೇಕಾಯಿತು. ಟೋಪಿಗಳು ಸಭೆಯ ಸುತ್ತ ಪ್ರಯಾಣ ಮಾಡಿ ಹೆಸರುಗಳನ್ನೂ ವಿಷಯಗಳನ್ನೂ ಸಂಗ್ರಹಿಸಿ

ಅಧ್ಯಕ್ಷರ ಕೈಸೇರಿದ್ದವು. ನಾಲ್ಕೈದು ಜನ ಮಾತಾಡಿದ್ದೂ ಆಗಿತ್ತು. ಆಗ ರಾಲೊ ಒಂದು ಚೀಟಿಯನ್ನೆತ್ತಿಕೊಂಡು ಅದರಲ್ಲಿದ್ದ ಬರಹ ಸ್ಪಷ್ಟವಾಗಿಲ್ಲದಿದ್ದರೆ ಹೇಗೋ ಹಾಗೆ ಕಣ್ಣನ್ನು ಚೂಪುಮಾಡಿಕೊಂಡು ಚೀಟಿಯನ್ನು ಹತ್ತಿರದಿಂದ, ದೂರದಿಂದ, ಬೆಳಕಿಗೆ ಹಿಡಿದು, ನೋಡಿದವರಂತೆ ನಟಿಸಿದರು ಅನಂತರ "In Heaven's name, why don't these wretches learn to write a legible hand!" (ಭಗವಂತ! ಈ ಹಾಳು ಪ್ರಾಣಿಗಳು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತೆ ಬರೆಯುವುದನ್ನು ಕಲಿಯುಬಾರದೆ!) ಎಂದು ಕೃತಕ ರೋಷದಿಂದ ಅಲವತ್ತುಕೊಂಡರು. (ರಾಲೋವಿನ ಸ್ವಂತ ಕೈಬರಹವನ್ನು ಓದುವುದು ಪರಬ್ರಹ್ಮನಿಗೂ ಸಾಧ್ಯವಲ್ಲ—ಅದನ್ನು ನಾವೆಲ್ಲ ಬಲ್ಲೆವೆಂದು ರಾಲೊ ಬಲ್ಲರು!). ಆ ಮೇಲೆ "This seems to be an A, and then····an N; is it····ah yes, I got it! A.N. Murthy Rao" (ಇದೇನೋ ಎ ಇದ್ದಹಾಗಿದೆ. ಇದು....N ಆಹ್, ಪತ್ತೆಮಾಡಿದೆ! ಎ.ಎನ್. ಮೂರ್ತಿರಾವ್!) ಎಂದು ಕೂಗಿದರು. ನಾನು ತಬ್ಬಿಬ್ಬಾದೆ! ನಾನು ನನ್ನ ಹೆಸರನ್ನು ಕೊಟ್ಟೇ ಇರಲಿಲ್ಲ—ವಿದ್ಯಾರ್ಥಿಗಳಿಗೇ ಹೆಚ್ಚು ಅವಕಾಶ ದೊರೆಯಲೆಂದು ಸಾಮಾನ್ಯವಾಗಿ ಅಧ್ಯಾಪಕರು ತಮ್ಮ ಹೆಸರು ಕೊಡುತ್ತಿರಲಿಲ್ಲ. ಚೀಟಿಯಲ್ಲಿ ಅದು ಹೇಗೆ ಬಂತು? ಯಾರೋ ವಿದ್ಯಾರ್ಥಿ ಅದನ್ನು ಬರೆದಿರಬೇಕು ಎಂದುಕೊಂಡು ವೇದಿಕೆಯ ಮೇಲಕ್ಕೆ ಹೋದೆ. ಅಧ್ಯಕ್ಷ ರಾಲೊ ನನ್ನ ಕಡೆ ನೋಡಿ ತಮ್ಮ ಪ್ರಸಿದ್ಧ ಮಂಗ ನಗೆ ನಕ್ಕರು. ಆಗ ಅರ್ಥವಾಯಿತು, ಅವರ ನಾಟಕವೆಲ್ಲ.

ಇನ್ನೂ ಮಾತಾಡಬೇಕಾದ ವಿಷಯವನ್ನು ಅವರು ತಿಳಿಸಿರಲಿಲ್ಲ. "The subject, Mr President?" ಎಂದು ಕೇಳಿದಾಗ ಟೋಪಿಯಿಂದ ಒಂದು ಚೀಟಿ ತೆಗೆದು ಅಲ್ಲಿ ಇದ್ದದ್ದನ್ನೇ ಓದಿ ನನ್ನ ಕೈಗೆ ಕೊಟ್ಟರು. ವಿಷಯ 'Scepticism is better than faith' ಎಂದೋ ಏನೊ—ಅಂತೂ ಸಂದೇಹವಾದವನ್ನು ಸಮರ್ಥಿಸುವ ಮಾತು. ನಾನು ಅದನ್ನು ಸಮರ್ಥಿಸುವ ಬದಲು ವಿರೋಧಿಸಿದೆ: "ಚೀಟಿಯಲ್ಲಿ ಈ ವಿಷಯ ಬರೆದವನಿಗೆ ಅನುಭವ ಸಾಲದು. ಆವನು ಶುದ್ಧ ಎಳೆಯ ನಿಂಬೇಕಾಯಿ (ಆಗ ನನಗೂ ೩೦ ತುಂಬಿರಲಿಲ್ಲ!) ನಾನೂ ಇದುವರೆಗೆ ಸಂದೇಹವಾದಿಯೇ ಆಗಿದ್ದೆ. ದೇವರು ವಿಧಿ ಇತ್ಯಾದಿಗಳಲ್ಲಿ ನಂಬಿಕೆಯಿಲ್ಲದ ಪಾಷಂಡಿಯಾಗಿದ್ದೆ. ಇವತ್ತೂ ನನ್ನ ಕಣ್ಣು ತೆರೆಯಿತು ನೋಡಿ, ನಾನು ಇಲ್ಲಿ ಮಾತಾಡುತ್ತೇನೆಂದು ಹೆಸರು ಕೊಟ್ಟಿರಲಿಲ್ಲ—ನನ್ನ ಜೊತೆಯಲ್ಲಿ ಕುಳಿತಿರುವ ಈ ಅಧ್ಯಾಪಕರೇ ಅದಕ್ಕೆ ಸಾಕ್ಷಿ. ನೀವು ಯಾರೂ ನನ್ನ ಹೆಸರನ್ನು ಬರೆದಿರಲಾರಿರಿ. ನಮ್ಮ ಅಧ್ಯಕ್ಷರಂತೂ ಪರಮಸಾತ್ವಿಕರು, ಪ್ರಾಮಾಣಿಕರು. ಚೀಟಿಯಲ್ಲಿ ಇದ್ದದ್ದನ್ನು ಓದಿದರು; ನನ್ನ ಗುರುಗಳು ಇಲ್ಲದ್ದನ್ನು ಓದಿದರೆಂದು ನಾನೇನಾದರೂ ಭಾವಿಸಿದರೆ ದೇವರು ನನ್ನನ್ನು ನರಕಕ್ಕೆ ದಬ್ಬಿಯಾನು. ಹಾಗಾದರೆ ಆ ಚೀಟಿಯಲ್ಲಿ ನನ್ನ ಹೆಸರು ಹೇಗೆ ಬಂತು? ಇದು ದೇವರ ಅಥವಾ ಯಾವುದೋ ಒಂದು ಅನಿರ್ವಚನೀಯವಾದ ಶಕ್ತಿಯ ಕೆಲಸವಲ್ಲದೆ ಮತ್ತೇನು! ಆ ಶಕ್ತಿ ನನ್ನನ್ನು ಸಾಧನವಾಗಿ ಬಳಸುತ್ತಿದೆ (It is making me its instrument). ನಿಮ್ಮೆಲ್ಲರ ಕರ್ಮ ಸವೆಯಲೆಂದು ನನ್ನ ಭಾಷಣವನ್ನು ನಿಮಗೆ ಕೇಳಿಸುತ್ತಿದೆ! ಇಂಥ ಅನುಭವವಾದ

ಮೇಲೆ ನಾನು ಸಂದೇಹವಾದವನ್ನು ಸಮರ್ಥಿಸಲಾರೆ. ಇಂದಿನಿಂದ ನಾನು 'believer' ಎಂದು ಹೇಳಿ ನನ್ನ ಭಾಷಣವನ್ನು ಮುಗಿಸಿದೆ. ಸಂದರ್ಭ ಎಲ್ಲರಿಗೂ ಅರ್ಥವಾಯಿತು. ಎಲ್ಲರೂ—ನಾನು ಮತ್ತು ರಾಲೊ ಸೇರಿದಂತೆ—ನಕ್ಕೆವು.

ಅಂದು ರಾಲೊ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ನಾನೂ ಒಬ್ಬಿಬ್ಬರನ್ನು ಸಿಕ್ಕಿಹಾಕಿಸಿದ್ದುಂಟು. ಅದಕ್ಕೆ ಪ್ರಾಯಶ್ಚಿತ್ತವಾಗಿಯೋ ಏನೊ—ನನ್ನ ವಿದ್ಯಾರ್ಥಿನಿಯರಲ್ಲೊಬ್ಬಳು ನನ್ನನ್ನು ರಂಗಸ್ಥಳಕ್ಕೆ ಎಳೆದ ಸಂದರ್ಭ ನೆನಪಿಗೆ ಬರುತ್ತಿದೆ. ಇದು ಸುಮಾರು ೧೯೩೭–೩೮ರ ಮಾತು, ನಾನು ಅಧ್ಯಾಪಕನಾಗಿ ಒಂದು ದಶಕ ಕಳೆದ ಮೇಲೆ ನಡೆದ ಸಂದರ್ಭ—ಕಾಲೇಜಿನ ನಡುವಿನ ವಿಶಾಲವಾದ ಅಂಗಳದಲ್ಲಿ ಏರ್ಪಡಿಸಿದ್ದ ಡಿಬೇಟ್. ವಿಷಯ : 'ಈ ಸಭೆಯ ಅಭಿಪ್ರಾಯದಲ್ಲಿ, ದೇವರು ಪುರುಷರನ್ನು ಸೃಷ್ಟಿಸಿದ್ದು ತಪ್ಪು.' ಇದು ಮಸೂದೆಯ ಸಾರಾಂಶ—ಆಗ ಬಳಸಿದ್ದ ಮಾತುಗಳ ನೆನಪು ನಿಷ್ಕೃಷ್ಟವಾಗಿಲ್ಲ. ಮುಖ್ಯ ಪ್ರತಿಪಾದಕರು ಆಗ ಮಹಾರಾಣಿ ಮಹಿಳೆಯರ ಕಾಲೇಜಿನ ಪ್ರಿನ್ಸಿಪಲ್ (ಅಥವಾ ಪ್ರಾಧ್ಯಾಪಕಿಯೊ ?) ಆಗಿದ್ದಾಕೆ. ಹೆಸರು : ಮಿಸ್ ಬ್ಲ್ಯಾಕ್ (?). ಉಳಿದ ಮೂವರು ಮುಖ್ಯ ಭಾಷಣಕಾರರಲ್ಲಿ—ಅನುಮೋದಕರು, ಮುಖ್ಯ ವಿರೋಧಕರು ಮತ್ತು ಅವರ ಸಹಾಯಕರು—ಮಹಿಳೆಯರೂ ಇದ್ದರು ; ದೇವರ ತಪ್ಪಿನಿಂದಾಗಿ ಅಸ್ತಿತ್ವಕ್ಕೆ ಬಂದ ಗಂಡಸರೂ ಇದ್ದರು, ಸ್ಪೀಕರ್ ಸ್ಥಾನದಲ್ಲಿದ್ದಾಕೆ ನನ್ನ ವಿದ್ಯಾರ್ಥಿನಿಯೊಬ್ಬಳು, ಆಕೆಯ ಹೆಸರು ನೆನಪಿನಲ್ಲಿದೆ. ಆದರೆ ನೆನಪನ್ನು ನೆಚ್ಚಲಾರೆ. ಚರ್ಚೆಯನ್ನು ಕೇಳಿ ಸಂತೋಷಪಡಲು–ಅದರಲ್ಲಿ ಭಾಗವಹಿಸಲೆಂದಲ್ಲ—ನಾನೂ ತೀ.ನಂ. ಶ್ರೀಕಂಠಯ್ಯ, ಎಚ್. ಎಲ್. ಹರಿಯಪ್ಪ, ಎಂ. ವಿ. ಕೃಷ್ಣರಾವ್ ಮೊದಲಾದ ನಾಲ್ಕಾರು ಜನ ಅಧ್ಯಾಪಕರೂ ಹೋಗಿದ್ದೆವು ; ಡಾ|| ಎಂ. ಎಚ್. ಗೋಪಾಲ್ ಅವರೂ ಇದ್ದರೆಂದು ನೆನಪು—ಖಚಿತವಾಗಿ ಹೇಳಲಾರೆ. ಮುಖ್ಯ ಭಾಷಣಕಾರರೆಲ್ಲ ಮಾತಾಡಿದ್ದಾಯಿತು ; ಮಸೂದೆಯ ಪರವಾಗಿಯೂ ವಿರೋಧವಾಗಿಯೂ ನಾಲ್ಕಾರು ಜನ ಸಭಿಕರು ಮಾತಾಡಿದ್ದೂ ಆಯಿತು. ಆಗ ಇದ್ದಕ್ಕಿದ್ದ ಹಾಗೇ ಸ್ಪೀಕರ್ ಆಗಿದ್ದ ಮಾರಾಯಿತಿ "ಈಗ ಶ್ರೀ ಎ. ಎನ್. ಮೂರ್ತಿರಾಯರು ಮಸೂದೆಯ ಪರವಾಗಿ ಮಾತಾಡುತ್ತಾರೆ" ಎಂದು ಬಿಟ್ಟಳು ! ಪುರುಷರ ಸೃಷ್ಟಿಯಾದದ್ದೇ ತಪ್ಪು ಎಂದು ನಾನು ವಾದಿಸಬೇಕಾಯಿತು ! ಸಭೆಯಲ್ಲಿ ಐದು ನಿಮಿಷ ನಗುವೋ ನಗು ; ಚಪ್ಪಾಳೆ ತಟ್ಟಿದ್ದೂ ತಟ್ಟಿದ್ದೇ ! ನ್ಯಾಯವಾಗಿ ನೋಡಿದರೆ ಸ್ಪೀಕರ್ ಸ್ಥಾನದಲ್ಲಿರುವವರು ಮುಂದೊಡಗಿ ಭಾಷಣಕಾರನನ್ನು ಆಹ್ವಾನಿಸುವುದು ಸರಿಯಲ್ಲ. ಪರವಾಗಿಯೋ ವಿರೋಧವಾಗಿಯೋ ಮಾತಾಡಬೇಕೆಂದು ವಿಧಿಸುವದಂತೂ ಶುದ್ಧ ತಪ್ಪು. ಆದರೆ ಆಗಿದ್ದ ವಾತಾವರಣದಲ್ಲಿ ಈ ಬಗೆಯ ತರ್ಕ ಯಾರಿಗೆ ಬೇಕು ! ನಾನು 'ಮಾತಾಡುವುದಿಲ್ಲ' ಎನ್ನಬಹುದಾಗಿತ್ತು. ಆದರೆ ವಿನೋದದ ಅಮಲು ನನ್ನ ತಲೆಗೂ ಚೆನ್ನಾಗಿಯೇ ಏರಿತ್ತು. ಕೃತಕ ಗಾಂಭೀರ್ಯವನ್ನು ತಂದುಕೊಂಡು ಮಾತಾಡಿದೆ :

"ಇದು ಎಲ್ಲ ಗಂಡಸರೂ ಒಪ್ಪಲೇಬೇಕಾದ ಮಾತು. ವಿಷಾದದಿಂದ ಒಪ್ಪಬೇಕಾದ ಮಾತು. ಬೈಬಲ್ ಹೇಳುವ ಪ್ರಕಾರ ದೇವರು ಮೊದಲು ಗಂಡಸನ್ನು ಸೃಷ್ಟಿಸಿದನಂತೆ. ಅನಂತರ ಗಂಡಸಿನ ಮೂಳೆಯೊಂದನ್ನು ತೆಗೆದುಕೊಂಡು ಅದರಿಂದ ಹೆಂಗಸನ್ನು ಸೃಷ್ಟಿಸಿ

ದನಂತೆ. ಇದು ನಿಜವಾದರೆ ಆ ಮೂಳೆ ಬೆನ್ನುಮೂಳೆಯೇ ಇರಬೇಕು—ಗಂಡಸು ಹೆಂಗಸಿನೆದುರಿಗೆ ಬೆನ್ನು ಮೂಳೆಯಿಲ್ಲದವನಂತೆ (Like a spine-less creature) ವರ್ತಿಸುತ್ತಾನೆ. ಇದನ್ನು ಎಲ್ಲ ಗಂಡಸರೂ ನಿಟ್ಟುಸಿರು ಬಿಟ್ಟು ಒಪ್ಪುತ್ತಾರೆ; ಎಲ್ಲ ಹೆಂಗಸರೂ ಒಪ್ಪದಿದ್ದರೂ ಮನಸ್ಸಿನಲ್ಲೇ ನಕ್ಕುಕೊಳ್ಳುತ್ತಾರೆ. ಇದಿಷ್ಟು ನಿಜವೆಂದರೂ ನಾನು ಮ್ಲೇಚ್ಛದಮತಗ್ರಂಥವಾದ ಬೈಬಲಿನ ಸಾಕ್ಷ್ಯಕ್ಕೆ ಬೆಲೆ ಕೊಡಲಾರೆ. ದೇವರು ಮೊದಲು ಸೃಷ್ಟಿಸಿದ್ದು ಹೆಣ್ಣನ್ನು. ಆಕೆ ಶಕ್ತಿಸ್ವರೂಪಿಣಿ; ಆದಿಶಕ್ತಿ ಎಂಬ ಬಿರುದನ್ನು ಪಡೆದಿದ್ದಾಳೆ. ದೇವರು ಆಕೆಯನ್ನು ಸೃಷ್ಟಿಸಿದ ಮೇಲೆ ತೆಪ್ಪಸಿರಬೇಕಾಗಿತ್ತು. ಗಂಡಸನ್ನು ಸೃಷ್ಟಿಮಾಡದಿದ್ದರೆ ಗಂಡಸು ಬದುಕಿಕೊಳ್ಳುತ್ತಿದ್ದ—ವಿರೋಧಾಭಾಸವನ್ನು ಕ್ಷಮಿಸಿ! ಈಗ ಅವನ ಶೋಚನೀಯ ಪರಿಸ್ಥಿತಿಯನ್ನು ನೋಡಿ: ಅವನು ದಿನವೆಲ್ಲಾ ಬೆವರು ಸುರಿಸಿ ದುಡಿದು ಹಣ ಸಂಪಾದಿಸಬೇಕು. ಆ ಹಣವನ್ನು ಖರ್ಚು ಮಾಡುವ ಅಧಿಕಾರವನ್ನು ಹೆಂಗಸಿಗೆ ಬಿಟ್ಟುಕೊಡಬೇಕು. ಹಿಡಿ ಅನ್ನಕ್ಕಾಗಿ ಅವಳ ಕೈ ಕಾಯಬೇಕು. ದೇವರು ಹೆಂಗಸರಿಗೆ ಪರಿಣಾಮಕಾರಿಯಾದ—'ಹರಿತವಾದ' ಎನ್ನಬಾರದೇನೊ—ನಾಲಗೆಯನ್ನು ಕೊಟ್ಟಿದ್ದಾನೆ; ಗಂಡಸರನ್ನು ಮರುಳುಮಾಡುವಂಥ ರೂಪವನ್ನು ಕೊಟ್ಟಿದ್ದಾನೆ; ತಾವು ಅಬಲೆಯರು ಎಂದು ಹೇಳಿಕೊಳ್ಳುತ್ತ (ಶತಮೂಢ ಗಂಡಸು ಈ ಮಾತನ್ನು ನಂಬಿದ್ದಾನೆ!) ನಮ್ಮ ಅರಿವು ಸಹ ಇಲ್ಲದಂತೆ ನಮ್ಮ ಮೇಲೆ ಅಧಿಕಾರ ಚಲಾಯಿಸುವ ಶಕ್ತಿಯನ್ನೂ ಮನೋವೃತ್ತಿಯನ್ನೂ ಕೊಟ್ಟಿದ್ದಾನೆ; 'ಕಣ್ಣೀರು' ಎಂಬ ಬ್ರಹ್ಮಾಸ್ತ್ರವನ್ನು ಕೊಟ್ಟಿದ್ದಾನೆ. ಇವೊಂದಕ್ಕೂ ಪ್ರತ್ಯಸ್ತ್ರವನ್ನು ಗಂಡಸಿಗೆ ಕೊಡಲಿಲ್ಲ! ಹೀಗಾಗಿ ಮಹಿಳೆಯರು ನಮ್ಮನ್ನು ಮನಬಂದಂತೆ ಕುಣಿಸುತ್ತಾರೆ. ತಾನೇ ಸೃಷ್ಟಿಸಿದ ಹೆಂಗಸಿನ ಈ ಸ್ವಭಾವ ಸರ್ವಜ್ಞನಾದ ದೇವರಿಗೆ ತಿಳಿಯದೆ? ತಿಳಿದು ತಿಳಿದೂ ಅವರ ಬಲೆಗೆ ಸಿಕ್ಕಿಕೊಂಡು ನರಳಲಿ ಎಂದು ಈ ಬಡಪಾಯಿ ಗಂಡಸರನ್ನೇಕೆ ಸೃಷ್ಟಿಸಿದ? ಇದು ಅವನಲ್ಲಿ ತಪ್ಪಲ್ಲದೆ ಮತ್ತೇನು! ನಮ್ಮ ಸ್ಥಿತಿಯನ್ನು ನೋಡಿ ಹೆಂಗಸರಿಗೇ ಮರುಗುವಂತಾಗಿದೆ. "ಅಯ್ಯೋ ಪಾಪ! ಈ ಸ್ಥಿತಿಯಲ್ಲಿರುವುದಕ್ಕೆ ಗಂಡಸರನ್ನು ದೇವರು ಸೃಷ್ಟಿಸಬಾರದಾಗಿತ್ತು. ಸೃಷ್ಟಿಸಿದ್ದು ತಪ್ಪು" ಎಂದು ಅವರಿಗೇ ತೋರಿದೆ. ಆದರಿಂದಲೇ ಇಂದು ನಮ್ಮ ಮುಂದಿರುವ ನಿರ್ಣಯವನ್ನು ತಂದಿದ್ದಾರೆ. ದೇವರಿಗೆ ಗಂಡಸರ ವಿಷಯದಲ್ಲಿರುವುದು ಪುಟಕ್ಕೆ ಹಾಕಿ ತೆಗೆದ ಅಪ್ಪಟ ಕ್ರೌರ್ಯ. ಹೆಂಗಸರಲ್ಲಿರುವ ಮರುಕ ದೇವರಲ್ಲಿಲ್ಲ! ನಿರ್ಣಯವನ್ನು ನಾನು ಮನಸಾರ ಸಮರ್ಥಿಸುತ್ತೇನೆ."

ಈ ಸರಣಿಯಲ್ಲಿ ಮಾತಾಡಿ ಸ್ವಸ್ಥಾನಕ್ಕೆ ಬಂದು ಕುಳಿತೆ. ನಗು ಚಪ್ಪಾಳೆಗಳು ಮೊದಲಿಗಿಂತ ಜೋರಾಗಿ ಬಂದವು—ಗಂಡಸರಿಂದ ಮಾತ್ರವಲ್ಲ, ಹೆಂಗಸರಿಂದ ಕೂಡ. ಎರಡು ಪಕ್ಷದವರಿಗೂ ನನ್ನ ಮಾತು ಸತ್ಯವೆಂದು ತೋರಿತೇನೊ! ಅಂತೂ ನನ್ನ ಸಹೋದ್ಯೋಗಿಗಳು ಕೂಡ ಶಾಭಾಸುಗಿರಿ ಕೊಟ್ಟರು. ಅದರ ಅವಶ್ಯಕತೆಯೇನೂ ಇರಲಿಲ್ಲ—ನನಗೆ ನಾನೇ ಶಾಭಾಸುಗಿರಿ ಕೊಟ್ಟುಕೊಂಡಿದ್ದೆನಾದ್ದರಿಂದ! ನನ್ನ ಬೆನ್ನನ್ನು ನಾನೇ ತಟ್ಟಿಕೊಳ್ಳುವ ಪ್ರವೃತ್ತಿ ನನಗೆ ಸಿದ್ಧಿಸಿತ್ತೆಂದು ಒಪ್ಪಬೇಕು!

ಇಂಥ ಎಷ್ಟೋ ಸಂದರ್ಭಗಳನ್ನು ಆಗಾಗ ನೆನೆದು ಆನಂದ ಪಡುತ್ತೇನೆ. ವಿದ್ಯಾರ್ಥಿಯಾಗಿ ತರಗತಿಗಳಲ್ಲಿ ಪಡೆದ ಅನುಭವಕ್ಕಿಂತ ಯೂನಿಯನ್ನಿನ ಅನುಭವಗಳೇ ಹೆಚ್ಚು

ನೆನಪಿಗೆ ಬರುತ್ತವೆ. ಎಂ.ಎ. ಕ್ಲಾಸಿಗೆ ಬಂದ ಮೇಲಂತೂ ತರಗತಿಗಳ ಅನುಭವ ಮೊದಲಿಗಿಂತ ಹೆಚ್ಚು ನೀರಸ ಎನ್ನಿಸಿತು. ಮ್ಯಾಕಿಂಟಾಷ್, ಬಿ.ಎಂ.ಶ್ರೀ, ಎಚ್. ಎಸ್. ನಂಜುಂಡಯ್ಯನವರು, ಸ್ವಲ್ಪಕಾಲ ಎಸ್.ವಿ. ರಂಗಣ್ಣನವರು—ಇವರೆಲ್ಲರನ್ನೂ ಆದರದಿಂದ ನೆನೆಯುತ್ತೇನಾದರೂ ಯಾರೊಬ್ಬರ ಪಾಠವೂ ನನಗೆ ಅಷ್ಟಾಗಿ ರುಚಿಸಲಿಲ್ಲ. ನನ್ನ ಮೆಚ್ಚಿನ ಗುರು ರಾಲೊ ಕೂಡ ಎಂ.ಎ. ತರಗತಿಗಳಲ್ಲಿ ಬಹುಮಟ್ಟಿಗೆ ನೋಟ್ಸ್ ಬರೆಸುತ್ತಿದ್ದರು. ಆಗಿನ ಅನುಭವ ಬುದ್ಧಿಗೆ ಮಸೆಗಲ್ಲಾಗಿ ಪರಿಣಮಿಸಲೇ ಇಲ್ಲ ಎಂದು ಹೇಳಲಾರೆ—ಆಗಬಹುದಾಗಿದ್ದಷ್ಟು ಆಗಲಿಲ್ಲ. ಆದರೂ ಒಟ್ಟಿನಲ್ಲಿ ಕಾಲೇಜು, ನನ್ನ ಗುರುಗಳು, ಸಹಪಾಠಿಗಳು, ನಾಲ್ಕಾರು ಜನ ಆಪ್ತ ಸ್ನೇಹಿತರು, ಯೂನಿಯನ್ನಿನ ಕಾರ್ಯಕ್ರಮಗಳು—ಇವೆಲ್ಲದರ ಕ್ರಿಯೆಪ್ರತಿಕ್ರಿಯೆಗಳಿಂದಾಗಿ ಏರ್ಪಟ್ಟ ವಾತಾವರಣ ನನಗೆ ಅತ್ಯಂತ ಆನಂದ ಕೊಟ್ಟಿತು. ಅದಕ್ಕಿಂತ ಹೆಚ್ಚಿನ ಆನಂದವೆಂದರೆ—ನಾನು ಎಂ. ಎ. ಪ್ಯಾಸು ಮಾಡಿದ ಮೇಲೆ ಅದೇ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕಳೆದ ದಿನಗಳು.

(ಮುಂದುವರಿಯುವುದು)

---

ಗುರಿಯಿಲ್ಲದ ಸಾಧನೆಗಳಿಂದ ಏನೂ ಪ್ರಯೋಜನವಿಲ್ಲ. ಗುರಿಯಷ್ಟೇ ಸಾಧನೆಗಳು ಶುದ್ಧವಾಗಿರಬೇಕು.

ದೇಶಭಕ್ತಿ ಮೋಕ್ಷ ಮಾರ್ಗಗಳಲ್ಲಿ ಒಂದು ಮೆಟ್ಟಲು

ಗಾಂಧೀಜಿ

**ಈ ಸಂಚಿಕೆಯ ಲೇಖಕರು—**

ಸರ್ವಶ್ರೀಗಳಾದ—

1. ಕುವೆಂಪು
'ಉದಯರವಿ' 12ನೇ ಕ್ರಾಸ್, ವಿ.ವಿ. ಮೊಹಲ್ಲ, ಮೈಸೂರು–೫೭೦ ೦೦೨
2. ಪ್ರೊ॥ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
41, ಆರನೆಯ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–೫೭೦ ೦೦೯
3. ಎಚ್. ಎಚ್. ಅಣ್ಣಯ್ಯಗೌಡ
'ಅಂಜಲಿ' 96, 7ನೇ ಮುಖ್ಯ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೧೨
4. ಬಿ. ಆರ್. ಪ್ರಾಣೇಶರಾವ್
221/ಎ, 12ನೇ ಮುಖ್ಯ ರಸ್ತೆ, ಸರಸ್ವತೀಪುರಂ, ಮೈಸೂರು–೫೭೦ ೦೦೯
5. ಶಂಸ ಐತಾಳ
611, 'ಚಂದನ', 7ನೇ ಕ್ರಾಸ್, ಅನಿಕೇತನ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩
6. ಡಾ॥ ಎಚ್. ತಿಪ್ಪೇರುದ್ರಸ್ವಾಮಿ
223, 12ನೇ ಮುಖ್ಯ ರಸ್ತೆ, ಸರಸ್ವತೀಪುರಂ, ಮೈಸೂರು–೫೭೦ ೦೦೯
7. ಕೆ. ಎಸ್. ನಾರಾಯಣಸ್ವಾಮಿ
'ಶ್ರೇಯಸ್' 786/9, 8ನೇ ಕ್ರಾಸ್, ಎಂ.ಸಿ. ಲೇಔಟ್, ವಿಜಯನಗರ
ಬೆಂಗಳೂರು–೫೬೦ ೦೪೦
8. ರಾ. ವೆಂ. ಶ್ರೀನಿವಾಸಮೂರ್ತಿ
ನಂ. 183, 13ನೇ ತಿರುವು, ಜಯನಗರ, ಮೈಸೂರು–೫೭೦ ೦೧೪
9. ಎಸ್. ರಜತಾದ್ರಿ
1094, ದಕ್ಷಿಣಾದ್ರಿ, 9ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ
ಸಿದ್ಧಾರ್ಥ ಬಡಾವಣೆ, ಮೈಸೂರು–೫೭೦ ೦೧೧
10. ಟಿ. ಆರ್. ನಾಗಪ್ಪ
2904, 15ನೇ ಕ್ರಾಸ್, ಬಸವೇಶ್ವರಸ್ತೆ, ಚಾಮುಂಡಿಪುರಂ, ಮೈಸೂರು–೪
11. ಡಾ॥ ಸದ್ಯಾಶೇಖರ್
ಪುರಸಭಾ ಪ್ರಥಮದರ್ಜೆ ಕಾಲೇಜು, ಹುಣಸೂರು
12. ಸ. ರ. ಸುದರ್ಶನ, ಸಹ ಸಮನ್ವಯಾಧಿಕಾರಿ, ಜನಸಂಖ್ಯಾ ಶಿಕ್ಷಣ
ರಾಜ್ಯ ಸಂಪನ್ಮೂಲ ಕೇಂದ್ರ, 464, ಎ ಮತ್ತು ಬಿ ಬ್ಲಾಕ್
ಕುವೆಂಪುನಗಗ, ಮೈಸೂರು–೫೭೦ ೦೨೩
13. ಪ್ರೊ॥ ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪

# ಮೀನುಗಾರರಿಗೆ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ವಿನಾಯಿತಿ

## ಕಡಲಾಳದಿಂದ ಮತ್ಸ್ಯ ಸಂಪತ್ತನ್ನು ಅರಿಸಿ ತರುವ ಮೀನುಗಾರರಿಗೆ ಕರ್ನಾಟಕ ಸರ್ಕಾರದ ಸಹಾಯ ಹಸ್ತ

ಕಡಲ ಮೀನುಗಾರಿಕೆಯಲ್ಲಿ ಅದರದ್ದೇ ಆದ ಸವಾಲು ಇದೆ. ಕಡಲ ಒಡಲು ವಿಪುಲ ಮೀನುಗಾರಿಕಾ ಸಂಪತ್ತಿನಿಂದ ಕೂಡಿದ್ದರೂ ಸಮುದ್ರವು ಪ್ರಕ್ಷುಬ್ಧವಾದಾಗ ದೋಣಿ, ಬಲೆ ಹಾಗೂ ಮೀನುಗಾರರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಳ್ಳುವುದು. ರಾತ್ರಿ ಹಗಲೆನ್ನದೆ ಪ್ರಕೃತಿಯ ಶಕ್ತಿಗಳನ್ನೆದುರಿಸಿ ಸಮುದ್ರದಾಚೆಗೆ ಪಯಣಿಸಿ ಮೀನುಗಾರಿಕೆಯಲ್ಲಿ ತೊಡಗುವ ಮೀನುಗಾರರ ಬಗ್ಗೆ ಕರ್ನಾಟಕ ಸರ್ಕಾರ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. ೧೯೮೩-೮೪ ರಿಂದ ಜಾರಿಗೆ ತರಲಾಗಿರುವ ಒಳನಾಡು ಹಾಗೂ ಕರಾವಳಿ ಮೀನುಗಾರರ ವಿಮಾ ಯೋಜನೆಯಲ್ಲಿ ಮೀನುಗಾರರನ್ನು ಅವರ ಕಷ್ಟ ನಷ್ಟಗಳಿಂದ ಮುಕ್ತಗೊಳಿಸುತ್ತಿದೆ.

೧೯೮೭-೮೮ ರಲ್ಲಿ ೬೦,೦೦೦ ಮೀನುಗಾರರು ಈ ಯೋಜನೆಯ ವ್ಯಾಪ್ತಿಗೊಳಪಟ್ಟಿದ್ದು, ಅದಕ್ಕೆ ತುಂಬಲಾದ ಪ್ರೀಮಿಯಂ ಹಣ ರೂ. ೫.೪೦ ಲಕ್ಷ ಆಗಿರುತ್ತದೆ. ಕೇಂದ್ರ ಸರಕಾರ ಮತ್ತು ಕರ್ನಾಟಕ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ವಿಮಾ ಕಂಪನಿಗೆ ಮೀನುಗಾರರ ಪರವಾಗಿ ಪ್ರತಿ ವರ್ಷ ತಲಾ ರೂ. ೯ ರಂತೆ ಪ್ರೀಮಿಯಂ ಹಣ ತುಂಬಲಾಗುತ್ತಿದೆ.

ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಆಕಸ್ಮಿಕ ಅಪಘಾತಕ್ಕೀಡಾಗಿ ಪೂರ್ಣ ಅಂಗವಿಕಲರಾದ ಮೀನುಗಾರರಿಗೆ ಅಥವಾ ಮೃತರಾದ ಮೀನುಗಾರರ ಅವಲಂಬಿಗಳಿಗೆ ರೂ. ೧೫,೦೦೦ ; ವಿಮಾ ಹಣವನ್ನು ನೀಡಲಾಗುವುದು. ಅಪೂರ್ಣ ಅಂಗವಿಕಲರಾದ ಮೀನುಗಾರರಿಗೆ ರೂ. ೭,೫೦೦ ; ವಿಮಾ ಹಣ ನೀಡಲಾಗುವುದು.

ಇದೀಗ ಮೀನುಗಾರರು ನಿಶ್ಚಿಂತರಾಗಿ ಮೀನು ಹಿಡಿಯಲು ಹೋಗಬಹುದು. ಆಕಸ್ಮಿಕವಾಗಿ ಏನಾದರೂ ಅನಾಹುತವಾದಲ್ಲಿ ಅವರ ಕುಟುಂಬಗಳು ದಾರಿಪಾಲಾಗಬೇಕಾಗಿಲ್ಲ. ಮೀನುಗಾರರ ಕಷ್ಟಕಾಲದಲ್ಲಿ ಈ ವಿಮಾ ಹಣ ಅವರಿಗೆ ಸಹಾಯ ನೀಡಿ ಅವರ ಜೀವನ ಭದ್ರತೆ ಒದಗಿಸುವುದು.

ಒಳನಾಡು ಹಾಗೂ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳ ಸದಸ್ಯರಾಗಿರುವ ಎಲ್ಲಾ ಮೀನುಗಾರರು ಈ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯಲು ಅರ್ಹರು. ಹೆಚ್ಚಿನ ಮಾಹಿತಿಯನ್ನು ಸಮೀಪದ ಮೀನುಗಾರಿಕಾ ಅಧಿಕಾರಿಗಳಿಂದ ಪಡೆಯಬಹುದು.

"ಕರ್ನಾಟಕ ವಾರ್ತೆ"

# ಲೇಖಕರು ಮತ್ತು ಲೇಖನಗಳು



---

ಪ್ರತಿಯೊಂದು ಹೆಸರಿನ ಮುಂದೆ ಶ್ರೀ ಅಥವಾ ಶ್ರೀಮತಿ ಎಂದು ಸೇರಿಸಿಕೊಂಡು ಓದಿಕೊಳ್ಳಬೇಕಾಗಿ ವಿನಂತಿ.



ಕೆ. ಪಿ. ಪೂರ್ಣಚಂದ್ರ ತೇಜ

ಫೋಟೋ ಕೃಪೆ: ಅರ್ಕೇಶ್, ಮೈಸೂರು.